ಭಾರಿಯ ಪರಿಮುಖವಾಗಿ ತಿಳಿಸಿದರೂ ಸ್ಪೇನಿನವರು ಅವರ ಹೇಳಿಕೆ ಗವನಕ್ಕೆ ತಾರದೆ ಪ್ರಜೆಗಳನ್ನು ಹಿಂಸೆಮಾಡುವದನ್ನು ಬಿಡದೆ ಇರುವಾಗ ಅಮೆರಿಕದವರು ಸ್ಪೇನಿನವರ ಕತ್ತಿಯಿಂದ ಒಂದು ಜನಾಂಗವೇ ಅಳಿದು ಹೋಗುತ್ತದಲ್ಲಾ, ತಾವು ಬಲವಂತರಾಗಿರುತ್ತಾ ದುರ್ಬಲನ ಪಕ್ಷವನ್ನು ಹಿಡಿದು ಅವನನ್ನು ರಕ್ಷಣ್ಯ ಮಾಡುವದು ಧರ್ಮಕೃತ್ಯವೆಂದು ಮನವರಿತು ಕೂಬದವರನ್ನು ಸ್ಪೇನಿನ ಕೈಯಿಂದ ಬಿಡಿಸಿ ಅವರಿಗೆ ಸ್ವರಾಜ್ಯಭಾರವನ್ನು ಕೊಡಿಸಬೇಕು ಎಂಬದಾಗಿ ಆಲೋಚಿಸಿ ಸ್ಪೇನಿನವರೊಡನೆ ಯುದ್ಧವನ್ನು ಪ್ರಾರಂಭಿಸಿದರು. ಆದ್ದರಿಂದ ಈ ಯುದ್ಧವು ಧರ್ಮಯುದ್ಧವೇಹೊರತು ರಾಜ್ಯಲೋಭದಿಂದಾಗಲಿ ದ್ರವ್ಯಲೋಭದಿಂದಲಾಗಲಿ ವಹಿಸಿಕೊಂಡ ಯುದ್ಧವಲ್ಲಾ. ಕೂಬಾದ್ವೀಪದಂತೆಯೇ ಚೀನಿಸಮುದ್ರದ ದಕ್ಷಿಣದಲ್ಲಿ ಫಿಲಿಫೈನ್ ಎಂಬುವ ದ್ವೀಪಸಂಘಾತವೂ ಸ್ಪೇನಿನವರಿಗೆ ವಳಿತವಾಗಿರುತ್ತದೆ. ಅಮೆರಿಕದವರು ಕೂಬಾದ್ವೀಪಕ್ಕೆ ತಮ್ಮ ಸೈನ್ಯವನ್ನು ಕಳಿಸಿ ಯುದ್ಧನಡಿಸುವದು ಪ್ರಯಾಸವಾದದರಿಂದ ಮೊದಲು ಸ್ಪೇನಿನ ಸಮರನಾವೆಗಳನ್ನು ಪರಾಜಯ ಪಡಿಸಬೇಕೆಂದು ಯೋಚಿಸಿ ಸ್ಪೇನಿನವರ ಸಮರನಾವೆಗಳು ಫಿಲಿಪ್ಪೈನದ್ವೀಪಗಳ ಬಂದರಿನಲ್ಲಿದ್ದದರಿಂದ ತಮ್ಮ ಸಮರನಾವೆಗಳನ್ನು ಅಲ್ಲಿಗೆ ಕಳಿಸಿದರು. ಅಲ್ಲಿ ಉಭಯ ಪಕ್ಷದವರ ನಾವೆಗಳಿಗೆ ಜಗಳ ಹತ್ತಿ ಒಂದೇ ದಿನದಲ್ಲಿ ಅಮೆರಿಕದವರು ಆ ನಾವೆಗಳನ್ನು ಒಡೆದು ಧ್ವಂಸಮಾಡಿದರು; ಅಲ್ಲಿಯ ಪ್ರಜೆಗಳೂ ಕೂಬದವರಂತೆ ಸ್ಪೇನಸರಕಾರವನ್ನು ತೆಗೆಧಾಕಬೇಕೆಂದು ಬಹುಕಾಲದಿಂದ ಕಾಟಕಾಯಿ ಮಾಡುತ್ತಿದ್ದರು. ಅಮೆರಿಕದವರು ಸಮುದ್ರದಲ್ಲಿ ಕಾಳಗ ಮಾಡುವಾಗ್ಯೆ ದೇಶದ ಒಳಗಿನ ಮಾರ್ಮಲೆಯವರು ಒಳಗಿನಿಂದ ಯುದ್ಧ ನಡಿಸುವವರಾದ್ದರಿಂದ ಆ ದ್ವೀಪಗಳ ಮುಖ್ಯ ಪಟ್ಟಣವಾದ ಮನಿಲ್ಲಬಂದರವು ಸ್ಪೇನಿನವರ ಕೈಗೆ ತಪ್ಪಿ ದ್ವೀಪಸಮುದಾಯವೆಲ್ಲಾ ಅಮೆರಿಕದವರಿಗೆ ಒಳಪಡುವದಾಯಿತು. ಇತ್ತಲಾಗೆ ಅಮೆರಿಕದವರು ಕೂಬಾದ್ವೀಪದಲ್ಲಿ ಯುದ್ಧವನ್ನು ಪ್ರಾರಂಭಿಸುವದಕ್ಕೆ ತಮ್ಮ ಸೈನ್ಯವನ್ನು ಕಳಿಸಿ ಮುಖ್ಯ ಪಟ್ಟಣವಾದ ಸಂತಿಯಾಗೋವಿನ ಬಲವಾದ ಕೋಟೆಯನ್ನು ವಶಮಾಡಿಕೊಂಡರು; ಒಳಗಿದ್ದ ಸ್ಪೇನದಳವು ಆಯುಧಗಳನ್ನು ಒಪ್ಪಿಸಿ ಸ್ವದೇಶಕ್ಕೆ ತೆರಳಿತು. ಈ ಯುದ್ಧದಲ್ಲಿ ಇಪ್ಪತ್ತಾರುಸಾವಿರ ಸೈನಿಕರನ್ನು ಅಮೆರಿಕದವರು ಸೆರೆ ಹಿಡಿದರು; ಸ್ಪೇನಿನವರು ಯುದ್ಧ ಮುಂದರಿಸಲಾರದೆ ಸಂಧಾನಕ್ಕೆ ಬಂದು ಕೂಬಾ, ಪುಯರ್ತೊರಿಕೊ ಎಂಬೆರಡು ದ್ವೀಪಗಳನ್ನು ಬಿಟ್ಟುಕೊಟ್ಟರು. ಈ ದ್ವೀಪಗಳಲ್ಲಿ ಕ್ರಮವಾದ ರಾಜ್ಯವ್ಯವಸ್ಥೆಯನ್ನು ಮಾಡುವ ಕಾರ್ಯಭಾಗವನ್ನು ಅಮೆರಿಕದವರು ವಹಿಸಿಕೊಂಡಿದ್ದಾರೆ.

ಚೀನಿಸಾಮ್ರಾಜ್ಯದ ದಕ್ಷಿಣಪೂರ್ವಸೀಮೆಯಲ್ಲಿ ಭಾರಿ ದಂಗೆ ಎದ್ದದೆ. ದಂಗೆಗಾರರ ಪಡೆ ಬಲವಾಗಿ ಕೆಲವು ಊರುಗಳನ್ನು ಸ್ವಾಧೀನ ಪಡಿಸಿಕೊಂಡು ಅರಸ್ಥಾನದ ಸೈನ್ಯವನ್ನು ಹಿಮ್ಮೆಟ್ಟಿಸಿತು. ಈಗ ಚೀನವನ್ನು ಆಳುವ ಮಹಾರಾಜನು ಹುಟ್ಟು ಚೀನಿಯವನಲ್ಲ, ಮಾಂಚೂರಿಯ ವಂಶಸ್ಥನು; ಈ ರಾಜವಂಶವನ್ನು ನಿವೃತ್ತಿ ಮಾಡಿ ಪಾಶ್ಚಿಮಾತ್ಯ ಅರಸ್ಥಾನಗಳ ರಾಜ್ಯವ್ಯವಸ್ಥೆಯ ಪ್ರಕಾರ ಹೊಸ ರಾಜ್ಯಪದ್ಧತಿಯನ್ನು ಸ್ಥಾಪ್ಯ ಮಾಡಬೇಕೆಂದು ಹಾರೈಸುವವರು ಚೀನದಲ್ಲಿದ್ದಾರೆ; ಇವರು ಗುಪ್ತದಲ್ಲಿ ದಂಗೆಗಾರರಿಗೆ ಒತ್ತಾಸೆ ಮಾಡುತ್ತಾರಂತೆ.

ಜಿ. ಫ್ಲೈದರರ್ ದೊರೆ.

ಪಂಚಾಂಗದ ಮೊದಲನೇ ಪಾನಿನಲ್ಲಿ ಯಾರ ಭಾವಚಿತ್ರ ತೋರಿಸಿದೆಯೋ, ಆ ಮನುಷ್ಯರು ಯಾರು ಎಂದು ವಾಚಕರು ಸಹಜವಾಗಿ ಪ್ರಶ್ನಿಸಬಹುದಾದ್ದರಿಂದ ಅವರ ಜೀವಿತವೃತ್ತಾಂತವನ್ನು ಸಂಕ್ಷೇಪವಾಗಿ ಈಗ ವಿವರಿಸುವೆವು. ಫ್ಲೈದರರ್ ದೊರೆಯವರು ಜರ್ಮನಿದೇಶದಲ್ಲಿ ೧೮೨೯ನೇ ವರ್ಷದಲ್ಲಿ ಜನಿಸಿದರು. ಭಕ್ತಿವಂತರಾದ ಅವರ ತಂದೆತಾಯಿಗಳು ಅವರನ್ನು ಹದಿನಾಲ್ಕು ವರ್ಷದಲ್ಲೇ ವೃತ್ತಿಯನ್ನು ಕಲಿಯಬೇಕೆಂದು ಉದ್ದೇಶಿಸಿದ್ದರಿಂದ, ಅವರು ಮೊದಲು ಜವಳಿ ಹರಡನಲ್ಲಿದ್ದು, ಜವಳಿವ್ಯಾಪಾರದ ಅನುಭವವನ್ನು, ಅನಂತರ ಹತ್ತಿಯ ರೇಶಿಮೆಯ ಕಾರಖಾನೆಯಲ್ಲಿ ಕೆಲವು ಕಾಲವಿದ್ದು, ಆ ಕಸಬಿನ ಅನುಭವವನ್ನು ಪಡಕೊಂಡರು. ಹೀಗಿರುವಾಗ ಆ ಕಾಲದಲ್ಲಿ ಬಾಸಲ್ ಮಿಶನಿಗೆ ಅಧ್ಯಕ್ಷರಾಗಿದ್ದವರು ಹಿಂದುಸ್ಥಾನದಲ್ಲಿ ದಕ್ಷಿಣಕನ್ನಡ ಮಲೆಯಾಳಸೀಮೆಗಳಲ್ಲಿ ಮಿಶನಿನವರು ಸ್ಥಾಪ್ಯಮಾಡಿದ ಕಾರಖಾನೆಗಳನ್ನು ಆಡಳಿಸುವದಕ್ಕೆ ಯೋಗ್ಯನಾದ ಮನುಷ್ಯನು ಬೇಕೆಂದು ತಿಳಿದು, ೧೮೫೩ಲ್ಲು ಫ್ಲೈದರರ್ ದೊರೆಯನ್ನು ಮಂಗಳೂರಿಗೆ ಕಳಿಸಿಕೊಟ್ಟರು. ೧೮೫೩ಲ್ಲಿ ಮಿಶನ ಅಗ್ರಸ್ಥರು ಅವರನ್ನು ಸಂಘದ ಭಂಡಾರಿಕರಾಗಿ ನೇಮಿಸಿದರು. ಅವರು ಈ ಉದ್ಯೋಗದಲ್ಲಿರುವಾಗ ಆಯವ್ಯಯಗಳಲ್ಲಿ ಚಾತುರ್ಯವನ್ನೂ ವಿಶ್ವಸ್ತತೆಯನ್ನೂ ಪರಿಜನರ ಮೇಲೆ ದಯೆಯನ್ನೂ ಪ್ರೀತಿಯನ್ನೂ ತೋರಿಸುವವರಾಗಿ, ಹದಿನೇಳು ವರ್ಷಗಳನ್ನು ಕಳೆದ ಮೇಲೆ, ಕುಟುಂಬಸಮೇತವಾಗಿ ಸ್ವದೇಶಕ್ಕೆ ಪಯಣಮಾಡಿ, ಎರಡು ವರ್ಷಗಳು ಆರಾಮಪಟ್ಟು, ಪುನಹಾ ೧೮೭೨ಲ್ಲು ಮಂಗಳೂರಿಗೆ ಬಂದು, ಮೊದಲಿನ ಮಣಿಹವನ್ನೇ ನಡಿಸುತ್ತಿದ್ದರು. ಈ ಸಾರಿ ಬಂದವರು ಎಂಟು ವರ್ಷಗಳು ಮಾತ್ರವಿದ್ದು, ವೃದ್ಧಾಪ್ಯ ಸವಿಾಪಿಸಿದ್ದರಿಂದ, ೧೮೮೦ಲ್ಲು ಸ್ವದೇಶಕ್ಕೆ ತೆರಳಿದರು. ಅಲ್ಲಿ ಅವರು ಹಿಂದುಸ್ಥಾನದಲ್ಲಿಯೂ ಅಫ್ರಿಕದ ಪಶ್ಚಿಮಕರಾವಳಿಯಲ್ಲಿಯೂ ಮಿಶನಿನವರು ಸ್ಥಾಪಿಸಿದ ನಾನಾ ಕೈಗಾರಿಕೆ ಕಾರಖಾನೆಗಳ ಮೇಲ್ವಿಚಾರಣೆ ನೋಡುತ್ತಾ ಅವು ಸಮವಾಗಿ ನಡೆಯುವಂತೆ ಅಗತ್ಯವಾದ ಏರ್ಪಾಟು ಮಾಡುತ್ತಾ ಬಹಳ ಚಟುವಟಿಕೆಯಿಂದ ಎಲ್ಲಾ ವ್ಯವಸ್ಥೆ ಪೂರೈಸುತ್ತಿದ್ದದರಿಂದ, ಮಿಶನಸಂಘದವರು ಅವರ ಮೇಲೆ ಸಂಪೂರ್ಣ ಭರವಸವಿಟ್ಟು, ಅವರನ್ನು ಸಂಘದ ಸದಸ್ಯರಾಗಿ ಆರಿಸಿಕೊಂಡರು; ಅವರು ಹೆಚ್ಚು ಮಾತಾಡುವವರಲ್ಲದಿದ್ದರೂ ಸಮಿತಿಯಲ್ಲಿ ಕೂತುಕೊಂಡಾಗ, ಅವರು ಹೇಳುತ್ತಿದ್ದ ಆಯಾ ಆಲೋಚನೆ ಪಕ್ವವಾದದ್ದೆಂದು ಸಂಘದವರು ಬಹುಮಾನಿಸುವರು. ಬಾಹಿರದಲ್ಲಿ ಆಡಂಬರವಿಲ್ಲದೆ, ನಮ್ರಭಾವವನ್ನು ಧರಿಸಿಕೊಂಡು, ಅಂತರ್ಯದಲ್ಲಿ ಪರಿಷ್ಕೃತ ವಿವೇಕವೂ ಕಾರ್ಯಾಸಕ್ತಿಯೂ ಉಳ್ಳವರಾದದ್ದು ಸಹಾ, ಅವರು ಸರ್ವರಿಂದ ಸನ್ಮಾನವನ್ನು ಹೊಂದುವದಕ್ಕೆ ಕಾರಣವಾಯಿತು. ಹೀಗೆ ಅವರು ನಾಲ್ವತ್ತೈದು ವರ್ಷಗಳು ತಮ್ಮ ದೊಡ್ಡ ಉದ್ಯೋಗವನ್ನು ಪೂರೈಸಿದ ಮೇಲೆ, ಅರ್ವತ್ತೆಂಟು ವ್ರಾಯದವರಾಗಿ ಇದೇ ಕಳದ ಮಾರ್ಚಿತಿಂಗಳಲ್ಲಿ ಕೆಲವು ದಿನಗಳು ಕಸಾರಿಕೆಯಿಂದ ಮಲಗಿ ಮೇಲ್ಲೋಕಕ್ಕೆ ಪ್ರಯಾಣ ಮಾಡಿದರು. ಮಂಗಳೂರಿನಲ್ಲಿ ಅವರು ಸಾವಕಾರದೊರೆ ಎಂಬ ಹೆಸರಿನಿಂದ ಪ್ರಖ್ಯಾತರಾಗಿದ್ದದ್ದಲ್ಲದೆ, ಮ್ಯುನಿಸಿಪಾಲಿಟಿಯಲ್ಲಿ ಸದಸ್ಯತ್ವವನ್ನು ಹೊಂದಿದ್ದರೆಂಬುವದು ಇನ್ನು ಅನೇಕರಿಗೆ ನೆನಪಿರಬಹುದು.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರೈಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚ-ಎಪ್ರಿಲಲ್ಲಿ ಪ್ರಾರಂಭವಾಗುವದು
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "
4. ಫಸಲಿ ಜುಲಾಯಿ 1ನೇ ತಾರೀಕಿಗೆ "
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೪ ದಿವಸಕ್ಕೆ ಮುಂದಾಗಿ "

ಕರುಣಾಪರತ್ವ.

ಯೇಸು ಕ್ರಿಸ್ತಸ್ವಾಮಿಯವರು ಬಹು ಜನರು ತಮ್ಮ ಬಳಿಗೆ ಬರುವದನ್ನು ಕಂಡು, ಸಣ್ಣ ಗುಡ್ಡವನ್ನೇರಿ ತಮ್ಮ ಶಿಷ್ಯರೊಡನೆ ಕೂತುಕೊಂಡರು. ಆವಾಗ್ಯೆ ಅವರು ಜನ ಸಮೂಹಕ್ಕೆ ದಿವ್ಯ ಬೋಧನೆ ಮಾಡಿದರು. ಬೋಧನೆ ಮಾಡುವಾಗ್ಯೆ ಕೇಳುತ್ತಿದ್ದ ವರಲ್ಲಿ ಒಬ್ಬ ಮನುಷ್ಯನು ಜನರ ಮಧ್ಯದಲ್ಲಿ ಕೂಡ್ರದೆ, ಬಹು ದೂರದಲ್ಲಿ ಒಂದು ಮೂಲೆಯಲ್ಲಿ ಕೂತು ಕೇಳುತ್ತಿದ್ದನು; ಅವನಿಗೆ ಜನರ ಸಂಪರ್ಕಕ್ಕೆ ಬರಲು ಅಪ್ಪಣೆ ಇರಲಿಲ್ಲಾ. ಯಾಕೆ? ಅವನು ಹೊಲೆಯನಾಗಿದ್ದದರಿಂದಲೋ? ಅಲ್ಲಾ; ಉತ್ತಮ ಜಾತಿಯವನು ನೀಚಜಾತಿಯವನು ಎಂಬ ಭೇದವು ಆ ಕಾಲದಲ್ಲಿ ಆ ದೇಶದಲ್ಲಿ ಇರ ಲಿಲ್ಲಾ. ಅವನು ಕುಷ್ಠರೋಗಿಯಾದ್ದರಿಂದ, ಜನರ ಸಂಪರ್ಕಕ್ಕೆ ಬಾರದೆ, ದೂರ ನಿಲ್ಲ ಬೇಕಾದನು. ಯಾಕಂದರೆ ಮೋಶೆಯ ಧರ್ಮಶಾಸ್ತ್ರದಲ್ಲಿ ಕುಷ್ಠರೋಗಿಯಾದವನು ಮನೆಮಾರನ್ನೂ ಬಂಧುಬಳಗದವರನ್ನೂ ಅಗಲಿ, ವನಪ್ರದೇಶದಲ್ಲಿ ಏಕಾಂತದಲ್ಲಿ ಇರ ಬೇಕೆಂದೂ ಊರೊಳಗೆ ಬರಬಾರದೆಂದೂ ಯಾರಾದರೂ ಅಪ್ಪಿತಪ್ಪಿ ತನ್ನನ್ನು ಮು ಟ್ಟದಂತೆ, ಅಶುದ್ಧನು ಅಶುದ್ಧನು ಎಂತ ಒದರಬೇಕೆಂದೂ ಕಟ್ಟಾಜ್ಞೆ ಇತ್ತು. ಈ ಆಜ್ಞೆಯ ಮೇರೆಗೆ ಮೇಲೆ ಹೇಳಿದ ಕುಷ್ಠರೋಗಿ ದೂರದಲ್ಲಿ ಕೂತು, ಸ್ವಾಮಿಯವರ ಪ್ರಸಂಗ ಕೇಳಬೇಕಾದನು. ಇಂಥಾ ಅವ್ಯತೋಪಮಾನವಾಕ್ಯಗಳನ್ನು ನುಡಿದ ವನು ಸಾಮಾನ್ಯ ಮನುಷ್ಯನಲ್ಲಾ, ಸಾಕ್ಷಾದ್ದೇವರಾಗಿರಬೇಕು, ಆತನು ಕುಷ್ಠರೋ ಗವನ್ನು ವಾಸಿಮಾಡ ಶಕ್ತನು, ನನ್ನಂಥಾ ಅನಾಥ ಪ್ರಾಣಿಯ ಮೇಲೆ ಆತನು ಕರು ಣೆ ಮಾಡುವವನೇ ಎಂದು, ಆ ಮನುಷ್ಯನು ಹೃದಯದಲ್ಲಿ ನಿರ್ಧಾರಿಸಿ ಧೈರ್ಯ ಮಾಡಿ, ಸ್ವಾಮಿಯವರು ಉಪದೇಶವನ್ನು ಮುಗಿಸಿ ಗುಡ್ಡದಿಂದ ಇಳಿದು ಬರುವಾಗ ಮುಂದೆ ಬಂದು, ಅವರ ಮುಂದೆ ಮುಂಡಿ ಹಾಕಿ, ಸ್ವಾಮಿ, ನಿನಗೆ ಮನಸ್ಸಿದ್ದರೆ ನನ್ನ ನ್ನು ಶುಚಿಮಾಡಬಲ್ಲಿ ಅಂತ ಹೇಳಿದನು. ಮನುಷ್ಯನ ಅಂತರ್ಗತ ಭಾವವನ್ನು ದಿವ್ಯದೃಷ್ಟಿಯಿಂದ ನೋಡಿ ತಿಳಿಯುವ ರಕ್ಷಕರು, ಅವನ ಪ್ರಾರ್ಥನೆಯನ್ನು ಚಿತ್ತಕ್ಕೆ ಸರಿತಂದು, ಅವನ ಕುಷ್ಠರೋಗಕ್ಕೆ ಹೇವರಿಸದೆ, ಇವನನ್ನು ಮುಟ್ಟಿದರೆ ತಾನೂ ಅಪವಿತ್ರನಾಗುತ್ತೇನೆ, ಸಜೇಲಸ್ನಾನ ಮಾಡಬೇಕಾದೀತಲ್ಲಾ ಎಂದು ಅಲಸದೆ ಅವನನ್ನು ಮುಟ್ಟಿ, ನನಗೆ ಮನಸ್ಸುಂಟು ಶುದ್ಧನಾಗಿರು ಎಂದು ನುಡಿದರು. ಈ ವಾಕ್ಯವನ್ನು ಆ ಕುಷ್ಠರೋಗಿ ನಮ್ರತೆಯಿಂದ ಶಿರಸಾಮಾನ್ಯ ಮಾಡಿದ್ದರಿಂದ, ತನ್ನ ವಿಶ್ವಾಸದ ಫಲವಾಗಿ ಕಾಮಿತಾರ್ಥ ಫಲವನ್ನು ಪಡೆದನು. ರಕ್ಷಕರ ವಾಕ್ಯದೊಡನೆ ಕ್ಷೇಮಕಾರಕ ಗುಣವು ಅವನೊಳಗೆ ಸೇರಿ ಅವನು ಕೇವಲ ಶುದ್ಧನಾದನು.

ನಮ್ಮ ರಕ್ಷಕರು ಒಮ್ಮೆ ಗಲಿಲಾಯಸೀಮೆಯಿಂದ ಪಯಣವಾಗಿ ಇನ್ನೊಂದು ಊರಿಗೆ ಹೋಗುವಾಗ, ದಾರಿಯಲ್ಲಿ ಹತ್ತು ಮಂದಿ ಕುಷ್ಠಿಗಳು ಅವರನ್ನು ಕಂಡು, ಹತ್ತರ ಬರುವದಕ್ಕೆ ಅಂಜಿ ಬಹುದೂರದಲ್ಲಿ ನಿಂತು: ಯೇಸು, ಅಯ್ಯಾ, ಕರುಣಿಸು, ನಮ್ಮ ಸಂಕಟವನ್ನು ಪರಿಹರಿಸು ಸ್ವಾಮಿ ಎಂದು ಒದರುವದನ್ನು ಕೇಳಿ ಅವರು ಆ ರೋಗಿಗಳ ಮೇಲೆ ಕನಿಕರಪಟ್ಟು, ನಿಮ್ಮ ಇಷ್ಟಾರ್ಥವು ಸಫಲವಾಗಲಿ ಎಂದು ಹರಕೆ

ಮಾಡಿದಾಗಅವರು ಸ್ವಸ್ಥರಾಗಿ ತಂತಮ್ಮ ಮನೆಗಳಿಗೆ ನಡೆದರು. ಇಂಥಾ ಕುಷ್ಠರೋಗಿಗಳನ್ನು ಹಲವರನ್ನು ಅವರು ವಾಸಿ ಮಾಡಿದರು. ನೀನು ಮೆಸ್ಸೀಯನು ಅಂದರೆ ಜಗದ್ರಕ್ಷಕನಾಗಿದ್ದಿ ಎಂದು ಅರಿಯುವದಕ್ಕೆ ಪ್ರಮಾಣಗಳೇನು ಎಂದು ಒಬ್ಬ ಮಹಾತ್ಮನು ಅವರನ್ನು ಕೇಳಲಾಗಿ, ಕುಂಟರಿಗೆ ಕಾಲು ಕೊಟ್ಟದ್ದೂ ಕುರುಡರಿಗೆ ದೃಷ್ಟಿ ಕೊಟ್ಟದ್ದೂ ರೋಗಿಗಳನ್ನು ವಾಸಿಮಾಡಿದ್ದೂ ಸತ್ತವರನ್ನು ಎಬ್ಬಿಸಿದ್ದೂ ಮೊದಲಾದ ಮಹಾ ಮಹಾ ಕೃತ್ಯಗಳನ್ನು ಸಾಕ್ಷಿಯಾಗಿ ತರುವಾಗ, ತಾನು ಕುಷ್ಠರೋಗಿಗಳನ್ನು ವಾಸಿಮಾಡುತ್ತೇನೆ ಎಂದೂ ಅವರು ಹೇಳಿದರು. ಅಂದಿನಿಂದ ಕುಷ್ಠರೋಗಿಗಳಿಗೆ ಶುಭವಾದ ಹೊಸಕಾಲವು ಪ್ರಾರಂಭವಾಯಿತೆಂದೆನ್ನಬಹುದು.

ಕುಷ್ಠವು ಅತಿ ಅಸಹ್ಯವಾದ ಹೊಲಸು ರೋಗವು; ಆ ರೋಗ ಹಿಡಿದವನನ್ನು ಎಲ್ಲರೂ ದೂರ ಮಾಡುತ್ತಾರೆ; ಅವರು ತಾವೇ ಮನುಷ್ಯರ ಒಡನಾಟದಿಂದ ದೂರ ವಾಗುತ್ತಾರೆ; ಆದರೆ ಅಂಥವರನ್ನು ಕಂಡರೆ, ಅವರ ದುರವಸ್ಥೆಯನ್ನು ಮನಸ್ಸಿಗೆ ತಂದು, ಕರುಣೆ ಪಡುವವರ್ಯಾರು? ಅವರು ಪ್ರಾಚೀನಜನ್ಮದಲ್ಲಿ ಗೈದ ಕರ್ಮವಿಪಾಕವನ್ನು ಇಲ್ಲಿ ತಿನ್ನುತ್ತಾರೆ, ಯಾರೇನು ಮಾಡುವರು ಎಂದು ನಮ್ಮ ದೇಶಸ್ಥರು ಅನ್ನುವರು. ಕೆಲವು ಊರುಗಳಲ್ಲಿ ಕುಷ್ಠರೋಗಿಗಳನ್ನು ಮನೆಯಲ್ಲಿ ಇರಗೊಡದೆ, ಊರ ಹೊರಗೆ ಕಳುಹಿಸುತ್ತಾರೆ. ದೊಡ್ಡ ಪಟ್ಟಣಗಳಲ್ಲಿ ಬೇರೆ ಬೇರೆ ಹಳ್ಳಿಗಳಿಂದ ಬಂದ ಕುಷ್ಠರೋಗಿಗಳು ಬಿಕ್ಕೆ ಬೇಡುವದಕ್ಕೆ ಕುಂಟುತ್ತಾ ಕುಂಟುತ್ತಾ ಮನೆಮನೆಗೆ ತಿರುಗಾಡುವರು. ನಮ್ಮದೇಶದಲ್ಲಿ ಧನವಂತರೂ ಪರೋಪಕಾರಸ್ಥರೂ ಬಹುಜನರಿದ್ದಾಗ್ಯೂ ಇಂಥಾ ಬಡ ಪ್ರಾಣಿಗಳನ್ನು ಕಂಡಾಬಟ್ಟೆ ಅಡ್ಡಾಡಗೊಡದೆ, ಒಂದೇ ಸ್ಥಳದಲ್ಲಿ ಸಾಕಿ ಸಲಹುವದಕ್ಕೆ ಧರ್ಮಶಾಲೆ ಕಟ್ಟಿಸಬೇಕೆಂಬ ಆಲೋಚನೆ ಯಾವರ ಹೃದಯದಲ್ಲಿಯೂ ಹುಟ್ಟಲಿಲ್ಲಾ; ಮನೆಗೆ ಬಂದವರನ್ನು ದೂರ ನಿಲ್ಲಿಸಿ, ಮುಷ್ಟಿಧಾನ್ಯವೋ ದುಡ್ಡುರುವಿಯೋ ಹಾಕಿ ಕಳುಹಿಸುವರು. ಇಷ್ಟರಲ್ಲೇ ಹಲವರು ಕೃತಕೃತ್ಯರಾದೆವೆಂದು ಭಾವಿಸುವರು. ಅವರು ರಾತ್ರಿ ಎಲ್ಲಿ ಕಳೆಯುತ್ತಾರೆ, ಅವರಿಗೆ ಯಾರು ಅಡಿಗೆ ಮಾಡಿ ಹಾಕುತ್ತಾರೆ ಎಂಬೀತರದ ಚಿಂತೆ ಯಾರೂ ಮಾಡುವದಿಲ್ಲಾ. ಹೀಗೆ ಆ ಬಡ ಪ್ರಾಣಿಗಳು ಯಾರಿಗೂ ಬೇಕಿಲ್ಲದವರಾಗಿಯೂ ಅನಾಥರಾಗಿಯೂ ಯಾರಿಂದಲೂ ಕರುಣೆ ಅನುಭವಿಸದೆಯೂ ದಿನಕಳೆದು ಆಜೆ ಲೋಕಕ್ಕೆ ತೆರಳುವರು.

. ಲೋಕದಲ್ಲಿ ಮನುಷ್ಯರು ಅನುಭವಿಸುವ ಹಲವು ಬಗೆಯ ರೋಗರುಜನೆಗಳನ್ನು ಕಂಡು, ಅನುತಾಪಪಟ್ಟು ಹೃದಯವನ್ನು ಕರಗಿಸಿಕೊಂಡು, ಅಂಥವರಿಗೆ ತನ್ನಿಂದಾಗುವ ಸಹಾಯವನ್ನು ಎಷ್ಟು ಖರ್ಚಾದರೂ ಧಾವತಿಯಾದರೂ ಮಾಡಲೇ ಬೇಕು ಎಂಬುವ ಈ ಕರುಣಾರ್ದ್ರಭಾವವನ್ನು ಮನುಷ್ಯರೊಳಗೆ ಹುಟ್ಟಿಸುವದು ಕ್ರೈಸ್ತಧರ್ಮವೇ. ಕ್ರೈಸ್ತಧರ್ಮದ ಸ್ಥಾಪಕನಾದ ಯೇಸು ಕ್ರಿಸ್ತನು ಸ್ವಾರ್ಥರಹಿತ ಉಪಕಾರ ಕೃತ್ಯಗಳನ್ನು ಮಾಡುನದಕ್ಕೆ ಒಳ್ಳೇ ಮೇಲುಪಂಕ್ತಿ ಹಾಕಿಕೊಟ್ಟಿದ್ದಾನೆ. ಕ್ರಿಸ್ತನ ವಿಶ್ವಾಸಿಗಳು ಆತನು ಮೇಲುಪಂಕ್ತಿ ಹಾಕಿಕೊಟ್ಟಂತೆ ತಾವೂ ನಡೆಯಬೇಕೆಂದು ಪ್ರಯಾಸ ಪಟ್ಟಂತೆ, ನಾನಾ ರೋಗಿಗಳನ್ನೂ ಅನಾಥರನ್ನೂ ಆರೈಕೆ ಮಾಡತಕ್ಕ ಧರ್ಮಕೃತ್ಯಗಳಲ್ಲಿ ಹೆಚ್ಚಿಚ್ಚಾಗಿ ಅವರು ಪ್ರವರ್ತಿಸುವವರಾದರು. ಇಂಗ್ಲಾಂಡಿನಲ್ಲಿಯೂ ಅಮೆರಿಕದಲ್ಲಿಯೂ ಕರುಣಾಳುಗಳಾದ ಸಜ್ಜನರು ಹಿಂದುಸ್ಥಾನದ ಕುಷ್ಠರೋಗಿಗಳ

ಅವಸ್ಥೆಯನ್ನು ಚಿತ್ತಕ್ಕೆ ತಂದು, ಆ ರೋಗಿಗಳು ಮನೆಮನೆಗೆ ಹೋಗಿ ಬಿಕ್ಕೆ ಬೇಡ ಬಾರದು; ಅವರು ಸೌಖ್ಯವಾಗಿ ಇದ್ದು, ಉಂಡುತಿಂದು ತಕ್ಕಮಟ್ಟಿಗಾದರೂ ಉಪಶಮನ ಪಡೆಯುವಂತೆ ಅವರಿಗಾಗಿಯೇ ಪ್ರತ್ಯೇಕ ಧರ್ಮಸತ್ರಗಳನ್ನು ಕಟ್ಟಿಸಿ, ಅವರ ಅನ್ನವಸ್ತ್ರ ಮುಂತಾದ ಖರ್ಚು ಯಾವತ್ತೂ ನಡಿಸಬೇಕು ಎಂದು ಯೋಚಿಸಿ, ಬೇಕಾದ ಹಣ ಎತ್ತುವಳಿ ಮಾಡಿದರು. ಈ ಪರೋಪಕಾರಿಗಳಾದ ಸತ್ಪುರುಷರ ಖರ್ಚಿನಿಂದ ನಮ್ಮ ಹಿಂದುಸ್ಥಾನದ ಅನೇಕ ಊರುಗಳಲ್ಲಿ ಕುಷ್ಠರೋಗಿಗಳಿಗಾಗಿಯೇ ಪ್ರತ್ಯೇಕ ಆಸ್ಪತ್ರಿಗಳುಂಟಾದವು. ಮನುಷ್ಯಪ್ರಾಣಿಗೆ ಬರುವ ಸಾಮಾನ್ಯ ರೋಗರುಜನೆಗಳನ್ನು ಉಪಶಮನ ಪಡಿಸುವ ಬಗ್ಯೆ, ಊರೂರುಗಳಲ್ಲಿ ಆಸ್ಪತ್ರಿಗಳನ್ನು ಇನ್ನು ಭಾರಿ ರೋಗಗಳಿಗೆ ಚಿಕಿತ್ಸೆ ಮಾಡುವದಕ್ಕೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಿಶೇಷ ಆಸ್ಪತ್ರಿಗಳನ್ನು ಅರಸ್ಥಾನದವರು ಮೊದಲೇ ಸ್ಥಾಪಿಸಿದ್ದಾರಷ್ಟೇ. ಈ ಆಸ್ಪತ್ರಿಗಳು ಕ್ರೈಸ್ತರಿರಸ್ಥಾನದಲ್ಲಿ ಉಂಟಾದವುಗಳು; ಹಿಂದಣ ಯಾವ ರಾಜರ ಸಂಸ್ಥಾನಿಕರ ಮಾಂಡಲಿಕರ ಮನ್ನೇಯರ ಆಳಿಕೆಯಲ್ಲಿಯೂ ಹಿಂದುದೇಶದಲ್ಲಿ ಆಸ್ಪತ್ರಿಗಳಿದ್ದಂತೆ ತೋರುವದಿಲ್ಲಾ; ಆಸ್ಪತ್ರಿ ಎಂಬದೂ Hospital ಎಂಬ ಇಂಗ್ಲಿಷುಮಾತಿನ ಅಪಭ್ರಂಶವು. ಅದರೆ ಕುಷ್ಠರೋಗಿಗಳನ್ನು ಔಷಧ ಅನ್ನವಸ್ತ್ರ ಕೊಡಿಸಿ, ಸಂಗೋಪನೆ ಮಾಡತಕ್ಕ ಛತ್ತಿಗಳುಂಟಾದದ್ದು ನಮ್ಮ ದೇಶಕ್ಕೆ ಮಹದುಪಕಾರವೆಂದೆನ್ನಬೇಕು. ಇಂಥಾ ಧರ್ಮಾಸ್ಪತ್ರಿಗಳಲ್ಲಿ ಯುರೊಪೀಯ ಹೆಣ್ಣುಮಕ್ಕಳು ಅಧ್ಯಕ್ಷೆಗಳಾಗಿ ರೋಗಿಗಳನ್ನು ಹೇಸದೆ ಮೈದೂಕ್ಕಿಗಳಿಂದ ಅವರನ್ನು ಒಡಂಬಡಿಸಿ, ಅವರ ಶರೀರಕ್ಕೆ ತಕ್ಕ ತಕ್ಕ ಚಿಕಿತ್ಸೆ ಮಾಡಿ ಸಲಹುವದು ಎಷ್ಟು ದೊಡ್ಡ ಉಪಕಾರವು! ಅವರನ್ನು ಉಣ್ಣಿಸುವದೂ ಉಡಿಸುವದೂ ತೊಡಿಸುವದೂ ಮಾತ್ರವಲ್ಲದೆ, ಅವರು ಇಹವನ್ನು ಬಿಟ್ಟು ತೆರಳಿ ಹೋದ ಮೇಲೆ, ದೇವರ ಪರಮ ಪವಿತ್ರ ರಾಜ್ಯವನ್ನು ಸೇರಲು ಯೋಗ್ಯರಾಗುವಂತೆ, ಅವರಿಗೆ ದಿವ್ಯ ಉಪದೇಶವನ್ನು ಕೊಡುವದೂ ಎಷ್ಟೋ ವಿಶೇಷವಲ್ಲವೇ. ಕುಷ್ಠರೋಗಿಗಳ ಅವಸ್ಥೆಯನ್ನು ಮನಸ್ಸಿಗೆ ತಂದು ಆಸ್ಪತ್ರಿಗಳನ್ನು ಕಟ್ಟಿಸುವದಕ್ಕೆ ಯುರೊಪೀಯ ಸಜ್ಜನರನ್ನು ಪ್ರೇರೇಪಿಸಿದವರ್ಯಾರು? ತಮ್ಮ ಊರು ಮನೆಯನ್ನೂ ತಾಯಿತಂದೆಗಳನ್ನೂ ಬಂಧುಬಳಗದವರನ್ನೂ ಬಿಟ್ಟು, ಹಿಂದುಸ್ಥಾನಕ್ಕೆ ಬಂದು, ಆ ಆಸ್ಪತ್ರಿಗಳ ಅಧ್ಯಕ್ಷತೆಯನ್ನು ವಹಿಸಿಕೊಂಡು, ರೋಗಿಗಳೊಡನೆ ಸಂತೋಷದಿಂದ ಇದ್ದು, ಅವರನ್ನು ಆರೈಕೆ ಮಾಡುವದಕ್ಕೆ ಯುರೊಪೀಯ ಯುವತಿಗಳನ್ನು ಪ್ರೇರೇಪಿಸಿದವರ್ಯಾರು? ಸಂಬಳದ ಆಶೆಯೋ? ದುಡ್ಡಿನ ಬಲಿಮೆಯೋ? ಲೌಕಿಕ ಬಹುಮಾನವೋ? ಅಲ್ಲಾ; ಅಲ್ಲಾ; ಯೇಸು ಕ್ರಿಸ್ತಸ್ವಾಮಿಯವರ ಪ್ರೀತಿಯ ಪ್ರೇರಣೆಯೇ ಅವರ ಹೃದಯಗಳಲ್ಲಿ ಪ್ರಬಲವಾಗಿತ್ತು. ತಮ್ಮ ಯಜಮಾನನೂ ರಕ್ಷಕನೂ ಆದಾತನು ಕುಷ್ಠರೋಗಿಯನ್ನು ಕರುಣಿಸಿ, ಮುಟ್ಟಿ ವಾಸಿಮಾಡಿದವನೆಂದು, ಅವರು ಸುವಾರ್ತೆಯಲ್ಲಿ ಓದಿದ್ದನ್ನು ಮನನ ಮಾಡಿ, ಗುರುವಿನಂತೆ ಶಿಷ್ಯನು ಮಾಡಬೇಕು ಎಂದು ನಿಶ್ಚಯಿಸಿ, ಆತನ ಮೇಲುಸಂಕ್ತಿಯನ್ನು ಅನುಸರಿಸುವಂತೆ ಶಕ್ತಿ ದಯೆಪಾಲಿಸೆಂದು ಪ್ರಾರ್ಥಿಸಿ, ಆತನ ಕೃಪೆಯಿಂದ ಅವರು ಲೋಕದೃಷ್ಟಿಯಲ್ಲಿ ಬಹು ಹೀನರಾದ ಪ್ರವೃತ್ತಿಗೆ ಸೇರಿದರು. ಸ್ವಾರ್ಥರಹಿತವಾದ ಅವರ ಪ್ರವೃತ್ತಿಯಿಂದ ಆಸ್ಪತ್ರಿಗಳಲ್ಲಿರುವ ಕುಷ್ಠರೋಗಿಗಳು ಬಹಳ ಉಪಶಮನ ಹೊಂದಿದರಲ್ಲದೆ, ಕುಷ್ಠರೋಗಿಗಳನ್ನು ಕರು

ಣಿಸಿದ ಕ್ರಿಸ್ತಸ್ವಾಮಿಯ ಸುವಾರ್ತೆಯನ್ನು ನಂಬಿ, ಅವರ ನಾಮದಲ್ಲಿ ಸ್ನಾನಹೊಂದಿ, ಮೋಕ್ಷಾರ್ಥಿಗಳಾಗಿ ಬಾಹ್ಯದಲ್ಲಿ ನೋತ ಸೈರಿಸಬೇಕಾದಾಗ್ಯೂ ಹೃದಯದಲ್ಲಿ ಸಮಾಧಾನ ಪಡೆದು, ತಮ್ಮನ್ನು ಪ್ರೀತಿ ಮಾಡುವ ಕ್ರಿಸ್ತಸ್ವಾಮಿಯವರ ರಾಜ್ಯದೊಳಗೆ ಪ್ರವೇಶ ಮಾಡುವಾಗ, ತಾವು ಮಹಿಮೆಯ ಶರೀರವನ್ನು ಧರಿಸಿ, ಅವರಿರುವಂತೆ ತಾವೂ ಇರುವೆವೆಂಬುವ ದಿವ್ಯ ಪ್ರತೀಕ್ಷೆಯನ್ನು ಹೃದಯದಲ್ಲಿ ಕಾಪಾಡಿಕೊಳ್ಳುತ್ತಾರೆ. ತಮಗೆ ಇಷ್ಟು ಕರುಣೆ ತೋರಿಸಿದ ಸತ್ಪುರುಷರನ್ನು ದೇವರ ಮುಂದೆ ನೆನಸಿ, ಅವರ ಇಹಪರಗಳ ಒಳ್ಳೇತನವನ್ನು ಪ್ರಾರ್ಥಿಸುತ್ತಾರೆ.

ಮರವು ಒಳ್ಳೇದಾದರೆ ಅದರ ಫಲವೂ ಒಳ್ಳೇದು; ಕೆಟ್ಟ ಮರವು ಒಳ್ಳೇ ಫಲವನ್ನೀಯದು; ಒಳ್ಳೇ ಮರವು ಕೆಟ್ಟ ಫಲವನ್ನೀಯದು. ಹೀನ ರೋಗಿಗಳನ್ನು ದೂರ ಮಾಡದೆ, ಅವರ ಲೌಕಿಕ ಪಾರಮಾರ್ಥಿಕ ಶ್ರೇಯಸ್ಸಿಗೆ ಧಾವತಿ ಮಾಡುವ ಸತ್ಪುರುಷರಿರುವದು ಕ್ರೈಸ್ತತ್ವದ ಸತ್ಫಲವು. ಇಂಥಾ ಸತ್ಫಲವನ್ನು ಉತ್ಪಾದಿಸುವ ಧರ್ಮವು ಮನುಷ್ಯನು ಕಲ್ಪಿಸಿದ್ದಲ್ಲಾ; ದೇವರೇ ಮನುಷ್ಯರಿಗೆ ಪ್ರಕಟಿಸಿ ಪಾಲಿಸಿದ ಧರ್ಮವೆಂಬುವದು ಕಂಡಿತವು. ಕ್ರೈಸ್ತತ್ವದಿಂದ ಉಂಟಾದ ಹೇರಳ ಸತ್ಫಲಗಳಲ್ಲಿ ಒಂದನ್ನು ಮಾತ್ರವೇ ನಾವು ಇಲ್ಲಿ ಪ್ರಸ್ತಾಪಿಸಿದೆವು. ಕ್ರೈಸ್ತತ್ವವು ದೇವರು ಪಾಲಿಸಿದ ಸತ್ಯಧರ್ಮವಾಗಿದ್ದರೆ, ಸರ್ವರೂ ಅದನ್ನು ಶಿರಸಾವಮಾನ್ಯ ಮಾಡಿ ಅಂಗೀಕರಿಸಲು ಬದ್ಧರಾಗಿದ್ದಾರೆ. ವಾಚಕರೂ ತಮ್ಮಲ್ಲಿಯೂ ಕರುಣಾಪರತ್ವ, ಸ್ವಾರ್ಥರಹಿತ ಪರೋಪಕಾರ, ಪರಹಿತಾರ್ಥಕವಾದ ಸ್ವಾರ್ಪಣೆ ಎಂಬಿವೇ ಮೊದಲಾದ ಸತ್ಫಲಗಳು ಉತ್ಪನ್ನವಾಗಬೇಕೆಂದು ಕಾಂಕ್ಷಿಸಿ, ಅಂಥಾ ಫಲಗಳಿಗೆ ಮೂಲಕಾರಣವಾದ ಕ್ರೈಸ್ತಧರ್ಮವನ್ನು ವಿಶ್ವಾಸಿಸುವವರಾಗಲಿ.

ಸತ್ಯಯುಗವು.

ಕೃತ, ತ್ರೇತ, ದ್ವಾಪರಯುಗಗಳು ಗತಿಸಿಹೋಗಿ, ಈಗ ಕಲಿಕಾಲ ಪ್ರಬಲವಾಗಿದೆ ಎಂದೂ ಈ ಕಲಿಯುಗವು ೪೩೨,೦೦೦ ವರ್ಷಗಳು ಇರುವದೆಂದೂ ಅದು ಗತಿಸಿದ ಬಳಿಕ ಸತ್ಯಯುಗವು ಪ್ರಾರಂಭವಾಗಿ ೧೭೨,೮೦೦ ವರ್ಷಗಳು ಇರುವದೆಂದೂ ಏತದ್ದೇಶೀಯರು ಹೇಳುವರು. ಕಲಿಯುಗವಂದರೆ ಪಾಪವೂ ಅದರ ದುರ್ವಿಪಾಕವಾದ ಕೃಪಣಾವಸ್ಥೆಯೂ ಮರಣವೂ ಪ್ರಬಲವಾಗಿರುವ ಕಾಲವೆಂದು, ಜನರು ಅನ್ನುವ ಮಾತಿಗೆ ತತ್ಕಾಲಕ್ಕೆ ಒಪ್ಪಿಕೊಳ್ಳೋಣ. ಆವಾಗ ಇಂಥಾ ಕೆಟ್ಟ ಯುಗವು ಎಂದಿಗೆ ಸಮಾಪ್ತವಾದೀತು? ಸತ್ಯವೂ ಒಳ್ಳೇತನವೂ ಪ್ರಬಲಿಸುವ ಸತ್ಯಯುಗವು ಎಂದು ಉದಯವಾದೀತು ಎಂಬ ಕಾಂಕ್ಷೆ ಹೃದಯದಲ್ಲಿ ಹುಟ್ಟುವದು ಸಹಜವಷ್ಟೆ. ಮನುಷ್ಯರು ದೇವರ ಕಟ್ಟಳೆಗಳನ್ನು ಕೈಕೊಂಡು, ಸತ್ಯವಂತರಾಗಿ ಪವಿತ್ರರಾಗಿ ದೇವರು ಉದಾರತ್ವದಿಂದ ಪಾಲಿಸಿದ ಅನುಗ್ರಹಗಳನ್ನು ಅನುಭವಿಸುವ ಕಾಲ ಎಂದಾದರೂ ಬರುವದೋ? ಇಂಥಾ ಸುಂದರ ಚಿತ್ರಪಟವು ಭೂಮಂಡಲದಲ್ಲಿ ಕಾಣುವದೋ ಎಂತ ವಿಚಾರಿಸೋಣ.

ಈ ಪ್ರಶ್ನೆ ಒಬ್ಬರಲ್ಲಿ ಹುಟ್ಟಿದರೆ, ಯೇಸು ಕ್ರಿಸ್ತನಲ್ಲಿಯೂ ಆತನು ಈ ಲೋಕದಲ್ಲಿ ಸಂಪೂರ್ಣಿಸುವದಕ್ಕೆ ಬಂದ ಪ್ರವೃತ್ತಿಯಲ್ಲಿಯೂ ಆತನು ದಿವಾರೋಹಣ ಮಾಡು

ವಾಗ ಪರಿಶುದ್ಧಾತ್ಮನನ್ನು ನಿಮ್ಮ ಹೃದಯಗಳಲ್ಲಿ ಕಳುಹಿಸಿ, ಆವಾಸ ಮಾಡಿಸುವೆನೆಂದು ಶಿಷ್ಯರಿಗೆ ಅಭಯ ಕೊಟ್ಟು, ಹಾಗೆಯೇ ಮಾಡಿದ್ದರಲ್ಲಿಯೂ ಆ ಪರಿಶುದ್ಧಾತ್ಮನು ಅಂದಿನಿಂದ ಸತ್ಪುರುಷರ ಹೃದಯಗಳಲ್ಲಿ ಸತ್‌ಪ್ರವೃತ್ತಿ ನಡಿಸುತ್ತಾ ಬಂದದರಲ್ಲಿಯೂ ಆ ಪ್ರಶ್ನೆಗೆ ಉತ್ತರವದೆ. ಕ್ರಿಸ್ತನು ಈ ಲೋಕಕ್ಕೆ ಮನುಷ್ಯತ್ವದಲ್ಲಿ ಬಂದದ್ದರಿಂದ, ಪಾಪಮಯಲೋಕದಲ್ಲಿ ಹೊಸ ಆತ್ಮೀಯ ಬಲವು ಬಂತು. ಸ್ವಾರ್ಥರಹಿತವಾಗಿ ಪರಾರ್ಥಘಟಕವಾಗಿ ರಕ್ಷಣ್ಯ ಮಾಡುವ ದೇವರ ಪ್ರೇಮವು ತತ್ಪೂರ್ವದಲ್ಲಿ ಯಾವಕಾಲದಲ್ಲಿಯೂ ಪ್ರತಕ್ಷವಾಗದ ಹೊಸ ವಿಧದಲ್ಲಿ ಪ್ರತ್ಯಕ್ಷವಾಯಿತು. ಮನುಷ್ಯರು ದೇವರ ಪ್ರೇಮಭರಿತವಾದ ಸುವಾರ್ತೆಯನ್ನು ಆಲೈಸಿ, ದೇವರ ಪ್ರೇಮವನ್ನು ಅಂಗೀಕರಿಸುವವರಾಗಲು, ಲೋಕದಲ್ಲಿ ಮಹಾ ಮಾರ್ಪಾಟವು ಸಂಭವಿಸಲಾಯಿತು; ಸತ್ಯಯುಗವೇ ಸಾಕ್ಷಾತ್ತಾಗಿ ಮೂಡಿಬಂತು. ಮನುಷ್ಯರು ಹೃದಯದಲ್ಲಿದ್ದ ಕಲಿಮಲವನ್ನು ಹೋಗಲಾಡಿಸಿಕೊಂಡು ಅಂದರೆ ಆಂತರ್ಯದಲ್ಲಿ ಆಳುತ್ತಿದ್ದ ಪಾಪದ ಅಧಿಕಾರವನ್ನು ತೆಗಧಾಕಿ ಸತ್ಯಯುಗದಲ್ಲಿ ಪ್ರವೇಶಿಸಿದರು. ಅಂದಿನಿಂದ ಈ ವರೆಗೆ ಈ ಪ್ರಕಾರ ಲಕ್ಷೋಪಲಕ್ಷ ಮನುಷ್ಯರು ಕಲಿಮಲದ ಕಲಿಪುರುಷನ ನಿಷ್ಠೂರವಾದ ಅಡಿಮೆಯಿಂದ ವಿಮುಕ್ತರಾಗಿ, ನೀತಿಯೂ ಸಮಾಧಾನವೂ ಆಳುವ ಸತ್ಯಯುಗದಲ್ಲಿ ಸೇರಿದರು. ಈ ಸತ್ಯಯುಗವು ಸತ್ಯಕ್ಕೆ ಸಾಕ್ಷಿಕೊಡುವದಕ್ಕೆ ಲೋಕಕ್ಕೆ ಬಂದು, ಸತ್ಯಪ್ರಿಯರಾದವರು ತನ್ನ ವಾಕ್ಯವನ್ನು ಕೇಳುತ್ತಾರೆಂದು ಹೇಳಿದ ಯೇಸು ಕ್ರಿಸ್ತನಿಂದಲೇ ಸ್ಥಾಪಿತವಾಯಿತು. ಆತನು ಅದಕ್ಕೆ ಪರಲೋಕರಾಜ್ಯವೆಂತಲೂ ದೇವರರಾಜ್ಯವೆಂತಲೂ ಹೇಳಿದನು. ಈ ರಾಜ್ಯದಲ್ಲಿರುವವರನ್ನು ಈಗ ಕೋಟಿ ಸಂಖ್ಯೆಯಿಂದ ಎಣಿಸಬೇಕು. ನವಖಂಡ ಪೃಥ್ವಿಯಲ್ಲಿ ಈ ಪರಲೋಕರಾಜ್ಯವು ಹೊಗಳಿಸಿಕೊಳ್ಳುತ್ತದೆ. ಯಾರ ಹೃದಯದಲ್ಲಿ ಪಾಪವು ಆಳುತ್ತದೋ, ಯಾವರು ಹೆಣ್ಣು ಮಣ್ಣು ಹೊನ್ನು ಎಂಬ ಪಾಶಾಬದ್ಧರಾಗಿದ್ದಾರೋ ಯಾರು ಪುತ್ರೈಷಣ ದಾರೈಷಣ ವಿತ್ತೈಷಣವೆಂಬ ಆಶೆಗಳಲ್ಲಿ ಸಕ್ತರೋ ಯಾರು ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಷಡ್ವೈರಿಗಳಿಗೆ ದಾಸರೋ ಅವರೇ ಕಲಿಯುಗದವರು. ಅವರಿಗೆ ಕಲಿಯುಗದ ಮಹಿಮೆಯಿಂದ ದೃಷ್ಟಿಮಂದವಾಗಿ ಇಹವೇ ಸ್ವರ್ಗವೆಂದು ಕಾಣುವದು; ಅವರಲ್ಲಿ ಪರದ ಚಿಂತನೆಯೇ ಇಲ್ಲಾ. ಅವರಿಗೆ ಪಾರಮಾರ್ಥಿಕ ಗೋಷ್ಟಿಗಳೆಲ್ಲಾ ಹಾಸ್ಯಕ್ಕೆ ತಕ್ಕವೆಂದು ತೋರುವದು. ಆದರೆ ಸತ್ಯಯುಗದ ರಾಜನಾದ ಯೇಸು ಕ್ರಿಸ್ತನನ್ನು ರಕ್ಷಕನೆಂದು ನಂಬಿದವರು ಈಗಲೇ ಸತ್ಯಯುಗದಲ್ಲಿದ್ದಾರೆ; ದೇವರ ಪ್ರೇಮವನ್ನು ಸತ್ಯವಾಗಿ ರುಚಿನೋಡಿ, ಕಲಿಯುಗದ ಮರಣಾವಸ್ಥೆಯಿಂದ ಜೀವದರಾಜ್ಯಕ್ಕೆ ಸೇರಿದವರು, ತಾವು ಸತ್ಯಯುಗದಲ್ಲಿ ಇರುವವರು, ಪಾಪದ ಅಡಿಮೆಯಿಂದ ಬಿಡುಗಡೆಯಾಗಿ ದೇವರ ಮಕ್ಕಳ ಸ್ವತಂತ್ರವನ್ನು ಪಡೆದವರು, ಕಲಿಕಾಲದ ಕತ್ತಲೆಯಿಂದ ಮುಕ್ತರಾಗಿ, ಸತ್ಯಯುಗದ ಪ್ರಕಾಶಕ್ಕೆ ಬಂದವರು ಎಂಬುವ ದೃಢವನ್ನು ಹೃದಯದಲ್ಲಿ ತಿಳಿಯುವವರಾಗುತ್ತಾರೆ.

ಅದಲ್ಲದೆ ಈ ಸತ್ಯಯುಗವು ಅಂದರೆ ಪರಲೋಕರಾಜ್ಯವು ಪ್ರವರ್ಧಮಾನವಾಗುವದು, ಕಡೆಗೆ ಈ ಸಮಸ್ತ ಲೋಕವನ್ನು ಸತ್ಯವೂ ನೀತಿಯೂ ವಶಮಾಡಿಕೊಂಡು ಆಳುವದು ಎಂಬ ವಾಕ್ಯಗಳು ಸತ್ಯವೇದದಲ್ಲಿ ಅವೆ. ಪರಿಶುದ್ಧಾತ್ಮನ ಪ್ರವೃತ್ತಿಯು

ವಿಶಾಲವಾಗುತ್ತಾ ಬಂದಹಾಗೆ ಕಲಿಯುಗವೂ ಸಂಕೋಚವಾಗುತ್ತಾ ಬರುವದು. ದೇವರ ಸತ್ಯವೇ ಕಡೆಗೆ ಜಯಶಾಲಿಯಾಗುವದು. ಕ್ರಿಸ್ತನೇ ಸಮಸ್ತ ಲೋಕಕ್ಕೆ ಏಕ ಸಮ್ರಾಜನಾಗುವನು. ಈ ಲೋಕಕ್ಕೆ ಇಷ್ಟು ಆನಂದಕರವಾದ ಪ್ರತೀಕ್ಷೆ ಇರುತ್ತಿರಲಿಕ್ಕೆ ನಾವು ಸತ್ಯಯುಗವು ಬರುವದಕ್ಕೆ ಇನ್ನು ಸಾವಿರಾರು ವರ್ಷಗಳು ಕಳೆದು ಹೋಗಬೇಕೆಂದು ಕಾಯುವದು ಜೀಡಾ. ಸತ್ಯಯುಗದಲ್ಲಿ ಸೇರಬೇಕೆಂದು ಹಾರೈಸುವವನು ಸತ್ಯಯುಗದ ಅರಸನಾದ ಯೇಸು ಕ್ರಿಸ್ತನ ಸುವಾರ್ತೆಯನ್ನು ಕೇಳಿ, ಆತನೇ ತನಗೆ ಅಗತ್ಯವಾದ ರಕ್ಷಕನೆಂದು ನಂಬುವವನಾಗಲಿ; ಮತ್ತು ತನ್ನ ಅಂತಃಕರಣವನ್ನು ಆತನಿಗೆ ಸಮರ್ಪಣೆ ಮಾಡಿ, ಆತನ ಶುಶ್ರೂಷೆಯಲ್ಲಿ ನಿರತನಾಗಿದ್ದು, ಆತನ ಕೃಪಾಸಾನಿಧ್ಯದಲ್ಲಿ ಜೀವಮಾನ ಮಾಡಲಿ.

ಗುರು ಪ್ರಶಂಸೆ.

ಗುರುವೆಂಬುವದು ದೊಡ್ಡ ಮಾತು; ಗುರುವೆಂದು ಕರೆಯಿಸಿಕೊಳ್ಳುವದಕ್ಕೆ ಅನೇಕರು ಅಪೇಕ್ಷಿಸುವರು. ಆದರೆ ಗುರುವೆಂದೆನಿಸಿಕೊಂಡು, ಹತ್ತುಮಂದಿಯನ್ನು ತಿದ್ದಿ, ಸನ್ಮಾರ್ಗಕ್ಕೆ ತರುವದು ಸದರವಾದ ಕಾರ್ಯವಲ್ಲ. ಯಾವದೊಂದು ಕೃತ್ಯವನ್ನು ನಿರ್ವಹಿಸಬೇಕಾದರೆ, ತಕ್ಕ ಅರುಹೂ ಅನುಭವವೂ ಬೇಕೆಂಬುವದು ಸರಿಯಷ್ಟೇ. ಔಷಧ ಪರಿಜ್ಞಾನವಿಲ್ಲದ, ರೋಗನಿದಾನವನ್ನು ಅರಿಯದ, ಮೂಢಾತ್ಮನು ಚಿಕಿತ್ಸಕನಾದಾನೇ? ಜನ್ಮಕ್ಕೆ ಸಮುದ್ರಪಯಣ ಮಾಡದೆ, ಸಮುದ್ರವನ್ನು ಕಂಡರೆ ಹೆದರಿ ನಡುಗುವ ಹೇಡಿ ನಾವಿಕನಾದಾನೇ? ಹಾಗೆಯೇ ದೇವರಜ್ಞಾನವೂ ಮನುಷ್ಯರಜ್ಞಾನವೂ ಇಲ್ಲದೆ, ಭೂಲೋಕ ಪರಲೋಕಗಳ ಸ್ಥಿತಿಯು ಏನೆಂದು ಅರಿಯದೆ, ಕೆಲ ಶಾಸ್ತ್ರೋಕ್ತಗಳು ಬಾಯಿಪಾಠಮಾಡಿ ವಾಕ್ಪಟುವಾದ ಡಂಭಿಯು ಗುರುವೆಂದೆನಿಸಿಕೊಳ್ಳಲು ಅರ್ಹನಲ್ಲಾ. ಹೀಗಿರುವದರಿಂದ ಗುರುವಾದಾತನು ಏನು ಮಾಡಬೇಕು, ಗುರುವೆಂದು ಯಾವಾತನಿಗೆ ಅನ್ನಬೇಕು ಎಂಬುವದಕ್ಕೆ ಸಾಮಾನ್ಯ ಸುಭಾಷಿತ ಶ್ಲೋಕವನ್ನು ಉದಾಹರಿಸುವೆವು.

ಗುಕಾರಸ್ತ್ವಂಧಕಾರಃ ಸ್ಯಾತ್ ರುಕಾರಸ್ತನ್ನಿವಾರಕಃ ।
ಅಂಧಕಾರ ನಿವಾರಿತ್ವಾತ್ ಗುರುರಿತ್ಯಭಿಧೀಯತೆ ॥

ಹಾಗೆಂದರೆ: ಗು ಎಂಬುವದು ಅಂಧಕಾರವು, ರು ಎಂಬುವದು ನಿವಾರಣೆ; ಅಂಧಕಾರವನ್ನು ನಿವಾರಣೆ ಮಾಡುವವನಾದ್ದರಿಂದ ಗುರುವೆಂದೆನಿಸಿಕೊಳ್ಳುತ್ತಾನೆ. ಈ ಶ್ಲೋಕವನ್ನು ರಚಿಸಿದವನು, ಗುರುವಾದಾತನು ಏನು ಮಾಡಬೇಕೆಂದು ಚನ್ನಾಗಿ ಬಲ್ಲವನಾಗಿದ್ದನು. ಗು ಮತ್ತು ರು ಎಂಬಕ್ಷರಗಳಿಗೆ ಅವನು ಕೊಟ್ಟ ಅರ್ಥವು ಕೇವಲ ಕಾಲ್ಪನಿಕವಾಗಿದೆ; ಸರಿ; ಆದರೆ ಅವನ ಅಭಿಪ್ರಾಯದ ಪ್ರಕಾರ ಮನುಷ್ಯನ ಹೃದಯದಲ್ಲಿರುವ ಅಂಧಕಾರವನ್ನು ನಿವಾರಿಸುವದೇ ಗುರುವಿನ ಮಹಿಮೆಯೆಂಬುವದಕ್ಕೆ ಸಂದೇಹವಿಲ್ಲಾ.

ಅಜ್ಞಾನಾಂಧಕಾರವು ಸರ್ವಮನುಷ್ಯರ ಹೃದಯದಲ್ಲಿರುವದರಿಂದ, ಮನುಷ್ಯನು ತನ್ನಲ್ಲಿರುವ ಅಜ್ಞಾನವನ್ನು ಪರಿಹರಿಸಲಾರದವನು ಬೇರೆಯವರ ಅಜ್ಞಾನವನ್ನು ಪರಿಹರಿಸುವದು ಹ್ಯಾಗೆ? ಕಾರ್ಯವು ಹೀಗಿರುವದರಿಂದ ಮನುಷ್ಯನ ಅಜ್ಞಾನಾಂಧ

ಕಾರವನ್ನು ನಿವಾರಣೆ ಮಾಡಿ, ಸುಜ್ಞಾನ ಪ್ರಕಾಶವನ್ನು ಪ್ರಸರಿಸುವವನು ಸಾಕ್ಷಾದ್ದೇವರಾಗಿರಬೇಕು. ಇಂಥಾ ದೇವಗುರುವಾದಾತನು ಮೇಲ್ಲೋಕದಿಂದ ಈ ಭೂಮಿಗೆ ಅವತರಿಸಿ ಬಂದಿದ್ದಾನೆಂದು ನಾವು ಹೇಳುತ್ತೇವೆ. ಅವನೇ ಯೇಸು ಕ್ರಿಸ್ತನು. ಅವನು ಒಂದು ದಿವಸದಲ್ಲಿ ಯೆರೂಸಲೇಮಿನಲ್ಲಿದ್ದ ಮಹಾ ಮಂದಿರದಲ್ಲಿ ಉಪದೇಶ ಮಾಡುವಾಗ್ಯೆ "ನಾನೇ ಲೋಕದ ಬೆಳಕಾಗಿದ್ದೇನೆ; ನನ್ನನ್ನು ಹಿಂಬಾಲಿಸುವವನು ಕತ್ತಲೆಯಲ್ಲಿ ನಡೆಯದೆ, ಜೀವದ ಬೆಳಕನ್ನು ಹೊಂದಿರುವನು" ಎಂದು ಹೇಳಿದನು. ಸೂರ್ಯನ ಪ್ರಭೆಯು ಪ್ರಸರಿಸಿದ್ದಲ್ಲಿ ಕತ್ತಲೆ ಅದೃಶ್ಯವಾಗುವಂತೆ ತಾನು ಮನುಷ್ಯರ ಹೃದಯಗಳಲ್ಲಿ ಕವಿದಿರುವ ಅಜ್ಞಾನಾಂಧಕಾರವನ್ನು ಪರಿಹರಿಸಿ, ಸುಜ್ಞಾನವನ್ನೂ ಜೀವವನ್ನೂ ಪಾಲಿಸುವವನು ಎಂದು ಹೇಳಿದನು. ಆತನಲ್ಲಿ ಪ್ರಕಾಶಿಸಿದ ಬೆಳಕು ಯಾವದು ಎಂದು ವಿಚಾರಿಸುವಾ.

೧. ಸರ್ವವಿಶ್ವಕ್ಕೆ ಏಕನಿರ್ಮಾಣಿಕನಾದ ಜೀವವುಳ್ಳ ದೇವರು ಮನುಷ್ಯರಾದ ನಮಗೆ ತಂದೆಯಾಗಿದ್ದಾನೆ. ಪರಲೋಕದಲ್ಲಿರುವ ನಮ್ಮ ತಂದೆಯೇ ಎಂದು ನಾವು ಆತನನ್ನು ಕರೆದು, ಆತನ ಮಕ್ಕಳು ಎಂಬ ಬಹುಮಾನಕ್ಕೆ ಸೇರಬೇಕು. ತನ್ನನ್ನು ಬೇಡುವವರಿಗೆ ಆತನು ಒಳ್ಳೇ ವರಗಳನ್ನು ಕೊಡುವವನು; ತನ್ನ ಶರಣಾಗತರಾದ ವರ ಸರ್ವ ಭರಭಾರವನ್ನು ತಾನೇ ವಹಿಸಿಕೊಂಡು, ಪರಿಪಾಲನೆ ಮಾಡುವವನಾಗಿದ್ದಾನೆ, ಎಂದು ಆತನು ಬೋಧಿಸಿದನು.

೨. ಮನುಷ್ಯರಲ್ಲಿ ಜಾತಿಭೇದ ಕುಲಭೇದ ವರ್ಣಭೇದವೆಂಬೀ ಭೇದಗಳಿಲ್ಲಾ; ನಾನು ಉತ್ತಮನು, ನೀನು ಅಧಮನು ಎನ್ನುವದು ಬರೇ ಹುಸಿ; ಸರ್ವರೂ ಒಂದೇ ಸ್ಥಿತಿಯಲ್ಲಿದ್ದು ಪರಸ್ಪರ ಸಹೋದರರಾಗಿದ್ದಾರೆ; ಭೇದಬುದ್ಧಿಯನ್ನು ತೊರೆದು, ಪರಸ್ಪರ ಪ್ರೀತಿಕಾರ್ಯಗಳಿಂದ ಸ್ನೇಹವರ್ಧನೆ ಮಾಡತಕ್ಕವರು; ವಿನಾಕಾರಣವಾಗಿ ಸಹೋದರನನ್ನು ಬಯ್ಯುವವನೂ ಹೀನಯಿಸುವವನೂ ಸಹೋದರತ್ವಕ್ಕೆ ಆಗದ ಕೃತ್ಯ ಮಾಡುವವನಾಗಿ, ಸರ್ವರನ್ನೂ ಮಕ್ಕಳಂತೆ ನೋಡುವ ದೇವರ ಅಪ್ಪಣೆ ಮೀರುವವನಾಗಿ ದಂಡನೆ ಪಡತಕ್ಕವನು. ಸ್ವಾರ್ಥವನ್ನು ಮರೆತು, ಪರರಿಗೆ ಸೇವೆ ಮಾಡುವದಕ್ಕೆ ತನ್ನನ್ನು ತಗ್ಗಿಸಿಕೊಳ್ಳುವವನೇ, ದೇವರ ದೃಷ್ಟಿಯಲ್ಲಿ ದೊಡ್ಡವನು ಎಂದು ಆತನು ಬೋಧಿಸಿದನು.

೩. ಮನುಷ್ಯರು ಪಾಪಿಗಳಾಗಿ ಪಾಪದ ಅಡಿಮೆಗಳು; ಒಳ್ಳೇದನ್ನು ಮಾಡುವ ಸ್ವತಂತ್ರವನ್ನು ಕಳಕೊಂಡು, ತಮ್ಮನ್ನು ದೇವರಮನೆತನಕ್ಕೆ ಅಯೋಗ್ಯರೆಂದು ಮಾಡಿಕೊಂಡವರು; ಆದರೆ ಮನುಷ್ಯರನ್ನು ಮಕ್ಕಳೆಂದು ಪ್ರೇಮಿಸುವ ತಂದೆಯಾದ ದೇವರು ಅಡಿಮೆಗಳಾದ ಮನುಷ್ಯರನ್ನು ಪಾಪದಾಸತ್ವದಿಂದ ವಿಮೋಚಿಸುವದಕ್ಕೆ ತನ್ನನ್ನು ಈ ಲೋಕಕ್ಕೆ ಕಳಿಸಿದ್ದಾನೆ; ಈ ವಿಮೋಚನೆಯನ್ನು ನೆರವೇರಿಸುವದಕ್ಕೆ ತಾನು ತನ್ನ ಜೀವವನ್ನು ಹೊಣೆಯಾಗಿ ಕೊಡುವದು ಅಗತ್ಯವು, ಈ ಉದ್ದೇಶಕ್ಕಾಗಿಯೇ ತಾನು ಈ ಲೋಕಕ್ಕೆ ಬಂದೆ ಎಂದು ಆತನು ಹೇಳಿದನು. ಈ ಅಡಿಮೆಯಿಂದ ತನ್ನನ್ನು ವಿಮೋಚಿಸಿಕೊಳ್ಳುವರೆ ಯಾವನೂ ಶಕ್ತನಲ್ಲಾ. ಆಯಾ ಆಹಾರಗಳನ್ನು ವರ್ಜಿಸುವದರಿಂದ, ಹಪ್ತೆಗೆ ಇಂತಿಷ್ಟೇ ಉಪವಾಸ ಮಾಡಬೇಕೆಂಬ ಕ್ಲುಪ್ತ ಮಾಡುವದರಿಂದ, ಸ್ನಾನ ಪ್ರಕ್ಷಾಳಣೆಗಳಿಂದ, ಮುಟ್ಟಿಸಿಕೊಳ್ಳಬಾರದು ಎಂದು ದೂರವಾಡಿದ

ಜನರನ್ನು ತೊಲಗುವದರಿಂದ, ಇನ್ನೂ ಇದೇ ತರದ ಹಲವು ನಿಯಮಗಳನ್ನು ಪಾಲಿಸುವದರಿಂದ ಮನುಷ್ಯನು ಉತ್ತಮನೂ ಪುಣ್ಯಾತ್ಮನೂ ಆಗನು. ಒಳಗೆ ಪಾಪಾಸಕ್ತಿಯೂ ದುರಾಲೋಚನೆಗಳೂ ಇದ್ದಂತೆ ಬಹಿರ್ಡಂಬನೆ ಮಾಡುವವರು ಕೇವಲ ನಿಷ್ಪ್ರಯೋಜಕರು; ಅವರು ಕಪಟಿಗಳು, ಹೊರಗೆ ಗಾರೆ ಹಾಕಿ ಅಲಂಕರಿಸಿದ ಒಳಗೆ ಕೊಳೆತ ಮಾಂಸ ಎಲುವುಗಳಿಂದ ತುಂಬಿರುವ ಗೋರಿಗಳಿಗೆ ಸಮಾನರು; ಗೋರಿಯನ್ನು ತೆರೆದರೆ ದುರ್ಗಂಧವು ಹೊರಡುವಂತೆ, ಮನುಷ್ಯನ ಹೃದಂತರಂಗದಿಂದ ದುಷ್ಟ ಆಲೋಚನೆಗಳೂ ಮಾತುಗಳೂ ಹೊರಡುತ್ತವೆ.

೪. ದೇವರನ್ನು ಮಹಿಮೆ ಪಡಿಸಿ, ತನ್ನನ್ನು ತಗ್ಗಿಸಿಕೊಂಡು, ಆತನು ಈ ಲೋಕಕ್ಕೆ ಕಳಿಸಿದ ಆತನ ಏಕಜ ಕುಮಾರನಾದ ತನ್ನಲ್ಲಿ ವಿಶ್ವಾಸಿಸುವವನು, ಪಾಪದಾಸ್ಯದಿಂದ ಮುಕ್ತನಾಗಿ, ನಿತ್ಯಜೀವವನ್ನು ಬಾಧ್ಯವಾಗಿ ಹೊಂದತ್ತಾನೆ; ವಿಶ್ವಾಸಿಸದೆ ಹೋಗುವವನು ದೇವರು ವ್ಯವಸ್ಥಾಪಿಸಿದ ನಿಸ್ತಾರಣೆಯನ್ನು ತಿರಸ್ಕರಿಸುವದರಿಂದ, ನಿತ್ಯಮರಣಕ್ಕೆ ಗುರಿಯಾಗುತ್ತಾನೆ ಎಂದು ಆತನು ಬೋಧಿಸಿದನು.

೫. ಇತರ ಗುರುಗಳಂತೆ ತಾನು ಕೆಲವು ಕಾಲ ಶಿಷ್ಯವರ್ಗದವರೊಂದಿಗೆ ಇದ್ದು, ಮರಣದಲ್ಲಿ ಅಗಲುವವನಲ್ಲಾ, ತಾನು ಮನುಷ್ಯರ ವಿಮೋಚನೆಗಾಗಿ ಪ್ರಾಣವನ್ನು ಅರ್ಪಿಸಿದ ಮೇಲೆ ಮೂರನೇ ದಿನದಲ್ಲಿ ಪುನರುತ್ಥಾನ ಮಾಡಿ, ಮೇಲ್ಲೋಕಕ್ಕೆ ಏರುತ್ತೇನೆ, ಆದರೂ ಲೋಕಾಂತದ ವರೆಗೂ ಎಲ್ಲಾ ದಿವಸಗಳಲ್ಲಿ ತನ್ನ ಭಕ್ತರ ಸಂಗಡ ಇರುವವನು, ಸ್ಮರಣೆ ಮಾಡುವವರ ಮಧ್ಯದಲ್ಲಿ ತಾನು ಇರುವವನು, ಬಲವನ್ನೂ ಧೈರ್ಯವನ್ನೂ ಪಾಲಿಸುವವನೂ ಆಗಿರುತ್ತೇನೆ ಎಂದು ಬೋಧಿಸಿದನು.

೬. ಈ ಲೋಕಕ್ಕೆ ಅಂತ್ಯವದೆ; ಲೋಕಾಂತದಲ್ಲಿ ತಾನು ಪುನಹಾ ಬಂದು, ಮನುಷ್ಯರನ್ನು ತನ್ನ ಮುಂದೆ ಕೂಡಿಸಿ, ಅವರವರ ಕೃತ್ಯಗಳ ಪ್ರಕಾರವೇ ನ್ಯಾಯ ತೀರಿಸುತ್ತೇನೆ; ಆ ದಿವಸವು ಯಾವಾಗ ಬರುವದೆಂದು ನೀವು ಅರಿಯರಿ, ಆದ್ದರಿಂದ ಸತತವೂ ಎಚ್ಚರವಾಗಿ, ಪ್ರಾರ್ಥನೆಯಲ್ಲಿ ನಿಷ್ಠರಾಗಿ, ವಿಶ್ವಾಸದಲ್ಲಿ ಸಿದ್ಧರಾಗಿ ತನ್ನ ಮುಂದೆ ನಿಲ್ಲುವದಕ್ಕೆ ಸಿದ್ಧರಾಗಿರಿ ಎಂದು ಆತನು ಬೋಧಿಸಿದನು.

ಇಂಥಾ ಅತ್ಯುತ್ತಮ ಉಪದೇಶವೇ ಮನುಷ್ಯನ ಅಜ್ಞಾನಾಂಧಕಾರವನ್ನು ನಿವಾರಿಸಿ, ಸುಜ್ಞಾನಪ್ರಕಾಶವನ್ನು ಪ್ರಸರಿಸುವ ಜ್ಯೋತಿಯಲ್ಲವೇ. ಮನುಷ್ಯನು ಪಾಪಿಯಾಗಿರುತ್ತಾ ತನ್ನ ಪಾಪದಿಂದ ಮುಕ್ತನಾಗುವದಕ್ಕೆ ನಿಷ್ಕೃತಿಯು ಅಗತ್ಯವೆಂದು ತಿಳಿಯುತ್ತಾನಷ್ಟೇ. ಅನೇಕರು ಈ ಕಾಲದಲ್ಲಿ ಈ ವಿಷಯವನ್ನು ಮರೆತು ಪಾಪಕ್ಕೆ ನಿಷ್ಕೃತಿಯು ಬೇಡ, ದೇವರು ದಯಾಳು, ಪಾಪವನ್ನು ಮನ್ನಿಸುತ್ತಾನೆಂದೂ, ಕೆಲವರು ನಿಷ್ಕೃತಿಯು ಅಸದಳವು, ದೇವರು ನೀತಿವಂತನು, ಪಾಪಕ್ಕೆ ದಂಡನೆ ಮಾಡುವವನೇ ಎಂದೂ, ಇನ್ನೊಬ್ಬರು ಪಾಪಕ್ಕೆ ನಿಷ್ಕೃತಿ ಅಗತ್ಯವಾಗಿದೆ, ಮತ್ತು ಸುಕರವಾಗಿದೆ, ಆದರೆ ತನ್ನ ಪಾಪಕ್ಕೆ ತಾನೇ ನಿಷ್ಕೃತಿ ಮಾಡಬೇಕು ಎಂತಲೂ ಅನ್ನುವರು. ಪಾಪಕ್ಕೆ ನಿಷ್ಕೃತಿಯು ಅಗತ್ಯವದೆ, ಮತ್ತು ಸುಕರವದೆ, ಪಾಪಿಮನುಷ್ಯನು ಅದನ್ನು ತನಗಾಗಿ ಮಾಡಲಾರನು, ಸರ್ವ ನಿರ್ಮಾಣಕರ್ತನಾದ ದೇವರು ಅದನ್ನು ಮನುಷ್ಯನಿಗಾಗಿ ಮಾಡಿದ್ದಾನೆ, ಅದನ್ನು ಕಾರ್ಯಾರ್ಥವಾಗಿ ಸಂಪೂರ್ಣಿಸುವದಕ್ಕೆ ತಾನು ಬಂದಿದ್ದೇನೆ ಎಂದು ಯೇಸು ಕ್ರಿಸ್ತಸ್ವಾಮಿಯವರು ಹೇಳಿದರು.

ನಾವು ನಿಧಾನವಾಗಿ ಆಲೋಚಿಸಿದರೆ ದೇವರೇ ನಮಗಾಗಿ ನಿಷ್ಕೃತಿಯನ್ನು ಆಚರಿಸಿ ನಮ್ಮನ್ನು ವಿಮೋಚಿಸುವದು ಹೊರ್ತು ನಮಗೆ ನಿಸ್ತಾರಣೆಯಿಲ್ಲಾ, ನಮ್ಮ ಪಾಪಗಳಲ್ಲಿ ಸಾಯಬೇಕು ಎಂದು ಹೃದಂತರಂಗವು ಅಸ್ತು ಪಡುತ್ತದಲ್ಲವೇ? ಇದೇ ಉಚಿತವಾದ ನಿಸ್ತಾರಣೆ ನಮಗೆ ಯೇಸು ಕ್ರಿಸ್ತಸ್ವಾಮಿಯಲ್ಲಿ ಪ್ರಾಪ್ತಿಯಾಗುತ್ತದೆ.

ಗುರುವಿನ ಇನ್ನೊಂದು ಲಕ್ಷಣವೇನಂದರೆ:

ಸನ್ಮಾರ್ಗಸ್ಯೋಪದೇಷ್ಟಾರಃ ಸ್ವಯಂ ಸನ್ಮಾರ್ಗಶಾಲಿನಃ ।
ಉನ್ಮಾರ್ಗಪ್ರತಿಹರ್ತಾರೋ ಗುರವಸ್ತೇಸವಿಾರಿತಾಃ ॥

ಅರ್ಥವೇನಂದರೆ: ಸನ್ಮಾರ್ಗವನ್ನು ಉಪದೇಶಿಸುವವರಾಗಿ, ತಾವೇ ಸನ್ಮಾರ್ಗಶಾಲಿಗಳಾಗಿ ದುರ್ಮಾರ್ಗವನ್ನು ಖಂಡಿಸುವವರೇ ಗುರುಗಳು. ಇದು ಸತ್ಯವಾದದ್ದು. ಯೇಸು ಕ್ರಿಸ್ತನು ಸನ್ಮಾರ್ಗವನ್ನು ಬೋಧಿಸಿದನಲ್ಲದೆ, ತಾನೇ ಸನ್ಮಾರ್ಗದಲ್ಲಿ ನಿಷ್ಠನಾಗಿದ್ದನು. ಆತನ ನಡಾವಳಿ, ಯಾವ ಮನುಷ್ಯನಾದರೂ ಸಣ್ಣ ದೊಡ್ಡ ತಪ್ಪು ತೋರಿಸಿ, ಕುರುಹಿಟ್ಟು ಮಾತಾಡಲಾರದಂತೆ ಅಷ್ಟು ನಿಷ್ಕಳಂಕವಾಗಿತ್ತು. ನಿಮ್ಮಲ್ಲಿ ಯಾವನು ನನ್ನಲ್ಲಿ ಪಾಪವನ್ನು ತೋರಿಸಿಕೊಡುವನು ಎಂದು, ಆತನು ಸಭೆಯ ಮುಂದೆ ಧೈರ್ಯವಾಗಿ ನುಡಿದನು. ತಾವು ಪಾಪಿಗಳೆಂದು ತಗ್ಗಿಸಿಕೊಂಡು, ದುಃಖಪೂರ್ವಕವಾಗಿ ತನ್ನ ಬಳಿಗೆ ಬಂದವರನ್ನು ಆತನು ಕರುಣಿಸಿ, ಅವರಿಗೆ ಸಮಾಧಾನವನ್ನು ಕೊಡುವಂಥಾ ಬೋಧನೆ ಮಾಡಿದನು. ಎಂಥೆಂಥಾ ಪಾಪಿಯನ್ನೂ ಆತನು ತಿರಸ್ಕರಿಸಲಿಲ್ಲಾ; ಪಾಪಿಗಳ ಸ್ನೇಹಿತನು ಎಂದು ಅನ್ನಿಸಿಕೊಂಡನು. ತಾವು ನೀತಿವಂತರೂ ಪವಿತ್ರರೂ ಎಂದು ಹೇಳಿಕೊಂಡು, ಉಳಿಕೆಯವರನ್ನು ತುಚ್ಛೀಕರಿಸುತ್ತಿದ್ದ ಕಪಟಿಗಳ ವಿಡಂಬನೆಯನ್ನು ಆತನು ಬಹಿರಂಗವಾಗಿ ಖಂಡಿಸಿ, ಅಂಥಾ ಕಪಟಕ್ಕೆ ದೂರವಾಗಿದ್ದು, ಯಥಾರ್ಥತ್ವವನ್ನು ಕೈಕೊಳ್ಳಬೇಕೆಂದು ಶಿಷ್ಯಮಂಡಲಿಯವರನ್ನು ಎಚ್ಚರಿಸಿದನು. ಆತನು ಮನುಷ್ಯರ ಸಂಪರ್ಕದಲ್ಲಿರುವದೇ ಪಾಪಾಸ್ಪದಕರವು, ತಾನು ಏಕಾಂತವಾಸ ಮಾಡಬೇಕು ಅನ್ನುವ ಯತಿಯಾಗಿರದೆ, ಮನುಷ್ಯರ ಒಡನಾಟದಲ್ಲಿದ್ದು, ಕ್ರಮವಾದ ಆಹಾರಪಾನವನ್ನು ಸ್ವೀಕರಿಸಿ, ಶುಭಶೋಭನ ಪ್ರಸ್ತಗಳಿಗೂ ಹೋಗಿ, ಅದನ್ನು ಪವಿತ್ರೀಕರಿಸಿ, ಮರಣವು ಸಂಭವಿಸಿದ ಮನೆಗೂ ಹೋಗಿ, ಶೋಕಾರ್ತರನ್ನು ದಿವ್ಯ ಬೋಧನೆಯಿಂದ ಸಂತವಿಸಿ, ನೀರಿನಲ್ಲಿದ್ದಾಗ್ಯೂ ನೀರನ್ನು ಒಳಕೊಳ್ಳದ ತಾವರೆ ಎಲೆಯಂತೆ ಪಾಪಿಗಳೊಡನೆ ಇದ್ದಾಗ್ಯೂ ಪಾಪದ ಕಳಂಕರಹಿತನಾಗಿ, ತಾನು ನಿಜವಾದ ದೇವರೂ ನಿಜವಾದ ಮನುಷ್ಯನೂ ಎಂತ ಪ್ರತ್ಯಕ್ಷ ಮಾಡಿದನು. ಆತನ ಪವಿತ್ರ ನಡಾವಳಿಯನ್ನು ನೋಡಿ ಪರೀಕ್ಷಿಸುವ ಅಂತರ್ದೃಷ್ಟಿಯುಳ್ಳವರು, ನೀನೇ ಲೋಕಕ್ಕೆ ಬರುವ ದೇವರ ಕುಮಾರನಾದ ಮೆಸ್ಸಿಯನು ಎಂದು ಅಭಿವಾದಿಸಿದರು.

ನಮಗೆ ಪರಮ ಗುರುವಿನ ಆಶ್ರಯ ಸಿಕ್ಕಬೇಕಾದರೆ, ಸುಭಾಷಿತ ಶ್ಲೋಕವು ಹೇಳುವದು:

ಯಾವನ್ನಾನುಗ್ರಹಃ ಸಾಕ್ಷಾಜ್ಜಾಯತೇ ಪರಮೇಶ್ವರಾತ್ ।
ತಾವನ್ನಸದ್ಗುರುಶ್ಚಿಪ ಸಚ್ಛಾಸ್ತ್ರಮಪಿನೋ ಭವೇತ್ ॥

ಅಂದರೆ ಯಾವ ವರೆಗೆ ಸಾಕ್ಷಾತ್ ಪರಮೇಶ್ವರನಿಂದ ಅನುಗ್ರಹವು ಆಗಲಿಲ್ಲವೋ ಆ ವರೆಗೆ ಸದ್ಗುರುವು ಇಲ್ಲಾ, ಸತ್ಯಶಾಸ್ತ್ರವೂ ಇಲ್ಲಾ, ಸದ್ಗುರುವಿನ ಚರಣಾಶ್ರಯವು

ಪ್ರಾಪ್ತಿಯಾಗಬೇಕಾದರೆ, ನಮಗೆ ಸಾಕ್ಷಾತ್ ಪರಮೇಶ್ವರನ ಅನುಗ್ರಹವು ಆಗತ್ಯವದೆ. ಇದೇ ವಿಷಯದಲ್ಲಿ ಯೇಸು ಕ್ರಿಸ್ತರು ಹೇಳಿದ್ದು: "ತಂದೆಯಿಂದ ಕೇಳಿ ಕಲಿತವರೆಲ್ಲರು ನನ್ನ ಬಳಿಗೆ ಬರುತ್ತಾರೆ. ಒಬ್ಬನು ದೇವರಚಿತ್ತವನ್ನು ಮಾಡಲು ಇಷ್ಟವುಳ್ಳವನಾದರೆ, ಅವನೇ ನಾನು ಮಾಡುವ ಬೋಧನೆ ದೇವರಿಂದ ಅದೆಯೋ ನನ್ನಿಂದ ನಾನೇ ಮಾಡುತ್ತೇನೋ ಎಂದು ತಿಳಿಯುವನು; ಸತ್ಯವನ್ನು ಪ್ರೀತಿ ಮಾಡುವವರು ನನ್ನ ವಾಕ್ಯವನ್ನು ಕೇಳುತ್ತಾರೆ". ಯೇಸು ಕ್ರಿಸ್ತರ ಬೋಧನೆಯನ್ನು ಯಾರು ನಂಬುತ್ತಾರೆ, ಯಾರು ನಂಬದೆ ಹೋಗುತ್ತಾರೆಂಬುವದಕ್ಕೆ ಮೇಲಣ ವಾಕ್ಯಗಳು ಒಳ್ಳೇ ನಿಕಷವಾಗಿವೆ, ಅಂದರೆ ಒರೆಗಲ್ಲಾಗಿವೆ; ದೇವರನ್ನು ಒಲಿಸಿಕೊಳ್ಳಬೇಕು, ಅತನ ದಯೆ ಪಡೆಯಬೇಕು, ಸತ್ಯವೇ ತನಗೆ ಬೇಕು, ಎಂದು ಮನಃಪೂರ್ವಕವಾಗಿ ಹಾರಯಿಸುವವರು ಯಾರೋ ಅವರೇ ಯೇಸು ಕ್ರಿಸ್ತರ ಸುವಾರ್ತೆಯನ್ನು ನಂಬಿ, ಅವರೇ ತಮ್ಮ ರಕ್ಷಕರೆಂದು ಶರಣಹೋಗುತ್ತಾರೆ; ಇಂಥಾ ಸಾಧುಸಂತರು ವಿರಳರೆಂದು ಹೇಳಬೇಕು. ಹೆಚ್ಚಿನವರೆಲ್ಲಾ ಲೌಕಿಕ ವ್ಯವಹಾರದಲ್ಲಿ ತತ್ಪರರಾಗಿ, ತಮ್ಮ ಆತ್ಮಚಿಂತನೆಯನ್ನು ಮಾಡದೆ ಸತ್ಯವಂದರೇನು, ಮಿಥ್ಯೆವಂದರೇನು, ದೇವರ ದಯಾಪಾತ್ರನಾಗುವದಂದರೇನು ಎಂದು ಮನವರಿಯದೆ, ದುರ್ಲಕ್ಷ್ಯವಾಗಿ ಕಾಲಹರಣೆ ಮಾಡುತ್ತಾರೆ, ಅವರಿಗೆ ಪರಮಗುರುವಾದ ಯೇಸು ಕ್ರಿಸ್ತನ ಸುವಾರ್ತೆ ಅರೋಚಕವಾಗಿರುವದರಲ್ಲಿ ಆಶ್ಚರ್ಯವೇನು? ಇಂಥವರು ಅಂತ್ಯಕಾಲದಲ್ಲಿ ತಮ್ಮ ದುರ್ಲಕ್ಷ್ಯವನ್ನೂ ಉದಾಸೀನತ್ವವನ್ನೂ ನೆನೆನೆನೆಸಿ ಅಳುವರು. ಆವಾಗಿನ ಅಳಲು ಏನೂ ಪ್ರಯೋಜನಕ್ಕೆ ಬಾರದು. ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರು ತಮ್ಮ ಕೃತ್ಯಗಳು ಕೆಟ್ಟವಾದ್ದರಿಂದ, ಬೆಳಕಿಗಿಂತಲೂ ಕತ್ತಲೆಯನ್ನು ಹೆಚ್ಚಾಗಿ ಪ್ರೀತಿಮಾಡುತ್ತಾರೆ ಎಂದು ಯೇಸು ಕ್ರಿಸ್ತರು ಹೇಳಿದರು; ಕತ್ತಲೆಯೇ ಬೇಕೆಂಬುವವನು ಬೆಳಕಿಗೆ ಬಾರನು. ತನಗೆ ಕತ್ತಲೆ ಬೇಡ ಬೆಳಕೇ ಬೇಕು ಎಂದು, ನಿರ್ಧಾರ ಮಾಡಿದವನು ದೇವರ ದಯೆಯಿಂದ ಯೇಸು ಕ್ರಿಸ್ತರಲ್ಲಿ ಪ್ರಕಾಶಿಸುವ ಬೆಳಕಿಗೆ ಬರುತ್ತಾನೆ.

ವಿದ್ಯಾವಂತರ ಮೇಲೆ ಬೀಳುವ ಉತ್ತರವಾದಿತ್ವ.

ವಿದ್ಯೆಯಿಂದ ಅಧಿಕಾರವೂ, ಬುದ್ಧಿಯೂ, ಪ್ರತಿಷ್ಠೆಯೂ ಹೆಚ್ಚುವವು. ಯಾಕಂದರೆ ಅವಿದ್ಯಾವಂತರಾಗಿಯೂ ಅಜ್ಞಾನಿಗಳಾಗಿಯೂ ಇರುವವರು ತಮಗಿಂತ ವಿದ್ಯಾವಂತರಾಗಿಯೂ ಬುದ್ಧಿವಂತರಾಗಿಯೂ ಇರುವವರ ಮೇಲ್ಪಙ್ತಿಯನ್ನನುಸರಿಸಿ ನಡೆಯುವರು. ಯಾವ ಹೊಸ ಏರ್ಪಾಡಾದರೂ ದೇಶದಲ್ಲಿ ಪ್ರಾಬಲ್ಯಕ್ಕೆ ಬರಬೇಕಾದರೆ ಮೊಟ್ಟಮೊದಲು ಆ ದೇಶದ ಅಗ್ರಗಣ್ಯರೂ ನಾಯಕರೂ ಎನಿಸಿಕೊಳ್ಳುವವರು ಮೊದಲು ಆ ಹೊಸ ಪದ್ಧತಿಯನ್ನು ಪರೀಕ್ಷಿಸಿ, ಅವಲಂಬಿಸಿದರೆ ಇತರ ಜನಗಳು ಸಹ ಕ್ರಮೇಣ ತಮಗಿಂತಲೂ ದೊಡ್ಡವರನ್ನು ಹಿಂಬಾಲಿಸಿ ನಡೆಯುವರು. ಒಂದು ಕ್ರಮ ಅಥವಾ ಪದ್ಧತಿಯು ಜನರಂಜಿತವಾಗಿ, ದೇಶಾಭಿವೃದ್ಧಿ ಪ್ರಜೆಗಳ ಕ್ಷೇಮ ಮುಂತಾದವುಗಳನ್ನು ಹೆಚ್ಚಿಸುವದಾಗಿದ್ದಾಗ್ಯೂ ಆ ದೇಶದ ಅಧಿಕಾರಿಗಳೂ, ವಿದ್ಯಾವಂತರೂ ಅದನ್ನು ಅನುಸರಿಸಿ, ಪ್ರಚಾರಕ್ಕೆ ಬರಮಾಡದೆ ಇದ್ದರೆ ಸಾಧಾರಣ

ಮನುಷ್ಯರು ಆ ಪದ್ಧತಿಯನ್ನು ಮೊದಲು ತಾವೇ ಅನುಸರಿಸಿ, ಅದರಿಂದ ಬರುವ ಫಲಗಳನ್ನು ಅನುಭವಿಸಲಾರರು. ಹೀಗಿರುವದರಿಂದ ದೇಶದಲ್ಲಿ ವಿದ್ಯಾವಂತರಾಗಿ ಎರಡನೆಯವರಿಗೆ ಮೇಲ್ಪಙ್ತಿಗಳಾಗಿರುವವರ ಉತ್ತರವಾದಿತ್ವವು ಬಹಳ ದೊಡ್ಡದು ಎಂದು ಹೇಳುವದರಲ್ಲಿ ಏನೇನೂ ಸಂದೇಹವಿಲ್ಲ. ಅವರು ತಮ್ಮ ನಡತೆ, ಮಾತು, ಕ್ರಿಯೆಗಳಿಗೆ ಉತ್ತರವಾದಿಗಳಾಗಿರುವದಲ್ಲದೆ ತಮ್ಮನ್ನು ನೋಡಿ, ನಡೆಯತಕ್ಕವರ ನಡತೆಗೂ ಬಹಳವಮಟ್ಟಿಗೆ ಅವರೇ ಉತ್ತರವಾದಿಗಳಾಗಿರುತ್ತಾರೆ. ಆದ್ದರಿಂದ ವಿದ್ಯಾವಂತರೂ ಅಧಿಕಾರಿಗಳೂ ಒಂದೊಂದು ಶಾಖೆಯ ಜನಗಳಿಗೆ ಮುಖಂಡರಾಗಿರುವವರೂ ತಮ್ಮ ಮೇಲೆ ಬೀಳುವ ಭಾರವು ದೊಡ್ಡದು ಎಂದು ತಿಳಿಯಬೇಕು. ದೇಶದ ಸಾಧಾರಣ ಜನಗಳ ಸ್ವಭಾವ, ಗುಣ, ನಡತೆ, ಮಾತು, ಕಥೆಗಳಿಗೆ ದೊಡ್ಡವರ, ವಿದ್ಯಾವಂತರ ಸ್ವಭಾವ, ಗುಣ, ನಡತೆ, ಮಾತು, ಕಥೆಗಳೇ ಸೂತ್ರಗಳಾಗಿವೆ. ಆದರೆ ವಿದ್ಯಾವಂತರೂ ದೇಶದ ಮುಖ್ಯಸ್ಥರೂ ತಮ್ಮ ಅಧಿಕಾರ ವಿದ್ಯ ಬುದ್ಧಿಗಳನ್ನು ತಮ್ಮ ದೇಶದ ಅಭಿವೃದ್ಧಿಗೂ ಪ್ರಜೆಗಳ ಏಳಿಗೆಗೂ ಉಪಯೋಗಿಸಿಕೊಳ್ಳದೆ ಸ್ವಾರ್ಥಕ್ಕೂ ಪರಪೀಡನೆಗೂ ದುರ್ನೀತಿಯ ಪ್ರಾಬಲ್ಯಕ್ಕೂ ಉಪಯೋಗಿಸುವವರಾದರೆ ಅವರು ಪ್ರಜೆಗಳ ಶುಭವನ್ನು ಚಿಂತಿಸುವವರಲ್ಲಾ.

ವಿದ್ಯಾವಂತರ ತಿಳುವಳಿಕೆಯು ಹೆಚ್ಚಿದಹಾಗೆಲ್ಲಾ ಅವರು ತಮ್ಮ ಕುಟುಂಬ, ಬಂಧು ಮಿತ್ರರಿಗೂ ಸ್ವದೇಶ ನಿವಾಸಿಗಳಿಗೂ ಮಾಡಬೇಕಾದ ಕರ್ತವ್ಯವು ಹೆಚ್ಚುವದು. ಒಬ್ಬನು ನಾಗರೀಕತೆಯುಳ್ಳವನೂ ವಿವೇಕಿಯೂ ಸತ್ಯಸಂಧನೂ ಪರೋಪಕಾರಿಯೂ ಆಗಿ, ಅನಾಗರೀಕರೂ, ಅಜ್ಞಾನಿಗಳೂ, ಅಸತ್ಯ ಸ್ವಾರ್ಥಪರರೂ ಆಗಿರುವ ಹೆಂಡತಿ ಮಕ್ಕಳು ಬಂಧು ಮಿತ್ರರು ನೆರೆಯವರು ಇವರ ಕೂಡ ಒಡನಾಡುವದು ಹ್ಯಾಗೆ? ಅದು ಅವನಿಗೆ ಕೇವಲ ಅಸಮ್ಮತವಾಗಿ ತನಗೆ ದೈವವು ವಿಧಿಸಿದ ಒಂದು ಶಿಕ್ಷೆಯಂತೆಯೇ ಇರುವದು. ಆದ್ದರಿಂದ ತಾನೇ ಸುಖವಾಗಿಯೂ ಮನೋಲ್ಲಾಸದಿಂದಲೂ ಬದುಕಬೇಕಾದರೆ ತನ್ನಂತೆ ಅವರನ್ನೂ ಮಾಡಿಕೊಳ್ಳಬೇಕಾಗುತ್ತದೆ. ಈಗ ಪಾಶ್ಚಾತ್ಯರ ಸಹಾಯದಿಂದ ಇಂಗ್ಲಿಷ್‌ವಿದ್ಯಶಾಲೆಗಳಲ್ಲಿ ಸುಶಿಕ್ಷಿತರಾಗಿರುವ ವಿದ್ಯಾವಂತರು ತಮ್ಮ ತಿಳುವಳಿಕೆಯನ್ನೂ ನಡತೆಯನ್ನೂ ಪರೀಕ್ಷಿಸಿ ಹೋಲಿಸಿ ನೋಡಬೇಕಾಗಿದೆ. ಅವರು ಬುದ್ಧಿಯಿಂದಲೂ ವಿದ್ಯೆಯಿಂದಲೂ ತಿಳಿದಿರತಕ್ಕದ್ದನ್ನು ನಡತೆಯಲ್ಲಿ ರೂಪಿಸುವವರಾಗಿದ್ದಾರೋ? ಈಗ ಅವರು ಪಾಠಶಾಲೆಗಳಲ್ಲಿ ಓದಿ, ನಿಜವೆಂದು ತಿಳಿದಿರುವ ಭೂಗೋಳ, ಜ್ಯೋತಿಷಗಳನ್ನೂ ಶಾಸ್ತ್ರಗಳಲ್ಲಿಯೂ ಪುರಾಣೇತಿಹಾಸಗಳಲ್ಲಿಯೂ ಇರುವ ಭೂಗೋಳ ಜ್ಯೋತಿಷಶಾಸ್ತ್ರಗಳನ್ನೂ ಸರಿನೋಡಲಿ. ಭೂಮಂಡಲವು ಸಪ್ತಸಾಗರಗಳಿಂದ ಪರಿವೇಷ್ಟಿತವಾಗಿ ಮಂಡಲಾಕಾರವಾದ ಸಪ್ತದೀಪಗಳುಳ್ಳದ್ದಾಗಿದೆ, ಭೂಮಿಯು ಆದಿಶೇಷನ ತಲೆಯ ಮೇಲೆ ಅಥವಾ ಅಷ್ಟದಿಗ್ಗಜಗಳ ಮೇಲೆ ನಿಂತಿದೆ. ಭೂಕಂಪಗಳು ಆದಿಶೇಷನೂ, ದಿಗ್ಗಜಗಳೂ ಭೂಭಾರದಿಂದ ಬೇಸರಗೊಂಡು ತಮ್ಮ ತಲೆಗಳನ್ನು ಅಲ್ಲಾಡಿಸುವದರಿಂದ ಆಗುತ್ತವೆ. ಜಂಬೂವೃಕ್ಷದ ಹಣ್ಣುಗಳು ಒಂದೊಂದು ಆನೆಯ ಗಾತ್ರವಾಗಿದ್ದು ಬಿದ್ದು ಕೊಳೆತು ಅದರ ರಸವು ಜಂಬೂನದಿಯಾಗಿ ಹರಿಯುತ್ತದೆ. ಈ ಮುಂತಾದ ಸ್ವಕಪೋಲ ಕಲ್ಪಿತವಾದ ಭೂಗೋಳವನ್ನು ಈ ಕಾಲದಲ್ಲಿ ಯಾವ ವಿದ್ಯಾವಂತರು ನಂಬುತ್ತಾರೆ?

ಸೂರ್ಯ ಚಂದ್ರರ ಗ್ರಹಣಗಳು ಸೈಂಹಿಕೇಯನೆಂಬ ರಾಕ್ಷಸನ ರುಂಡ ಮುಂಡ ಗಳು ರಾಹುಕೇತುಗಳಾಗಿ ಸೂರ್ಯ ಚಂದ್ರರನ್ನು ನುಂಗುವದರಿಂದ ಆಗುತ್ತವೆ; ಅಂಗಶಾಸ್ತ್ರದಲ್ಲಿ ಯಕೃತ್ಖಂಡದಿಂದ ೧೦೧ ದೊಡ್ಡ ನಾಳಗಳು ಹೊರಟಿವೆ. ಆತ್ಮವು ಬ್ರಹ್ಮನ ಬಳಿಗೆ ಹೋಗುವಾಗ ಅದು ಯಕೃತ್ಖಂಡದ ಮೇಲ್ಭಾಗದಲ್ಲಿ ಹುಟ್ಟಿ, ಶಿರಸ್ಸಿನ ಮೇಲಕ್ಕೆ ಹೋಗುಂಥಾ ಸುಷುಮ್ನೆ ಎಂಬ ನಾಳದ ಮುಖಾಂತರವಾಗಿ ನೆತ್ತಿಯನ್ನು ಭೇದಿಸಿ ಹೊರಟು ಹೋಗುವದು. ಈ ನಾಳಗಳೊಳಗೆ ವಾಯು ಚಲಿಸುತ್ತಾ ಇದೆ. ಈ ಮೊದಲಾದ ಜ್ಯೋತಿಷ ಅಂಗಶಾಸ್ತ್ರಗಳನ್ನು ನಂಬತಕ್ಕ ವಿದ್ಯಾವಂತರು ಯಾರು? ಮತ್ತು ಬಹಳ ಕಾಲದಿಂದ ಈ ದೇಶವನ್ನು ತನ್ನ ಕಾಲುಗಳ ಕೆಳಗೆ ಕ್ರೂರವಾಗಿ ತುಳಿದುಕೊಂಡಿರುವ ಜಾತಿಭೇದ ವಿಗ್ರಹಾರಾಧನೆಗಳನ್ನು ನಂಬುವ ವಿದ್ಯಾವಂತರು ಯಾರು? ಇವುಗಳನ್ನೆಲ್ಲಾ ನಾವು ನಂಬುವದೇ ಇಲ್ಲ. ಇವು ಅಜ್ಜಿ ಕಥೆಗಳಷ್ಟೆ ಎಂಬ ದಾಗಿ ಹೇಳುತ್ತಾರಲ್ಲವೋ? ಹಾಗಾದರೆ ನಮ್ಮ ದೇಶದ ಸ್ತ್ರೀಯರೂ ಇತರ ಜನ ಗಳೂ ದೇಶವಾಸಿಗಳೂ ಯಾಕೆ ಈ ಸುಳ್ಳುಶಾಸ್ತ್ರಗಳನ್ನು ಇನ್ನೂ ನಂಬಿಕೊಂಡಿ ದ್ದಾರೆ. ನೀವು ವಿದ್ಯಾವಂತರಾಗಿದ್ದೀರಿ ಖರೆ, ಆದರೆ ನಿಮ್ಮ ಹೆಂಗಸರು ಅಶ್ವತ್ಥವೃ ಕ್ಷಕ್ಕೆ ಪ್ರದಕ್ಷಿಣೆ ಮಾಡುವದನ್ನೂ ಹುತ್ತಗಳನ್ನೂ ಪೂಜಿಸುವದನ್ನೂ ಬಿಡಲಿಲ್ಲ. ಇದ ಕ್ಕೆಲ್ಲಾ ಯಾರು ಕಾರಣರು? ನೀವು ಮಾರಿ ಮಸಣಿಗಳಾದ ಶಕ್ತಿಪೂಜೆಗಳನ್ನು ನಂಬು ವದಕ್ಕಿಂತ ಶಿಡುಬುರೋಗಕ್ಕೆ ಶಿಡುಬಿಬ್ಬಿಸುವದು, ಮಾರಿ ಉಪದ್ರಕ್ಕೆ ಔಷಧೋಪ ಚಾರ ಮಾಡುವದು ಮೇಲೆಂದು ನಂಬಿದ್ದೀರಿ, ನಿಮ್ಮ ಶಾಸ್ತ್ರಿಗಳೂ ಅವರನ್ನು ಹಿಂಭಾ ಲಿಸಿ ನಡೆಯುವ ಇತರ ಜನಗಳೂ ಯಾವದು ಲೇಸೆಂದು ನಂಬುತ್ತಾರೆ? ಸ್ನೇಹಿತರೇ, ನೀವು ನಿಜವೆಂದು ತಿಳಿದಿರುವದನ್ನು ಯಥಾರ್ಥವಾಗಿ ನಿಮ್ಮ ನಡತೆಯಲ್ಲಿಯೂ ಆಚ ರಿಸುವ ವರೆಗೂ ನಿಮ್ಮ ದೇಶವು ಅಭಿವೃದ್ಧಿಯಾಗದು. ನಿಮ್ಮ ಜನಗಳು ಸತ್ಯಸಂಧರೂ ನೀತಿವಂತರೂ ಪರೋಪಕಾರಿಗಳೂ ದೇವಭಕ್ತರೂ ಆಗರು. ಆದ್ದರಿಂದ ಅವರ ಅಜ್ಞಾನ, ಮೂರ್ಖತ್ವ, ಪಾಪಗಳಿಗೆ ಬಹಳಮಟ್ಟಿಗೆ ಕಾರಣರು ಯಾರು ಎಂದು ವಿವೇಚಿಸಿರಿ. ಸ್ವಾರ್ಥಪರತ್ವವನ್ನೂ ಭಯವನ್ನೂ ಬಿಟ್ಟು ಹಲವು ವಿಷಯಗಳಲ್ಲಿ ನೀವು ಪಡಕೊಂಡ ಜ್ಞಾನವನ್ನು ಉದಾರ ಮನಸ್ಸಿನಿಂದ ನಿಮ್ಮವರಿಗೂ ಕೊಡಿರಿ. ಲೌಕಿಕ ಜ್ಞಾನಕ್ಕಿಂತ ಬಹಳ ಹೆಚ್ಚಾಗಿ ಅಪೇಕ್ಷಿಸತಕ್ಕ ದೇವರ ಜ್ಞಾನವನ್ನೂ ಪಡಕೊಳ್ಳ ತಕ್ಕದ್ದು. ಒಬ್ಬನೇ ಜೀವಂತ ದೇವರಾದ ಯೆಹೋವನನ್ನೂ ಆತನು ಈ ಲೋಕಕ್ಕೆ ಕಳುಹಿಸಿದ ಒಬ್ಬನೇ ರಕ್ಷಕನಾದ ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು. ಲೌಕಿಕ ಜ್ಞಾನವು ಈ ಲೋಕದ ಪೂರ್ತಿಗೆ ಮಾತ್ರವೇ; ದೇವರ ಜ್ಞಾನವು ಇಹದಲ್ಲಿ ಯೂ ಪರದಲ್ಲಿಯೂ ಅಗತ್ಯವು. ಅದನ್ನು ಪಡಕೊಳ್ಳುವದೇ ಮನುಷ್ಯನ ಪರಮ ಪುರುಷಾರ್ಥವು.

ವಿಲಕ್ಷಣ ಪದ್ಧತಿ.

ಚೀನಸಾಮ್ರಾಜ್ಯಕ್ಕೆ ಉತ್ತರದಲ್ಲಿರುವ ಕೊರೆಯರಾಜ್ಯದಲ್ಲಿ ವಿಲಕ್ಷಣವಾದ ಒಂದು ಪುರಾತನ ಕಾಯಿದೆ ನಡವಡಿಕೆಯಲ್ಲಿದೆ. ಏನಂದರೆ ಸೂರ್ಯನು ಅಸ್ತಮಾ ನವಾದ ಮೇಲೆ ಗಂಡಸರು ಯಾರಾದರೂ ತಮ್ಮ ತಮ್ಮ ಮನೆಯನ್ನು ಬಿಟ್ಟು ಹೊರಗೆ

ಹೋಗಬಾರದು. ಈ ಕಾಯಿದೆ ಆ ರಾಜ್ಯದ ರಾಜಧಾನಿಯಾದ ಸೆಯೂಲಿನಲ್ಲಿ ಬಹಳ ಬಿಗಿಯಾಗಿರುವದು. ಅಲ್ಲಿ ಸೂರ್ಯಾಸ್ತಮಾನವಾಗುವದೇ ದೊಡ್ಡ ಘಂಟೆ ಬಾರಿಸುತ್ತಾರೆ. ಘಂಟಾನಾದದ ಸೂಚನೆಯ ಮೇಲೆ ಹೊರಗೆ ಹೋಗಿದ್ದ ಗಂಡಸರೆಲ್ಲರೂ ತ್ವರೆಯಿಂದ ಮನೆಗೆ ಸೇರಿಕೊಳ್ಳಬೇಕು. ಮುಂಗತ್ತಲಾಗುವಾಗ ಪಟ್ಟಣದ ಅಗಸೇ ಜಾಗಲನ್ನು ಮುಚ್ಚುತ್ತಾರಾದ್ದರಿಂದ ಊರ ಹೊರಗೆ ಹೋಗಿದ್ದವರು ಒಳಗೆ ಬರುವ ಉಪಾಯವಿಲ್ಲಾ. ಸೂರ್ಯಾಸ್ತಮಾನದ ತರುವಾಯ ಮನೆಯನ್ನು ಸೇರದೆ ಪೇಟೆಯಲ್ಲಿ ಗಂಡಸರು ಅಡ್ಡಾಡುವವರಾಗಿ ಸಿಕ್ಕಿದರೆ ಪೊಲೀಸಿನವರು ಅವರನ್ನು ಹಿಡಿದು ರಾತ್ರಿಯೆಲ್ಲಾ ಸೆರೆಮನೆಯಲ್ಲಿರಿಸುವರು. ಮರುದಿನ ಬೆಳಿಗ್ಯೆ ಅವರನ್ನು ಕ್ರಮಪ್ರಕಾರ ವಿಚಾರ ಮಾಡಿ, ರಾಜಾಜ್ಞೆ ಮೀರಿದರೆಂದು ಆಪಾದನೆ ಹೊರಿಸಿ ಕೊರಡೆ ಹೊಡೆದು ಬಿಟ್ಟುಬಿಡುವರು. ಹೀಗೆ ಗಂಡಸರಿಗೆ ರಾತ್ರಿವೇಳೆಯಲ್ಲಿ ಮನೆಯ ಹೊರಗೆ ಇರುವದಕ್ಕೆ ಪ್ರತಿಬಂಧಕವಾದರೂ ಹೆಂಗಸರಿಗೆ ಈ ಪ್ರತಿಬಂಧಕವಿಲ್ಲಾ. ಅವರಿಗೆ ಬೇಕಾದಷ್ಟು ಹೊತ್ತು ಹೊರಗೆ ಇರುವದಕ್ಕೆ ನಿರಪ್ಪಣೆಯದೆ. ಅವರು ಗಾಳಿ ತಕ್ಕೊಳ್ಳುವದಕ್ಕೆ ಅಡ್ಡಾಡಿದರೂ ನೆಂಟರ ಪರಿಚಿತರ ಮನೆಗಳಿಗೆ ಹೋದರೂ ಕೇಳುವವರ್ಯಾರೂ ಇಲ್ಲಾ. ಅಲ್ಲಿ ಹೆಂಗಸರ ಮೇಲೆ ಯಾವ ಪ್ರಕಾರದ ಉತ್ತರವಾದಿತ್ವವೂ ಇರುವದಿಲ್ಲಾ. ಅವರ ಸದ್ವರ್ತನೆಯ ಇಲ್ಲವೆ ದುರ್ವರ್ತನೆಯ ಉತ್ತರವಾದಿತ್ವವು ಗಂಡಸರ ಮೇಲೆ ಇರುವದು. ಒಬ್ಬೊಬ್ಬ ಹೆಣ್ಣುಮಗಳನ್ನು ಮದುವೆಯಾದ ಪುರುಷರು ಅವಳ ನಡತೆಗೆ ಉತ್ತರವಾದಿಯಾಗಿರುವನು. ಅವಳಲ್ಲಿ ಅಂಥಾ ಕೆಟ್ಟ ನಡತೆ ಏನಾದರೂ ಬೈಲಿಗೆ ಬಂದರೆ ಅವಳ ಗಂಡನು ಅವಳ ಬದಲಾಗಿ ದಂಡನೆ ಅನುಭವಿಸುವನು. ಹಾಗೆ ಹೆಣ್ಣುಮಕ್ಕಳಿಗೆ ಮದುವೆಯಾಗುವ ಮೊದಲು ತವರುಮನೆಯಲ್ಲಿ ಹೆಸರಿಡುವ ಪದ್ಧತಿಯೂ ಇಲ್ಲಾ, ಮದುವೆಯಾದ ಮೇಲೆ ಗಂಡನ ಮನೆಯಲ್ಲಿ ಅವಳಿಗೆ ಹೆಸರಿಡುವರು. ಕೊರೆಯದೇಶದಲ್ಲಿ ಹೆಂಗಸರ ಪ್ರಾಬಲ್ಯವು ಹೆಚ್ಚು. ಸ್ತ್ರೀಯರಿಗೆ ಇರುವ ಸ್ವತಂತ್ರದಲ್ಲಿಯೂ ಬಿಡುಗಡೆಯಲ್ಲಿಯೂ ಶತಾಂಶವಾದರೂ ಪುರುಷರಿಗಿಲ್ಲಾ. ಹೀಗಿರುತ್ತಾ ಅವರ ಲೇಸು ಹೊಲ್ಲೆ ಕೃತ್ಯಗಳಿಗೆ ನ್ಯಾಯ ದೃಷ್ಟಿಯಲ್ಲಿ ಪುರುಷರೇ ಉತ್ತರವಾದಿಗಳಾಗಿರುವದು ಆಶ್ಚರ್ಯವಾಗಿದೆ. ಒಂದೊಂದು ದೇಶದಲ್ಲಿ ಒಂದೊಂದು ಪದ್ಧತಿ.

ಠ ನೇ ತೀ ವ್ರ್.

(೧೮೬೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟಾಂಪ್ ಹಾಸಲು:
1. (Acknowledgment) ಸುಲಿದ ಒಪ್ಪಿಗೆ ಪತ್ರ . . .	೧ ಆಣೆ
11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಹಾಯಿಸ ತಕ್ಕ ಪತ್ರ, ಇದರಲ್ಲಿ ಚಕ್ಕ್, ದಸ್ತಾವೇಜು, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಸೇರುವದಿಲ್ಲ):—	
a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೫೦ ರೂಪಾಯಿಗೆ ಮೀರಿದರೆ	೧ ಆಣೆ

	ಒಂದಕ್ಕೆ:	ದುಬಾರೆಪ್ರತಿಗೆ:	ತಿಬಾರೆಪ್ರತಿಗೆ:
b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮೀರದ ವಾಯಿದೆ ಇದ್ದರೆ:	ರೂ. ಆ.	ರೂ. ಆ.	ರೂ. ಆ.
ಅದರ ಮೌಲ್ಯ ರೂಪಾಯಿ ೫೦ಕ್ಕೆ ಮೀರದಿದ್ದರೆ	೦ ೩	೦ ೧	೦ ೧
ರೂಪಾಯಿ ೫೦ಕ್ಕೆ ಮೀರಿ ೪೦೦ „	೦ ೪	೦ ೩	೦ ೩
„ ೪೦೦ „ ೬೦೦ „	೦ ೬	೦ ೫	೦ ೫
„ ೬೦೦ „ ೧೦೦೦ „	೦ ೧೦	೦ ೪	೦ ೪
„ ೧೦೦೦ „ ೧೫೦೦ „	೦ ೧೫	೦ ೬	೦ ೪
„ ೧೫೦೦ „ ೧೬೦೦ „	೧ ೦	೦ ೮	೦ ೬
„ ೧೬೦೦ „ ೨೫೦೦ „	೧ ೮	೦ ೧೫	೦ ೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂಶಕ್ಕೆ.	೧ ೮	೦ ೧೫	೦ ೮
೧೦೦೦೦ ರೂಪಾಯಿ ಮೇಲೆ ೬೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂಶಕ್ಕೆ. . . .	೨ ೦	೧ ೮	೧ ೦
೬೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂಶಕ್ಕೆ	೬ ೦	೩ ೦	೨ ೦
c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ—	೧೩ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ		
12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜನ ಮೇಲೆ) ಭರಾವಣಿಚೀಟು	೪ ಆಣೆ		
13. ದಸ್ತಾವೇಜು (ಈ ಆಕ್ಟಿನಿಂದ ಅಥವಾ ೧೮೭೦ನೇ ಇಸ್ವಿ ಕೋರ್ಟ್‌ಫೀಸ್ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—			
ಇದರ ಮೊಬಲಗು ಅಥವಾ ಮೌಲ್ಯ ೧೦ ರೂಪಾಯಿಗೆ ಮೀರದಿದ್ದರೆ	೨ ಆಣೆ		
೧೦ ರೂಪಾಯಿಗೆ ಮೀರಿ ೫೦ ರೂಪಾಯಿಗೆ ಮೀರದಿದ್ದರೆ. .	೪ ಆಣೆ		
೫೦ „ „ ೧೦೦ „ „ . .	೮ ಆಣೆ		
೧೦೦ರೂ.ಮೇಲೆ ೧೦೦೦ರೂ. ವರೆಗೆ ಪ್ರತಿ ರೂ.೧೦೦ಕ್ಕೆ ಯಾ ಅದರಂಶಕ್ಕೆ	೮ ಆಣೆ		
೧೦೦೦„ „ ಪ್ರತಿ ರೂ. ೫೦೦ಕ್ಕೆ ಯಾ ಅದರ ಅಂಶಕ್ಕೆ . .	೨ ರೂಪಾಯಿ ೮ ಆಣೆ		
14. (Bond or Mortgage-Deed) ದಸ್ತಾವೇಜು ಅಥವಾ ಅಡವು ದಸ್ತಾವೇಜು (ಒಂದು ಉದ್ಯೋಗ ಯಾ ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ಬಂದ ಹಣವನ್ನು ಕುರಿತು ಸಮಾಧಾನ ಪಡಿಸ ತಕ್ಕ ಬಗ್ಗೆ ಜವಾಬದಾರಿಯಾಗಿ ಬರಕೊಡುವಂಥಾದ್ದು):—			
a) ಇದರ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ			
b) ಇತರ ಸಂಗತಿಯಲ್ಲಿ	೫ ರೂಪಾಯಿ		

16. ಏಲಂ ಮಾಡಿದ ಆಸ್ತಿ ಬಗ್ಗೆ ಕೊಡ ತಕ್ಕ ದರಖಾಸ್ತ ಪಟ್ಟಿ—21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ (ಇದು ಹಣ ಕೇಳಿದಾಗಲೇ ಕೊಡ ತಕ್ಕದ್ದಾಗಿದ್ದರೆ). . ೧ ಆಣೆ

21. (Conveyance) ಕೊನ್ವೆಯನ್ಸ್, ಕ್ರಯಸಾಧನ, ದಾನಸಾಧನ; ಇದರಲ್ಲಿ ಕಾಣಿಸಿದ ಪ್ರತಿಫಲದ ಮೊಬಲಗು

ರೂ. ೫೦ಕ್ಕೆ ಮೀರದಿದ್ದರೆ . . . . . ೯ ಆಣೆ

" ೫೦ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ . . . . ೧ ರೂಪಾಯಿ

" ೧೦೦ - " ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ ೧ ರೂಪಾಯಿ

" ೧೦೦೦ " " ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂಶಕ್ಕೆ ೫ ರೂಪಾಯಿ

29. ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬೆಲೆಯುಳ್ಳ ಸಾಧನಗಳನ್ನು ಠೇವಣಿ ಇಟ್ಟು, ಆಥವಾ ಚರಸೊತ್ತು ಈಡು ಇಟ್ಟು ಮಾಡಿದ ಸಾಲವನ್ನು ತಿರಿಗಿ ಪಾವತಿ ಮಾಡುವ ಬಂದೋಬಸ್ತಿಗಾಗಿ ಮಾಡುವ ಕರಾರನ್ನು ತೋರಿಸುವ ದಸ್ತಾವೇಜು:—

a) ಸಾಲದ ಹಣವು ಅಂಥಾ ದಸ್ತಾವೇಜಿನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ | 11ನೇ ಅಂಕೆಯ *b*ಯಲ್ಲಿ ಹೇಳಿರುವಷ್ಟೆ ಠಸೆ

b) ೩ ತಿಂಗಳೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ— 11ನೇ *b*ಯಲ್ಲಿಯ ಠಸೆಯ ಅರೆವಾಸಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲ ಹೊರಿಸಿ ಉಂಟಾಗುವ ದಸ್ತಾವೇಜು:— *a)* ಪ್ರಥಮತಾ ಆದ ಅಡವು 44ನೇ ಅಂಕೆಯ *a*ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ . . . . 21ನೇ ಅಂಕೆಯಲ್ಲಿ ಹೇಳಿದ ಕ್ರಯಸಾಧನದಷ್ಟೆ ಠಸೆ

b) ಅಂಥಾ ಅಡವು 44ನೇ ಅಂಕೆಯ *b*ಯಲ್ಲಿ ಹೇಳಿದಂಥಾದ್ದಾಗಿದ್ದರೆ, 13ನೇ ಅಂಕೆಯಲ್ಲಿರುವಷ್ಟೆ ಠಸೆ

32. ಪಾಲುಗಾರಿಕೆ ದಸ್ತಾವೇಜು. . . . . ೧೦ ರೂಪಾಯಿ

33. ಪಾಲುಗಾರಿಕೆ ಅಗಲಿಕೆ ದಸ್ತಾವೇಜು . . . . ೫ ರೂಪಾಯಿ

35. ಸೊತ್ತಿನ ಬದಲಾವಣೆ ಪತ್ರ— | ಅಂಥಾ ಸೊತ್ತಿನ ಕಿಮ್ಮತಿನ ಬಗ್ಗೆ 21ನೇ

36. ದಾನಪತ್ರ— | ಅಂಕೆಯಲ್ಲಿ ಹೇಳಿರುವಷ್ಟೆ ಠಸೆ.

37. ಪಾಲುಪಟ್ಟಿ:—ಇದರಲ್ಲಿ ಪಾಲು ಮಾಡಿಕೊಂಡ ಆಸ್ತಿಗೆ ಕಾಣಿಸಿದ ಮೌಲ್ಯದ ಮೇಲೆ (13ನೇ ಅಂಕೆಯಲ್ಲಿ) ದಸ್ತಾವೇಜಿಗೆ ಹೇಳಿರುವಷ್ಟೆ ಠಸೆ.

39. ಗೇಣಿಚೀಟು (ಗೇಣಿ ಬಗ್ಗೆ ಮಾಡುವ ಕರಾರು ಸಹ):—

a) ಗೇಣಿ ಮೊಬಲಗು ನಿಶ್ಚಯವಿದ್ದು, ಪ್ರೀಮಿಯಮ್ ಯಾನೆ ವಟ್ಟ ಇಲ್ಲದೆ, ಗೇಣಿ ವಾಯಿದೆ ಇಂಥಾದ್ದೆಂದು ನಮೂದಿಸಲ್ಪಟ್ಟು, ಸದರಿ ವಾಯಿದೆ

ಒಂದು ವರ್ಷಕ್ಕೆ ಮೀರದಿದ್ದರೆ . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಒಂದು ವರ್ಷಕ್ಕೆ ಮೀರಿ, ೫ ವರ್ಷಕ್ಕೆ ಮೀರದಿದ್ದರೆ—ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಮೂರು ವರ್ಷಕ್ಕೆ ಮೀರಿ ಇದ್ದರೆ—ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ.

b) ಗೇಣಿ ಮೊಬಲಗು ನಿಶ್ಚಯವಿದ್ದು, ವಟ್ಟ ಕೊಡುವದಿಲ್ಲದೆ, ಗೇಣಿಚೀಟಿನ ವಾಯಿದೆ ಇಂಥಾದ್ದೆಂದು ನಿರಖು ಇಲ್ಲದಿದ್ದರೆ ಪ್ರಥಮದ ೧೦ ವರ್ಷದಲ್ಲಿ ಸರಾಸರಿ ವರ್ಷ ೧ಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

c) ಒಂದು ದಂಡ ಆಥವಾ ಪ್ರೀಮಿಯಮ್ ಯಾನೆ ವಟ್ಟ ಸಲುವಾಗಿ ಗೇಣಿಗೆ ಕೊಡೋಣಾಗಿ, ಗೇಣಿ ಏನಾದರೂ ಬರುವಂಥಾದ್ದು ಇಲ್ಲದಿದ್ದರೆ— ಗೇಣಿಚೀಟಿನಲ್ಲಿ ನಮೂದಿಸಿದ ಸದರಿ ದಂಡ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ವಟ್ಟದ ಸಲುವಾಗಿ ಸಹಾ ಗೇಣಿಗೆ ಕೊಡೋಣಾಗಿದ್ದರೆ— ಗೇಣಿ ಬಗ್ಗೆ ಎಷ್ಟು ಠಸೆ ಬೇಕಾದೀತೋ ಅಷ್ಟು ಹಾಸಲು, ಮತ್ತು ಸದರಿ ದಂಡದ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟು ಠಸೆ ಸಹ.

41. (Letter of Credit) ಲೆಟರ್ ಒಫ್ ಕ್ರೆಡಿಟ್ (ಅಂದರೆ ಇದು ಯಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಅತನಿಗೆ ನಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು). ೧ ಆಣೆ

43. ಒಂದು ಕಂಪೆನಿಯ ಸಂಘದ ಯಾದಾಸ್ತು . . . . ೧೫ ರೂಪಾಯಿ

44. ಅಡಮಾನಸಾಧನ (14, 15, 29, ಆಥವಾ 55ನೇ ಅಂಕೆಗಳಲ್ಲಿ ಏರ್ಪಡಿಸದೆ ಇರುವಂಥಾ ತರದ್ದು):—

a) ಸಾಧನ ಬರೆದು ಕೊಡುವ ಸಮಯದಲ್ಲಿ ಅದರಲ್ಲಿ ನಮೂದಿಸಿದ ಸೊತ್ತನ್ನು ಯಾ ಅದರ ಅಂಶವನ್ನು ಅಡವುದಾರಗೆ ಒಪ್ಪಿಸಿಕೊಟ್ಟರೆ, ಇಲ್ಲವೆ ಒಪ್ಪಿಸಿಕೊಡುವರೆ ಸಮ್ಮತಿಸಿದರೆ . . . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟುಕೊಡದೆ ಯಾ ಒಪ್ಪಿಸಲಿಕ್ಕೆ ಸಮ್ಮತಿಸದೆ ಇದ್ದ ಪಕ್ಷಕ್ಕೆ— . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

46. (Note or Memorandum) ನೋಟು ಯಾ ಮೆಮೊರಂಡಮ್ (ಅಂದರೆ ಒಬ್ಬ ದಲಾಲ ಯಾ ಮುತ್ತಾಲಿಕನು ತನ್ನ ಧನಿಗೋಸ್ಕರ ಇಪ್ಪತ್ತು ರೂಪಾಯಿಗೆ ಮೀರಿದ ಯಾವ ಜೀನಸನ್ನಾಗಲೀ ಕೊಂಡಿರುವದಾಗಿ ಇಲ್ಲವೆ ಮಾರಿದ್ದಾಗಿ ಸದರಿ ಧನಿಗೆ ತಿಳಿಸುವ ಚೀಟು ಯಾ ಯಾದಾಸ್ತು) ೧ ಆಣೆ

50. (Power-of-Attorney) ಪವರ್-ಒಫ್-ಎಟ್ಟರ್ನಿ (ಮೊಕ್ತಾರನಾಮೆ):—

a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಿಸ್ತ್ರೀ ಬಗ್ಗೆ ಹಾಜರು ಪಡಿಸುವದಕ್ಕೆ ಪೂರ್ತಿ ಉಂಟಾದರೆ ೯ ಆಣೆ

b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕ ಜನರಿಗೆ ಅಧಿಕಾರ ಕೊಡುವದಾದರೆ . . . . . ೧ ರೂಪಾಯಿ

c) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಹೆಚ್ಚು ಕಾರ್ಯಗಳಲ್ಲಿ ಅಗಲಿ ಸಾಮಾನ್ಯವಾಗಿ ಅಗಲಿ ಪ್ರವರ್ತಿಸಲಿಕ್ಕೆ ×ಕ್ಕೆ ಮಾರದಷ್ಟು ಮುಂದಿಗೆ ಅಧಿಕಾರ ಕೊಡುವದಾದರೆ . . . . . × ರೂಪಾಯಿ

d) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಹೆಚ್ಚು ಕಾರ್ಯಗಳಲ್ಲಿ ಅಗಲಿ ಸಾಮಾನ್ಯವಾಗಿ ಅಗಲಿ ಪ್ರವರ್ತಿಸಲಿಕ್ಕೆ ×ಕ್ಕೆ ಮಾರಿ ೧೦೦ಕ್ಕೆ ಮಾರದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ . . . . ೧೦ ರೂಪಾಯಿ

e) ಇತರ ಸಂಗತಿಯಲ್ಲಿ . . . . ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ

52. ಮೊಬಲಗು ಯಾ ಮೌಲ್ಯ ಇಪ್ಪತ್ತು ರೂಪಾಯಿಗೆ ಮೀರಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಬಂದದ್ದಕ್ಕೆ ಕೊಡುವ ರಶೀದಿ . ೧ ಆಣೆ

53. ಅಡವಿನ ಸೊತ್ತನ್ನು ತಿರಿಗಿ ಕೊಡುವ ದಸ್ತಾವೇಜು:—

a) ಅಡವಿನ ಹಣ ೧೦೦೦ ರೂಪಾಯಿಗೆ ಮೀರದಿದ್ದರೆ. . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೧೦ ರೂಪಾಯಿ

54. (Release) ರಿಲೀಜ್ ಯಾನೆ ಖುಲಾಸಪತ್ರ (ಅಂದರೆ ಒಬ್ಬನು ಮತ್ತೊಬ್ಬನ ಮೇಲಾಗಲಿ ಫಲಾನೆ ಸೊತ್ತಿನ ಮೇಲಾಗಲಿ ತನಗಿರುವ ಬಾಧ್ಯತೆಯನ್ನು ಬಿಟ್ಟುಬಿಡುವ ದಸ್ತಾವೇಜು):—

a) ಬಾಧ್ಯತೆಯ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . × ರೂಪಾಯಿ

57. (Settlement) ಸೆಟ್ಲ್‌ಮೆಂಟ ಯಾನೆ ವ್ಯವಸ್ಥಾಪತ್ರ— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

58. (Shipping Order) ಸಿಪ್ಪಿಂಗ್ ಒರ್ಡರ್ (ಅಂದರೆ ಜಹಜನ ಮೇಲೆ ಜೀನಸುಗಳನ್ನು ವೈಯುವದಕ್ಕೆ ಕೊಡುವ ಪತ್ರ) . . . . ೧ ಆಣೆ

59. ಗೇಣಿ ಸೋಡಚೀಟು:—

a) ಗೇಣಿಚೀಟಿನ ಠಸೆ × ರೂಪಾಯಿಗೆ ಮೀರದಿದ್ದರೆ— ಗೇಣಿಚೀಟಿನಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . × ರೂಪಾಯಿ

60. (Transfer) ಟ್ರಾನ್ಸ್‌ಫರ್ (ಪರಭಾರೆಪತ್ರ ಯಾ ಮೇಲ್ಸಾಧನ):—

a) ಯಾವದೊಂದು ಕಂಪನಿಯ ಯಾ ಸಂಘದ ಪಾಲುಗಳ—21ನೇ ಅಂಕೆಯಲ್ಲಿ ಕಾಣಿಸಿದ ಹಾಸಲಿನ ಕಾಲವಾಸಿ.

b) ದಸ್ತಾವೇಜು, ಗೇಣಿ, ಅಡವು, ಯಾ ಪೊಲಿಸಿ ಆಫ್ ಇನ್ಶೂರೆನ್ಸ (ಬೀಮ ಉತ್ತಾಯಿಸೋಣ)ದ ಎನೊಂದು ಸಮ್ಮಂಧ—ಆ ದಸ್ತಾವೇಜು, ಗೇಣಿ, ಅಡವುದಸ್ತಾವೇಜು, ಯಾ ಪೊಲಿಸಿ ಆಫ್ ಇನ್ಶೂರೆನ್ಸ ಹಾಸಲು × ರೂಪಾಯಿಗೆ ಮೀರದಿದ್ದರೆ, ಅದರಷ್ಟೆ ಹಾಸಲು

ಇತರ ಸಂಗತಿಯಲ್ಲಿ— × ರೂಪಾಯಿ

ಲಿ ಸಂಪೂರ್ಣನಾಗಿ ನಡೆದು, ನೀತಿಯನ್ನು ಮಾಡಿ, ತನ್ನ ಹೃದಯದಲ್ಲಿ

(ಕೋರ್ಟ್‌ಫೀಸ್ ಆಕ್ಟ್ ಶಡ್ಯೂಲ್ II.)

6. (Bail-bond) ಜಾಮೀನ್‌ದಸ್ತಾವೇಜು, ಅಂದರೆ ಕ್ರಿಮಿನಲ್ ಯಾ ಕ್ರಿಮಿನಲ್ ಪ್ರೊಸಿಜ್ಯರ್ ಕೋಡಿನ ಮೇರೆಗೆ ಒಂದು ಕೋರ್ಟಿನಿಂದಾಗಲೀ ಮೆಜಸ್ಟ್ರೇಟರಿಂದಾಗಲೀ ಕೊಡೋಣಾಗುವ ಹುಕುಮ್ ಪ್ರಕಾರ ಆಗುವ ಜವಾಬುದಾರಿಪತ್ರ—(ಬಾತಿಕಾಗದದ ಮೇಲೆ ಬರದು) ೯ ಆಣೆ ಚೀಟು ಹಚ್ಚುವದು.

ತಸೇ ಹಾಸಲು ಮಾಫಿ ಇರುವ ಕೆಲವು ದಸ್ತಾವೇಜುಗಳು.

೩. ೧) ೪೬ನೇ ಅಂಕೆಯಲ್ಲಿ ಹೇಳಿರುವ ನೋಟು ಯಾ ನೆಗೊರಂಡಮ್ ಸ್ವಭಾವದ್ದಾಗಿರದೆ, ಯಾವ ದೊಂದು ಚರಸೊತ್ತು ಯಾ ಸರಕಿನ ಮಾರಾಟದ ಸಮ್ಮಂಧವಾಗುವ ಯಾವದೊಂದು ಕರಾರು ಯಾ ಕರಾರಿನ ಯಾದಾಸ್ತು.

೧೬. ಗೇಣಿಚೀಟುಗಳೂ ಅವುಗಳ ಎದುರ್ನುಡಿಗಳೂ:—೬) ಯಾವ ದಂಡವಾಗಲೀ ವಟ್ಟವಾಗಲೀ ಕೊಡದೆ ಒಬ್ಬ ವ್ಯವಸಾಯಗಾರನು ಬರಕೊಡುವ ಗೇಣಿಚೀಟು; ಇದರಲ್ಲಿ ನಿರಖು ವಾಯಿದೆ ನಮೂದಿಸಿದ್ದರೆ ಮತ್ತು ಸದರಿ ವಾಯಿದೆ ಒಂದು ಸಂವತ್ಸರಕ್ಕೆ ಮೀರದೆ ಇದ್ದರೆ, ಅಥವಾ ಅದರ ವರ್ಷಾವಧಿ ಒಟ್ಟಾರೆ ಗೇಣಿ ೧೦೦ ರೂಪಾಯಿಗೆ ಮೀರದಿದ್ದರೆ; ೮) ಒಬ್ಬ ವ್ಯವಸಾಯಗಾರನಿಗೆ ಕೊಡುವ ಗೇಣಿಚೀಟಿನ ಎದುರ್ನುಡಿ.

೧೫. ರಶೀದಿ:—೩) ಕ್ರಮವಾಗಿ ರಸೇ ಮೇಲೆ ಅದಂಥಾ ಯಾವ ದಸ್ತಾವೇಜನಲ್ಲಾಗಲೀ ನಮೂದಿಸಿರುವ ಪ್ರತಿಫಲ ಬಂತೆಂದು ಅಥವಾ ಅದರಿಂದ ಭದ್ರ ಪಡಿಸಿರುವ ಅಸಲು ಆಗಲೀ ಬಡ್ಡಿ ಆಗಲೀ ವರ್ಷಾಶನವಾಗಲೀ ಕಾಲಾವಧಿ ಸಂದಾಯವಾಗ ತಕ್ಕ ಬೇರೆ ಹಣವಾಗಲೀ ಬಂತೆಂದು ಕೊಡುವ ರಶೀದಿ; ೮) ಪ್ರತಿಫಲವಿಲ್ಲದೆನೇ ಹಣ ಪಾವತಿ ಆದ್ದಕ್ಕೆ ರಶೀದಿ; ೯) ಬೇಂಕರ್ ಅಂದರೆ ಒಬ್ಬ ಸಾವಕಾರನ ಕೈಯಲ್ಲಿ ಠೇವಣಿ ಇಟ್ಟ ಹಣದ ಬಗ್ಗೆ ಯಾ ಹಣದ ಪಾತರೀ ಬಗ್ಗೆ ಕೊಡುವ ರಶೀದಿ. ಪರಂತು ಸದರಿ ಹಣಕ್ಕಾಗಿ ಯಾರಿಗೆ ಉತ್ತರ ಜೋಳ ತಕ್ಕದ್ದೋ ಅವನಿಗೆ ಹೊರ್ತು ಬೇರೆ ಯಾರಾದರೂ ತಿಸಿಕೊಳ್ಳುವಂತೆ ನಮೂದಿಸಿರ ಬಾರದು. ಈ ಮಾಫಿಯು ಒಂದು ಸಂಘದ ಹಿಸೆಗೆ, ಅಥವಾ ಹಿಸೆಯ ನಿರ್ಣಯಪತ್ರದ ಪ್ರಕಾರ ಕೊಡೋಣಾಗುವ ಇಲ್ಲವೆ ಠೇವಣಿ ಇಡೋಣಾಗುವ ಹಣಕ್ಕಾಗಿ ಕೊಡುವ ರಶೀದಿಗೆ ಸಂಬಂಧಿಸುವದಿಲ್ಲ.

೧೬. ಗೇಣಿಸೋಡಚೀಟು—ಅಂಥಾ ಗೇಣಿಚೀಟಿಗೆ ತಸೆ ಮಾಫಿ ಆಗಿದ್ದರೆ.

೧೭. ಮೇಲ್‌ಚೀಟು ಯಾನೆ ಎಂಡಾರಸ್ ಮೂಲಕವಾಗಿ ವಟಾಯಿಸ ತಕ್ಕ ಹುಂಡಿ, ಚೆಕ್ಕು, ಇಲ್ಲವೆ ಪ್ರೊಮಿಸರಿ ನೋಟನ್ನು ಪರ್ಗ ಯಾನೆ ಪರಾಧೀನ ಮಾಡುವ ಪತ್ರ.

ದಸ್ತಾವೇಜುಗಳನ್ನು ರಿಜಿಸ್ಟ್ರಿ ಮಾಡುವ ಬಗ್ಗೆ ರಿಜಿಸ್ಟ್ರಾರರಿಗೆ ತೆರ ತಕ್ಕ ಫೀಸಿನ ದರ.

										ರೂ.	ಆ.
ದಸ್ತಾವೇಜನ ಮೌಲ್ಯ		೩೫	ರೂಪಾಯಿಗೆ	ಮೀರದಿದ್ದರೆ	.	.	.	.	.	೦	೯
"	"	೩೫	"	ಮೀರಿ	೫೦	ರೂಪಾಯಿಗೆ	ಮೀರದಿದ್ದರೆ			೦	೧೩
"	"	೫೦	"	"	೧೦೦	"	"			೧	೦
"	"	೧೦೦	"	"	೫೦೦	"	"			೧	೯
"	"	೫೦೦	"	"	೫೦೦	"	"			೩	೦
"	"	೫೦೦	"	"	೧೦೦೦	"	"			೬	೦
"	"	೧೦೦೦	"	"	೫೦೦೦೦	ರೂಪಾಯಿ	ವರೆಗೆ	ಪ್ರತಿ	ಹೆಚ್ಚಿಗೆ		
					೧೦೦೦	ರೂಪಾಯಿಗೆ	ಯಾ ಅದರ	ಅಂಶಕ್ಕೆ		೧	೦
"	"	೫೦೦೦೦	ರೂ. ಮೇಲೆ	ಪ್ರತಿ	೧೦೦೦	ರೂಪಾಯಿಗೆ	ಯಾ ಅದರ	ಅಂತಕ್ಕೆ		೦	೯
ಪವರ್ ಒಫ್ ಎಟರ್ನಿ ಅಂದರೆ ವಕಾಲತಿನ ರಿಜಿಸ್ಟ್ರೀ ಬಗ್ಗೆ										೩	೯

ಟಪ್ಪಾಲಿನ ವಿಷಯ ಮುಖ್ಯ ಕ್ರಮಗಳು.

ಮುಂದಿನ ಕ್ರಮಗಳು ಹಿಂದುಸ್ಥಾನದಲ್ಲಿಯೂ ಶಿಂಹಳದ್ವೀಪ ಅದೆನ್ ಬರ್ಮಾ ಮುಂತಾದ ಅದರ ಸರೆಸೀಮೆಗಳಲ್ಲಿಯೂ ನಡಿಯುವ ಟಪ್ಪಾಲ ಸಂಬಂಧವಾಗಿರುತ್ತವೆ.

ಕೋವಿಮದ್ದು ಮುಂತಾದ ಜ್ವಲನಾಸ್ಪದವಾದ ಒಡವೆಗಳು, ಬಂಡು, ಹೇಸಿಕೆ ತರಹ ಇಲ್ಲವೆ ಕಲಹ ಹುಟ್ಟಿಸುವ ತರದ ಬರಹ, ಛಾಪೆ, ಚಿತ್ರ, ಸಳ್ಳೆ, ಗೊಂಬೆ, ಪುಸ್ತಕ, ಇಂಥಾದ್ದನ್ನು ಟಪ್ಪಾಲದ್ವಾರಾ ರವಾನಿಸ ಬಾರದು. ಗುಂಡುಸೂಜಿಗಳನ್ನು ಟಪ್ಪಾಲ ಕಟ್ಟುಗಳಿಗೆ ಉಪಯೋಗಿಸಬಾರದು.

ಒಬ್ಬನು ತನ್ನ ಹೆಸರಿಗೆ ಬಂದ ಲಫೋಟೆ ಇಲ್ಲವೆ ಕಟ್ಟನ್ನು ತೆರಿಯದೆ ವಾಪಸು ಮಾಡಿದ ಪಕ್ಷಕ್ಕೆ, ಅವನು ಅದರ ದಸ್ತೂರಿ ತೆರಲಿಕ್ಕೆ ಬದ್ಧನಾಗುವದಿಲ್ಲ; ಒಂದು ವೇಳೆ ಅವನು ಅದನ್ನು ತೆರದಾಗ್ಯೂ, ಅವನ ಮೇಲೆ ದ್ವೇಷದಿಂದ ಯಾರಾದರೂ ಕಳುಹಿಸಿದ್ದಿಂತ ಅದು ತಲ್ಪಿದ ಆಫೀಸಿನ ಪೋಸ್ಟ್‌ಮಾಸ್ಟರಿಗೆ ಕಂಡರೆ, ಆ ಆಫೀಸರು ಅದರ ದಸ್ತೂರಿಯನ್ನು ಮಾಫ ಮಾಡಬಹುದು.

ಒಂದು ಲಿಫಾಪೆ ಇಲ್ಲವೆ ಕಟ್ಟನ್ನು ತೆರಿಯದೆ ಬೇರೊಂದು ವಿಳಾಸಕ್ಕೆ ತಿರಿಗಿ ರವಾನಿಸಬಹುದು; ಆ ಪ್ರಕಾರ ರವಾನಿಸಿದ್ದಾದರೆ, ಅದಕ್ಕೆ ಪ್ರತ್ಯೇಕ ದಸ್ತೂರಿ ಕೊಡಬೇಕೆಂದಿಲ್ಲ.

ಟಪ್ಪಾಲಿಗೆ ಹಾಕಿದ ಯಾವ ಲಿಫಾಪೆಗೆ, ಕಾರ್ಡಿಗೆ, ಯಾ ಕಟ್ಟಿಗೆ ರಸೀದಿ ಸಿಕ್ಕುವದಿಲ್ಲವೋ, ಅಂಥಾದ್ದನ್ನು ಟಪ್ಪಾಲಿಗೆ ಹಾಕಿದ ಗುರುತಿಗಾಗಿ ಸರ್ಟಿಫಿಕೇಟನ್ನು ಪಡಕೊಳ್ಳಬಹುದು. ಹ್ಯಾಗಂದರೆ, ಅದರ ಮೇಲುವಿಳಾಸದ ಯಥಾಪ್ರತಿಯನ್ನು ಬೇರೊಂದು ಕಾಗದದ ಮೇಲೆ ಬರದು, ಅದಕ್ಕೆ ಅರ್ಧ ಆಣೆಯ ಚೀಟು ಹಚ್ಚಿ, ಅವೆರಡನ್ನು ಪೋಸ್ಟ್ ಆಫೀಸಿಗೆ ಹಾಜರು ಮಾಡಿದಲ್ಲಿ, ಅವರು ಚೀಟನ್ನು ರದ್ದು ಮಾಡಿ ತಾರೀಕಿನ ಮುದ್ರೆ ಸಹ ಒತ್ತಿ, ಅದನ್ನು ಹಾಜರು ಮಾಡಿದ ಮನುಷ್ಯನಿಗೆ ವಾಪಸು ಕೊಡುವರು. ಇದು "ಸರ್ಟಿಫಿಕೇಟು" ಅನ್ನಿಸಿಕೊಳ್ಳುತ್ತದೆ. ಒಬ್ಬನು ಒಂದೇ ದಿನ ಟಪ್ಪಾಲಿಗೆ ಹಾಕುವ, ಅರಕ್ಕೆ ಮಾರದ ಲಫೋಟೆ ಯಾ ಲಿಫಾಪೆಗಳ ಬಗ್ಗೆ ಒಂದೇ ಅರ್ಧ ಆಣೆ ಕೊಟ್ಟು ಸರ್ಟಿಫಿಕೇಟು ಪಡಕೊಳ್ಳಬಹುದು.

ಒಂದು ಲಿಫಾಪೆಗೆ ಇಲ್ಲವೆ ಮುಂದೆ ಹೇಳಿರುವ ಬುಕ್‌ಪೆಕೆಟ್ ಯಾ ಪೆಟರ್ನ್‌ಪೆಕೆಟ್ ಎಂಬ ಕಟ್ಟಿಗೆ ದಸ್ತೂರಿ ಮುಂದಾಗಿ ಹಚ್ಚಿದೆ ಇದ್ದರೆ, ಇಲ್ಲವೆ ಹಚ್ಚಿದ ದಸ್ತೂರಿ ನಿರಖಿಗೆ ಕಡಿಮೆಯಾದರೆ, ಆ ಲಿಫಾಪೆಯನ್ನು ಯಾ ಕಟ್ಟನ್ನು ಹೊಂದುವವನು ಆ ದಸ್ತೂರಿಯ ಇಲ್ಲವೆ ಕಡಿಮೆಯಾದದರ ಇಮ್ಮಡಿ ಹಾಸಲ ತೆರ ಬೇಕು.

ಒಂದು ಟಪ್ಪಾಲ ಕಾರ್ಡು, ಲಿಫಾಪೆ, ಪೆಕೆಟು, ಇಲ್ಲವೆ ರಿಜಸ್ತ್ರಿಯಾಗದ ಪಾರ್ಸಲು ಹೆಚ್ಚು ಭದ್ರತೆಯಿಂದ ತಲಪಿಸಬೇಕೆಂಬವರು ಎರಡು (೨) ಆಣೆ ಕೊಟ್ಟು ಅದನ್ನು ರಿಜಸ್ತ್ರಿ ಮಾಡಿಸಬಹುದು. ಹ್ಯಾಗಂದರೆ: ರವಾನಿಸುವವನು ಅದು ಹೊಂದತಕ್ಕವನ ಮೇಲ್ವಿಳಾಸ, ಅದರ ಎಡಭಾಗದ ಕೆಳಗೆ ತನ್ನ ಹೆಸರು, ವಿಳಾಸ ಸಹ ಸ್ಪಷ್ಟವಾಗಿ ಬರೆದು, ಅದಕ್ಕೆ ನಿರಖು ಇರುವ ಚೀಟು ಮತ್ತು ರಿಜಸ್ತ್ರೀ ಬಗ್ಗೆ ಎರಡು ಆಣೇ ಚೀಟು ಸಹ ಹಚ್ಚಿ, ಟಪ್ಪಾಲು ಕೈದು ಆಗುವ ಮುಂಚೆ ಟಪ್ಪಾಲುಕಟ್ಟೆಯಲ್ಲಿ ಒಪ್ಪಿಸಬೇಕು; ಅವರು ಅದನ್ನು ರಿಜಸ್ತ್ರಿ ಮಾಡಿ, ಛಾಪಾ ರಸೀದಿ ಕೊಡುವರು. ಮತ್ತು ಸದರಿ ಕಾರ್ಡು, ಲಿಫಾಪೆ, ಪೆಕೆಟು ಯಾ ಪಾರ್ಸಲ ಹೊಂದಿದವನಿಂದ ಪಾವತಿರಸೀದಿ ತರಿಸಿ ಕೊಡಬೇಕಾದರೆ, ಹೆಚ್ಚಿಗೆ ೧ ಆಣೆ ಚೀಟು ಅದಕ್ಕೆ ಹಚ್ಚಿದ್ದಾದರೆ, ಆ ಪ್ರಕಾರ ತರಿಸಿ ಕೊಡೋಣವಾಗುವದು.

(Letter Post) ಕಾಗದಟಪ್ಪಾಲು.

ಈ ಟಪ್ಪಾಲದ್ವಾರಾ ಕಳುಹಿಸುವ ಲಿಫೋಟಿಗಳಿಗೆ ಹಚ್ಚ ತಕ್ಕ ಟಪ್ಪಾಲ ಹಾಸಲಿನ ವಿವರ:—

	ಅ.	ಪೈ
ಛಾರದಲ್ಲಿ ½ ತೊಲೆಗೆ ಮಿಾರದಿದ್ದರೆ	೦	೬
" ½ " "	೧	೦
ಹೆಚ್ಚಿಗೆ ಪ್ರತಿ ೧ ತೊಲೆಗೆ ಯಾ ಅದರಂಶಕ್ಕೆ	೧	೦
ಟಪ್ಪಾಲ ಕಾರ್ಡು ಒಂದಕ್ಕೆ	೦	೩
ಉತ್ತರ ಸಿಗತಕ್ಕ ಜೋಡು ಕಾರ್ಡಿಗೆ	೦	೬

ಕಾರ್ಡಿನ ಮುಂದಗಡೆ ವಿಳಾಸ ಮಾತ್ರ ಹೊರ್ತು, ಹೆಚ್ಚಿಗೇನೂ ಬರಿಯಬಾರದು. ಅದರ ಹಿಂಬದಿಯಲ್ಲಿ ಬರಿಯುವದಾಗಲಿ ಛಾಪಿಸುವದಾಗಲಿ ಮಾತ್ರ ನಲ್ಲದೆ ರಸೀದಿ ಮುಂತಾದ ಚೀಟು ಸಹ ಹಚ್ಚಿ ಬಹುದು. ಜೋಡು ಕಾರ್ಡನ್ನು ಬೇರೆ ಬೇರೆಯಾಗಿಯೂ ಪ್ರಯೋಗಿಸಬಹುದು.

೩ ಪೈ ಕಾರ್ಡು, ೬ ಪೈ ಜೋಡು ಕಾರ್ಡು, ½, ¼, ೧, ೧½, ೩, ೩½, ೫, ೪, ೬, ೯, ೧೫ ಆಣೇ, ೧ ರೂ., ೩ ರೂ., ೫ ರೂ., ೫ ರೂ. ಚೀಟುಗಳೂ, ½, ¼, ೧, ೩, ೩½ ಆಣೆಯ ಚೀಟಿನ ಲಫೋಟೆಗಳೂ, ½, ೧ ಆಣೆಯ ಸುತ್ತುವ ಕಾಗದಗಳೂ ಸಿಗುತ್ತವೆ.

ಬುಕ್‌ಪೆಕೆಟ್ ಮತ್ತು ಪೆಟರ್ನ್‌ಪೆಕೆಟ್

	ಅ.	ಪೈ
ಛಾರದಲ್ಲಿ ೧೦ ತೊಲೆಗೆ ಮಿಾರದಿದ್ದರೆ	೦	೬
ಹೆಚ್ಚಿಗೆ ಪ್ರತಿ ೧೦ " ಯಾ ಅದರಂಶಕ್ಕೆ	೦	೬

ಪೆಕೆಟು ಯಾವ ಆಕೃತಿಯಲ್ಲಿಯೂ ಇರಬಹುದು; ಆದರೆ ೩ ಫೂಟ್ ಉದ್ದ ೧ಫೂಟ್ ಅಗಲ ಅಥವಾ ದಪ್ಪಕ್ಕೆ ಮಿಾರಬಾರದು. ಸಪುರವಾಗಿದ್ದರೆ, ೩೦ ಇಂಚಿಗೆ ಮಿಾರಬಾರದು. ಬುಕ್‌ಪೆಕೆಟಿನ ಛಾರದ ವಿಷಯದಲ್ಲಿ ಪ್ರತ್ಯೇಕ ನಿರಖು ಇಲ್ಲ; ಆದರೆ ಪೆಟರ್ನ್‌ಪೆಕೆಟು ಛಾರದಲ್ಲಿ ೪೦ ತೊಲೆಗೆ ಮಿಾರಬಾರದು.

ಪಾರ್ಸೆಲ್: ರಿಜಸ್ತ್ರಿ ಆದ್ದಕ್ಕೆ. ರಿಜಸ್ತ್ರಿ ಆಗದ್ದಕ್ಕೆ.

	ಅ.	ಅ.
೩೦ ತೊಲೆಗೆ ಮಿಾರದಿದ್ದರೆ	೪	೩
೪೦ " "	೫	೪
ಹೆಚ್ಚಿಗೆ ಪ್ರತಿ ೪೦ ತೊಲೆಗೆ ಯಾ ಅದರಂಶಕ್ಕೆ	೪	೪

ಎಲ್ಲಾ ತರದ ಪಾರ್ಸೆಲುಗಳ ಟಪ್ಪಾಲಹಾಸಲ ಚೀಟು ಹಚ್ಚಿ ತೆರಬೇಕು. ರಿಜಸ್ತ್ರಿ ಆಗದ್ದು ೪೪೦ ತೊಲೆಗೆ, ರಿಜಸ್ತ್ರಿ ಆದ್ದು ೩೦೦೦ ತೊಲೆಗೆ ಮಿಾರದಾರದು, ಮತ್ತು ವೈಯಲಿಕ್ಕೆ ತೊಂದರೆಯೂ ಜೋಕುಮೂ ಇರದಾರದು.

"ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್":—(1) ಖಾಲಿ ಇಲ್ಲವೆ ಛಾಪೆಯಾದ ಪುಸ್ತಕ, ವರ್ತಮಾನಪತ್ರ, ಚಿತ್ರ, ನಕ್ಷೆ, ಛಾಪಿಸಿದ್ದೇನಾದರೂ, ಬರದು ತಿಳಿಸುವ ಯಾ ಲೇಖನಸ್ವಭಾವದ್ದಾಗಿರದೆ ಕಾರ್ಯಸಂಬಂಧವಾಗಿ ಬರೆಯಲ್ಪಟ್ಟ ದಸ್ತಾವೇಜು ಇಲ್ಲವೆ ಇತರ ಬರಹ, ಛಾಪಿಸುವದಕ್ಕಾಗಿ ಯಾವದೊಂದು ಛಾಪಖಾನೆಗೆ ಯಾ ವರ್ತಮಾನಪತ್ರಕ್ಕೆ ರವಾನಿಸಲ್ಪಡುವ ಕೈಬರಹದ ಕಾಗದಗಳು, ಒಮ್ಮೆ ಬರದುಹೋಗಿ ಹಳೆತಾದ ಕಾಗದಪತ್ರಗಳು, ಇಂಥಾದ್ದೆಲ್ಲ "ಬುಕ್‌ಪೆಕೆಟಿಗೆ" ಸೇರುತ್ತವೆ. ಅದಲ್ಲದೆ ವ್ಯಾಪಾರದ ನಮೂನೆ ಯಾ ಕೆಲಸದ ಮಾದರಿಯುಳ್ಳ ಯಾವದೊಂದು ಕಟ್ಟು, ಅದಕ್ಕೆ ಕ್ರಯ ಹಿಡಿಯದೆ ರವಾನಿಸಲ್ಪಟ್ಟ ವಕ್ತಿಕ್ಕೆ, "ಪೆಟರ್ನ್‌ಪೆಕೆಟ್" ಅನ್ನಿಸಿಕೊಳ್ಳುತ್ತದೆ. (2) ಪೆಕೆಟು ಬರಿದಾಗಿ ಆಗಲಿ ಉಭಯ ಕಡೆಗಳಲ್ಲಿ ಖುಲ್ಲಾ ಬಿಟ್ಟು ಆದರೊಳಗಿರುವದನ್ನು ಬಿಚ್ಚಿ ನೋಡುವ ಹಾಗೆ ಕಟ್ಟಿ ಆಗಲಿ ತರಬೇಕು. (3) ಪೆಕೆಟಿಗಾಗಲೀ ಪೆಟರ್ನ್‌ಗಾಗಲೀ ನಿರಬಿರುವ ದಸ್ತೂರಿ ಮುಂದಾಗಿ ಹಚ್ಚಬೇಕು; ಹಚ್ಚದೆ ರವಾನಿಸಿದರೆ, ದಸ್ತೂರಿಯ ದುಪ್ಪಾರಿ, ಇಲ್ಲವೆ ಹಚ್ಚಿದ ದಸ್ತೂರಿ ಕಡಿಮೆಯಾಗಿ ಹೋದರೆ, ಆ ಬಾಕಿಯ ದುಪ್ಪಾರಿ ಹಾಸಲು ಪೆಕೆಟ್ ಹೊಂದಿದವನು ರೊಕ್ಕವಾಗಿ ತೆರಬೇಕು. (4) ಪೆಕೆಟು ಇಲ್ಲವೆ ಪೆಟರ್ನ್ ಟಪ್ಪಾಲಿಗೆ ಹಾಕಿದ್ದಕ್ಕೆ ರಸೀದಿ ಸಿಗುವದಿಲ್ಲ; ಆದರೆ ಅವಕ್ಕೆ ಸರ್ಟಿಫಿಕೇಟು ಪಡಕೊಳ್ಳಬಹುದು ಇಲ್ಲವೆ ರಿಜಿಸ್ತ್ರಿ ಮಾಡಿಸಬಹುದು.

ಯಾವದೊಂದು ವರ್ತಮಾನಪತ್ರದ* ಮಾಲಿಕನಾಗಲೀ ಪ್ರಸಿದ್ಧಕನಾಗಲೀ ತಾನು ಕಾಲಾವಧಿಯಾಗಿ ಟಪ್ಪಾಲಿಗೆ ಹಾಕುವ ತನ್ನ ಪತ್ರಕ್ಕಾಗಿ ಇಂತಿಷ್ಟು ಕಾಲಕ್ಕೆಂತ ಒಮ್ಮೆಯೇ ಹಾಸಲಿನ ಹಣ ನಗದಾಗಿ ಕೊಟ್ಟು ತೀರಿಸಬಹುದು. ಹಾಗೆ ಮಾಡಿದಂಥಾ ಪತ್ರವನ್ನು ಟಪ್ಪಾಲಚೀಟಿಲ್ಲದೆ ಮತ್ತು ಪ್ರತ್ಯೇಕ ಹಾಸಲಿಗೆ ಗುರಿಯಾಗದೆ ರವಾನಿಸಬಹುದು. ಈ ಅವಧಿಯು ಸಾಮಾನ್ಯ ೩ ತಿಂಗಳಾಗಿರುವದು. ಮುಂಗಡ ದಸ್ತೂರಿಯನ್ನು ಎಣಿಸುವಲ್ಲಿ, ವರ್ತಮಾನಪತ್ರಕರ್ತರು ತಮ್ಮೊಳಗೆ ಉಚಿತಾರ್ಥವಾಗಿ ಬದಲಾಯಿಸಿಕೊಳ್ಳುವಂಥಾ ಪ್ರತಿಗಳಿಗೆ ಟಪ್ಪಾಲಹಾಸಲು ಪೂರಾ ಮಾಫಿಯಾಗಿಯೂ, ಮಾರಾಟದ ಬಗ್ಗೆ ಏಜೆಂಟರಿಗೆ ರವಾನಿಸುವ ಪ್ರತಿಗಳ ಕಟ್ಟುಗಳು ಇಲ್ಲಿ ನಮೂದಿಸಿರುವ ಹಾಸಲಿನ ಅರೆವಾಸಿಗೂ, ಉಳಿದ ಪ್ರತಿಗಳು ಪೂರಾ ಹಾಸಲಿಗೂ ಗುರಿಯಾಗುವವು.

ವರ್ತಮಾನಪತ್ರದ ಒಂದೊಂದು ಪ್ರತಿಯು		
೩ ತೊಲೆಗೆ	೧೦ ತೊಲೆಗೆ	ಪ್ರತಿ ಹೆಚ್ಚಿಗೆ ೧೦ ತೊಲೆಗೆ
ಎಷ್ಟಾದಿದ್ದರೆ		ಯಾ ಅದರ ಅಂಶಕ್ಕೆ
೩ ಪೈ	೬ ಪೈ	೬ ಪೈ

"ಪಾರ್ಸೆಲು":—(1) ರಿಜಿಸ್ತ್ರಿಯಾಗದ ಮತ್ತು ರಿಜಿಸ್ತ್ರಿಯಾದ ಪಾರ್ಸೆಲು ಎಂಬ ಎರಡು ವಿಧ. (2) ಇವನ್ನು ಪೂರಾ ಬಂದು ಮೂಡಿ ಕಟ್ಟಿ ತರಬೇಕು. (3) (ನಿಷೇಧಿಸಲ್ಪಟ್ಟ ಸಾಮಾನುಗಳ ವಿನಹ) ಬೇರೇನಾದರೂ ಇದರಲ್ಲಿ ಗರ್ಭಿಸಬಹುದು. (4) ಪಾರ್ಸೆಲುಗಳನ್ನೆಲ್ಲ ಟಪ್ಪಾಲು ಆಫೀಸಿಗೆ ಒಪ್ಪಿಸಬೇಕು; ರಿಜಿಸ್ತ್ರೀ ಅದ ಪಾರ್ಸೆಲು ಒಪ್ಪಿಸಿದ್ದಕ್ಕೂ ಮುಟ್ಟಿದ್ದಕ್ಕೂ ರಸೀದಿ ಸಿಗುವದು, ರಿಜಿಸ್ತ್ರಿ ಆಗದ ಪಾರ್ಸೆಲಿಗೆ ಸಿಗುವದಿಲ್ಲ. (5) ರಿಜಿಸ್ತ್ರೀ ಅದ ಪಾರ್ಸೆಲಿಗೆ ದಸ್ತೂರಿ ಮುಂದಾಗಿ ಕೊಡಲೂ ಬಹುದು, ಕೊಡದೆ ಇರಲೂ ಬಹುದು; ಎರಡನೇ ಸಂಗತಿಯಲ್ಲಿ ಪಾರ್ಸೆಲು ಹೊಂದಿದವನು ಆ ದಸ್ತೂರಿಯ ಮೌಲ್ಯ ಮಾತ್ರ ಕೊಡಬೇಕಷ್ಟೆ; ಆದರೆ ರಿಜಿಸ್ತ್ರಿ ಆಗದ ಪಾರ್ಸೆಲಿಗೆ ದಸ್ತೂರಿ ಮುಂದಾಗಿ ಚೀಟು ಹಚ್ಚಿ ತೆರಬೇಕು. (6) ೪೦೦ ತೊಲೆಗೆ ಮಿಗಿದ ಪಾರ್ಸೆಲು, ದಸ್ತೂರಿ ಮುಂದಾಗಿ ತೆರದ ಪಾರ್ಸೆಲು, "ಇನ್ಶೂರ್" ಮಾಡಿದ ಪಾರ್ಸೆಲು, ಇವುಗಳನ್ನು ರಿಜಿಸ್ತ್ರಿ ಮಾಡಿಸುವದು ಅಗತ್ಯ.

(Value Payable Article) "ವೇಲ್ಯೂ ಪೇಯಬ್ಲ್ ಆರ್ಟಿಕಲ್" ಅಂದರೆ ಪೋಸ್ಟ್ ಆಫೀಸಿನವರು ತಮ್ಮ ವತಕ್ಕೆ ಬಂದ ಲಿಫಾಪೆ ಯಾ ಕಟ್ಟನ್ನು ಅದರ ಮೇಲ್ ವಿಳಾಸಕ್ಕೆ ಮುಟ್ಟಿಸಿ, ಅದರ ಮೇಲೆ ವಾಗ್ದಾನ ಪಡಿಸಿರುವ ಮೌಲ್ಯವನ್ನು ಅದನ್ನು ಹೊಂದಿದವನಿಂದ ವಸೂಲು ಮಾಡಿ ಅದನ್ನು ರವಾನಿಸಿದವನಿಗೆ ಕೊಡುತ್ತಾರೆ. ಈ ಪ್ರಕಾರ ಪೆಕೆಟುಗಳಾಗಲೀ ರಿಜಿಸ್ತ್ರಿಯಾದ ಪಾರ್ಸೆಲುಗಳಾಗಲೀ ಲಕೋಟೆಗಳಾಗಲೀ ಮನಿಆರ್ಡರ್ ಆಫೀಸುಳ್ಳ ಯಾವ ಪೋಸ್ಟ್ ಆಫೀಸಿನಲ್ಲಾದರೂ ಟಪ್ಪಾಲಿಗೆ ಹಾಕಬಹುದು; ಅವುಗಳ ಮೌಲ್ಯ ಮಾತ್ರ ನಾಲ್ಕು ಆಣೆಗೆ ಕಡಿಮೆಯಾಗಲೀ ಸಾವಿರ ರೂಪಾಯಿಗೆ ಮಿಗಿ ಆಗಲೀ ಇರಬಾರದು; ಮತ್ತು ಅದರಲ್ಲಿ ಆಣೆಯ ಅಂಶವಿರಬಾರದು. ಹೀಗೆ ರವಾನಿಸುವವನು ಅದನ್ನು ಹೊಂದತಕ್ಕವನ ವಿಳಾಸ, ಮೌಲ್ಯ ಮುಂತಾದ್ದನ್ನು ಒಂದು ಛಾಪಾಛಾಮಿನ್ ಮೇಲೆ ಬರದು ಅದರ ಸಂಗಡ ಕೊಡಬೇಕು. ವೆಲ್ಯುಪೇಯಬ್ಲ್ ಆಗಿ ರವಾನಿಸುವ ಕಟ್ಟು ಯಾ ಲಿಫಾಪೆ ರಿಜಿಸ್ತ್ರಿ ಮಾಡಿಸಬಹುದು, ಇಲ್ಲವೆ ಮುಂದೆ ವಿವರಿಸಿದ ರೀತಿಯಲ್ಲಿ "ಇನ್ಶೂರ್" ಮಾಡಿಸಲೂ ಬಹುದು. ಈ ಪ್ರಕಾರ ರವಾನೆಯಾದ ಕಟ್ಟು ಇಲ್ಲವೆ ಲಿಫಾಪೆ ಅದರ ಠಿಕಾಣಿಗೆ ಬಂದು ನುಟ್ಟುತ್ತಲೇ, ಅದರ ಮೌಲ್ಯ ೩೫ ರೂಪಾಯಿಗೆ ಮಿಗಿದಿದ್ದರೆ, ಅದು ಹೊಂದ ತಕ್ಕವನಿಗೆ ಟಪ್ಪಾಲ ವೇದೆಯಿಂದ ಮುಟ್ಟಸೋಣವಾಗಿ ಅದರ ಮೌಲ್ಯ ಅವನಿಂದ ಈಸಿಕೊಳ್ಳೋಣವಾಗುವದು. ಆದರೆ ಅದರ ಮೌಲ್ಯ ರೂ. ೩೫ಕ್ಕೆ ಮಿಗಿದಿದ್ದರೆ, ಅದನ್ನು ಕುರಿತು ಮೇಲ್ವಿಳಾಸದವನಿಗೆ ಚೀಟಿನ ದ್ವಾರಾ ತಿಳಿಸಲಾಗಿ, ಅದರ ಮೇಲೆ ಅತನು ದಸ್ತೂರು ಹಾಕಿ ಅದರ ಮೌಲ್ಯ ಸಮೇತ ಅದೇ ಪೋಸ್ಟ್ ಆಫೀಸಿಗೆ ವಾಪಸು ರವಾನಿಸಿ, ಅದನ್ನು ತರಿಸಿಕೊಳ್ಳಬಹುದು.

* ಅಂದರೆ ೩೧ ದಿವಸಗಳಿಗೆ ಮಿಗಿದ ಕಾಲಾವಧಿಯಾಗಿ ಪ್ರಕಟವಾಗುವ ಪತ್ರ.

(Insurance) "ಇನ್ಯೂರೆನ್ಸ್". ರಿಜಿಸ್ತ್ರಿಯಾದ ಲಿಫಾಪೆ, ಪೆಕೆಟು, ಪಾರ್ಸೆಲು, ವೆಲ್ಯುಪೇಯಬ್‌ಲ್ ಲಿಫಾಪೆ ಇಲ್ಲವೆ ಕಟ್ಟು ಭದ್ರತೆಯಿಂದ ತಲ್ಪಿಸುವ ವಿಷಯದಲ್ಲಿ ಟಪ್ಪಾಲಿನವರು ಜವಾಬದಾರಿಕೆಯನ್ನು ವಹಿಸಿಕೊಳ್ಳುತ್ತಾರೆ; ಇದಕ್ಕೆ "ಇನ್ಯೂರೆನ್ಸ್" ಅನ್ನುತ್ತಾರೆ. ಬ್ರೇಂಚು ಆಫೀಸುಗಳಲ್ಲಿ ರೂ. ೫೦೦ ವರೆಗೆ, ಮೇಲ್ ಆಫೀಸುಗಳಲ್ಲಿ ರೂ. ೧೦೦೦ ವರೆಗೆ ಮೌಲ್ಯವಿರುವ ಲಿಫಾಪೆ ಯಾ ಕಟ್ಟುಗಳನ್ನು ಈ ಪ್ರಕಾರ ಇನ್ಯೂರ್ ಮಾಡಿಸಬಹುದು. ಹೀಗೆ ರವಾನಿಸುವಂಥಾದ್ದು ಭದ್ರವಾಗಿ ಬಂದು ಮಾಡಲ್ಪಟ್ಟು, ಅಂಚುಗಳಲ್ಲಿ ಎರಡೆರಡು ಇಂಚುಗಳಿಗೆ ಮೊಹರು ಹಾಕಿ ತರಬೇಕು; ಮತ್ತು ಅದರ ಮೇಲ್ಗಡೆಯಲ್ಲಿ ಮೇಲ್‌ವಿಳಾಸವನ್ನೂ ರವಾನಿಸುವವನ ಹೆಸರನ್ನೂ ಸ್ಪಷ್ಟವಾಗಿ ಬರಿಯಬೇಕು; ಬರಿಯುವಾಗ ಚಿತ್ತು ಮಾಡಬಾರದು. ಈ ಪ್ರಕಾರ ಇನ್ಯೂರ್ ಮಾಡಿ ತಕ್ಕ ಲಕೋಟೆ ಯಾ ಕಟ್ಟು ಟಪ್ಪಾಲಕಟ್ಟೆಗೆ ಹಾಜರು ಮಾಡುವಾಗ ಅದರ ಸಂಗಡ ಅದರ ಮೂಲ ಘೂಪುಗಳನ್ನೂ ಮೌಲ್ಯವನ್ನೂ ಕುರಿತು (ಟಪ್ಪಾಲಕಟ್ಟೆಯಿಂದ ಮೂಫಿಯಾಗಿ ಸಿಕ್ಕುವ ಛಾಪಾಫಾರ್ಮ್‌ದಲ್ಲಿ) ವಾಗ್ರೂಪ ಬರದು ತರಬೇಕು. ಸುಳ್ಳು ವಾಗ್ರೂಪ ಪಡಿಸುವವನು ಶಿಕ್ಷೆಗೆ ಗುರಿಯಾಗುವನು.

೩೫೦ ರೂಪಾಯಿ ಒಳಗಿನ ಮೌಲ್ಯದ ಕಟ್ಟು ತಲಪುತ್ತಲೇ ಅದು ಹೊಂದ ತಕ್ಕವನಿಗೆ ಸಾಧಾರಣ ರೀತಿಯಂತೆ ಒಪ್ಪಿಸೋಣಾಗುವದು; ಆದರೆ ೩೫೦ ರೂಪಾಯಿಗೆ ಏರಿದ ಮೌಲ್ಯದ ಕಟ್ಟು ಟಪ್ಪಾಲ ಕಟ್ಟೆಯಲ್ಲಿಯೇ ಒಪ್ಪಿಸಲಾಗುವದು. ಕಟ್ಟು ಹೊಂದಿದವನಿಂದ ಅದು ತಲಪಿದ್ದಕ್ಕೆ ರಶೀದಿ ಪಡಕೊಂಡು, ಕಟ್ಟು ರವಾನಿಸಿದವನಿಗೆ ಮುಟ್ಟಿಸೋಣಾಗುವದು.

(Value Payable Commission) ಮೌಲ್ಯ ವಸೂಲು ಮಾಡಿ ಕೊಡಿಸುವ ಬಗ್ಗೆ ವಟ್ಟು: ಆ. ಕಟ್ಟಿನ ಮೌಲ್ಯ ೧೦ ರೂಪಾಯಿಗೆ ಏರದಿದ್ದರೆ ೩
" ೨೫ " " ೪
ಹೆಚ್ಚಿಗೆ ಪ್ರತಿ ೨೫ " ಯಾ ಅದರ ಅಂತಕ್ಕೆ ೪
ಕಟ್ಟು ರವಾನಿಸಿದವನಿಗೆ ತರಿಸಿಕೊಡ ತಕ್ಕ ಹಣದಿಂದ ಈ ದರದಲ್ಲಿ ವಟ್ಟು ವಜಾ ಮಾಡಲಾದೀತು. ಆದರೆ ಕಟ್ಟು ಹೊಂದ ತಕ್ಕವನು ಅದು ತನಗೆ ಬೇಡವೆಂದು ನಾವಸು ಮಾಡಿದರೆ, ಅದನ್ನು ರವಾನಿಸಿದವನೇ ಅದರ ಟಪ್ಪಾಲ ಖಾಸಲು ಸಹ ತೆರುವದಕ್ಕೆ ಬದ್ಧನಾಗುವನು.

(Insurance) ಲಿಫಾಪೆಗಳಾಗಲೀ ಕಟ್ಟುಗಳಾಗಲೀ ಸುರಕ್ಷಿತವಾಗಿ ಮುಟ್ಟಿಸಿ ಕೊಡುತ್ತೇವೆಂದು ಹೊಣೆ ಮಾಡೋಣಾಗುವದಕ್ಕೆ ವಟ್ಟು: ಆ. ಅದರ ಮೌಲ್ಯ ರೂ. ೫೦ಕ್ಕೆ ಏರದಿದ್ದರೆ ೩
" " ೧೦೦ಕ್ಕೆ " ೪
ಹೆಚ್ಚಿಗೆ ಪ್ರತಿ " ೧೦೦ಕ್ಕೆಯಾ ಅದರ ಅಂತಕ್ಕೆ ೪
ಇನ್ಯೂರೆನ್ಸ್ ಸಂಬಂಧವಾದ ಎಲ್ಲಾ ಖಾಸಲು ಚೀಟು ಹಚ್ಚಿ ಮುಂದಾಗಿ ತೆರಬೇಕು. ಇನ್ಯೂರ್ ಮಾಡಿದ ಲಿಫಾಪೆ ಯಾ ಕಟ್ಟು ಟಪ್ಪಾಲಿಗೆ ಹಾಕಿದ್ದಕ್ಕೂ ಅದರ ವಿಳಾಸಕ್ಕೆ ಮುಟ್ಟಿಸಿದ್ದಕ್ಕೂ ರಶೀದಿ ಸಿಗುವದು.

(Telegraph) ತಂತೀಟಪ್ಪಾಲು.

ತಂತೀಟಪ್ಪಾಲಿನ ದ್ವಾರಾ ವರ್ತಮಾನವನ್ನು ಕಳುಹಿಸುವದಕ್ಕೆ ಮುಖ್ಯ ಮೂರು ವಿಧದ ದರಗಳು ಉಂಟು:

	ಮೊದಲನೆ ೯ ಶಬ್ದಗಳಿಗೆ	ಹೆಚ್ಚಿಗೆ ಒಂದೊಂದು ಶಬ್ದಕ್ಕೆ ಯಾ ಮೂರು ಅಂಕೆಗಳುಳ್ಳ ಸಂಖ್ಯೆಗೆ
(Deferred Message) "ಸಾವಕಾಶ ವರದಿ" ಅಂದರೆ ಆಫೀಸಿನ ಕೆಲಸದ ಹೊತ್ತಿನಲ್ಲಿ ಕೊಡಲ್ಪಟ್ಟು, ತಂತೀಟಪ್ಪಾಲಿನವರ ಸಂದರ್ಭದಲ್ಲಿ ರವಾನಿಸಿ, ಮರುದಿನ ಬೆಳಿಗ್ಗೆ ಅದರ ವಿಳಾಸಕ್ಕೆ ಮುಟ್ಟಿಸುವಂಥಾದ್ದಾಗಿದ್ದರೆ.	ರೂ. ೦ ಆ. ೯	ರೂ. ೦ ಆ. ೧
(Ordinary Message) "ಸಾಧಾರಣ ವರದಿ" ಅಂದರೆ ಆಫೀಸಿನ ಕೆಲಸದ ಹೊತ್ತಿನಲ್ಲಿ ಒಪ್ಪಿಸಲ್ಪಟ್ಟು, ಚಾಲತಿ ಕ್ರಮದಲ್ಲಿ ರವಾನಿಸಿ ಮುಟ್ಟಿಸುವಂಥಾದ್ದಾಗಿದ್ದರೆ	ರೂ. ೧ ೫. ೦	ರೂ. ೦ ೪. ೩
(Urgent Message) "ಜರೂರು ವರದಿ" ಅಂದರೆ ಯಾವ ಹೊತ್ತಿನಲ್ಲಿ ಆಗಲೀ ಕೊಡಲ್ಪಟ್ಟು, ಕೂಡಲೇ ರವಾನಿಸಿ ಸಾಧಾರಣ ವರದಿಗಿಂತ ಮುಂದಾಗಿ ಮುಟ್ಟಿಸ ತಕ್ಕದ್ದಾಗಿದ್ದರೆ . .	ರೂ. ೩ ಆ. ೦	ರೂ. ೦ ೪. ೪

ವರದಿ ಹೊರಡುವ ಮತ್ತು ತಲಪುವ ಠಾಣೆಗಳ ಹೆಸರುಗಳು, ವರದಿ ರವಾನಿಸುವವನ ಮತ್ತು ಹೊಂದುವವನ ಹೆಸರುಗಳು, ವಿಳಾಸಗಳು ಲೆಖ್ಖಕ್ಕೆ ಹಿಡಿಯುವದಿಲ್ಲ.

"ಭಾವಭಾನೇ ವರದಿಗಳು" (ಅಂದರೆ ವರ್ತಮಾನಪತ್ರಗಳಿಗೆ ಬರಿಯಲ್ಪಡುವ ವರದಿಗಳು) ರವಾನಿಸಲಿಕ್ಕೆ ಮೇಲಿನ ದರದಲ್ಲಿ ಅದರ ನಾಲ್ಕು ಪಾಲು ಶಬ್ದಗಳನ್ನು ರವಾನಿಸಬಹುದು. ಒಂದು ತಂತೀವರದಿಗೆ ಪ್ರತ್ಯುತ್ತರಕ್ಕಾಗಿ ೩ ರೂಪಾಯಿಗೆ ಏರದೆ ಹಣ ಕಟ್ಟಬಹುದು, ಅದು ತಂತಿ ಮುಟ್ಟಿದವನಿಗೆ ಕೊಡೋಣಾಗುವದು.

ತಂತೀಟಪ್ಪಾಲಿಲ್ಲದ ಊರಿನಿಂದ ಹೋಗ ತಕ್ಕ ವರದಿಯನ್ನು ಅಲ್ಲಿಯ ಟಪ್ಪಾಲಕಟ್ಟೆಗೆ ಮುಟ್ಟಿಸಿದಲ್ಲಿ ಅದನ್ನು ಸಮೀಪದ ತಂತೀಟಪ್ಪಾಲ್ ಆಫೀಸಿಗೆ ರಿಜಿಸ್ತ್ರಿ ಮಾಡಿ ರವಾನಿಸುವರು. ಅದಕ್ಕಾಗಿ ಟಪ್ಪಾಲ್‌ದಸ್ತೂರಿ ಯಾ ರಿಜಿಸ್ತ್ರಿಫೀಸು ಕೊಡುವ ಅವಶ್ಯವಿಲ್ಲ.

(Money Order) "ಮನಿ ಆರ್ಡರ್" ಎಂಬ ಹುಂಡೀಚೀಟು.

ಹಿಂದುಸ್ಥಾನದಲ್ಲಿ ಒಂದು ಟಪ್ಪಾಲುಕಟ್ಟೆಯಿಂದ ಇನ್ನೊಂದಕ್ಕೆ ೬೦೦ ರೂಪಾಯಿಗೆ ಮೀರದೆ ಇರುವ ಹಣಕ್ಕೆ ಹುಂಡಿ ಕೊಡಬಹುದು. ಅದು ಯಾವವಾದರೂ ನೇಪೀಯ ಸೀಮೆಗೆ ಹೋಗುವಂಥಾದ್ದಾಗಿದ್ದರೆ, ೧೫೦ ರೂಪಾಯಿಗೆ ಮೀರಬಾರದು. ಇಂಥಾ ಹುಂಡಿಯನ್ನು ಒಳಟಪ್ಪಾಲಿನಿಂದಾಗಲೀ ತಂತೀಟಪ್ಪಾಲಿನಿಂದಾಗಲೀ ರವಾನಿಸಬಹುದು. ವಟ್ಟದ ವಿವರ:

ಟಪ್ಪಾಲ ದ್ವಾರಾ:	ತಂತೀ ಟಪ್ಪಾಲ ದ್ವಾರಾ ರವಾನಿಸುವದಕ್ಕೆ:	*ರೂ.	ಆ.
ರೂ. ೧೦ಕ್ಕೆ ಮೀರದಿದ್ದತೆ . . ೨ ಆಣೆ	ರೂ. ೫೦ಕ್ಕೆ ಮೀರದಿದ್ದರೆ,	೧	೪
" ೨ " ಮೀರಿ ರೂ. ೫೦ಕ್ಕೆ ಮೀರದಿದ್ದರೆ ೪ "	" ೫೦ಕ್ಕೆ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ	೧	೮
" ೫೦ " " ಪ್ರತಿ ರೂ. ೫೦ಕ್ಕೆ ಯಾ ಅದರ ಅಂಶಕ್ಕೆ ೪ "	" ೧೦೦ " " " ೧೫೦ " "	೨	೦
ಆದರೆ ೪ ೫೦ ರೂಪಾಯಿಯ ಅಂಶ ೧೦ ರೂಪಾಯಿಗೆ ಮೀರದಿದ್ದರೆ. ಆದಕ್ಕಾಗಿ ಹೆಚ್ಚಿಗೆ ೨ ಆಣೆ ಮಾತ್ರ ಸಾಕು.	" ೧೫೦ " " " ೨೦೦ " "	೨	೮
	" ೨೦೦ " " " ೨೫೦ " "	೩	೪
ಮುನಿಆರ್ಡರಿನ ಜೊಬಲಗಿನಲ್ಲಿ ಆಣೇ ಅಂಶವಿರದಾರದು.	" ೨೫೦ " " " ೩೦೦ " "	೩	೮
	" ೩೦೦ " " " ೩೫೦ " "	೪	೪
	" ೩೫೦ " " " ೪೦೦ " "	೪	೮
* ಇದರಲ್ಲಿ ತಂತಿ ರವಾನಿಸುವ ಖರ್ಚು ಸೇರಿರುತ್ತದೆ.	" ೪೦೦ " " " ೪೫೦ " "	೫	೪
	" ೪೫೦ " " " ೫೦೦ " "	೫	೮

ಹುಂಡೀ ದ್ವಾರಾ ಹಣ ಯಾರು ಯಾರಿಗೆ ಮುಟ್ಟಿಸ ಬೇಕೋ, ಅವರಿಬ್ಬರ ಹೆಸರು, ವಿಳಾಸ, ಹಣದ ಸಂಖ್ಯೆ ಮುಂತಾದ್ದನ್ನು, ಟಪ್ಪಾಲಕಟ್ಟೆಯಿಂದ ಈ ಉದ್ದಿಶ್ಯ ಸಿಕ್ಕುವ ಛಾಪಾಕಾಗದದಲ್ಲಿ ಬರದು, ಅದರಲ್ಲಿ ಬಿಟ್ಟಿರುವ ಖಾಲಿ ಜಾಗದಲ್ಲಿ (ಹಣ ಪಡಕೊಳ್ಳುವವನಿಗೆ ತಿಳಿಸ ತಕ್ಕ) ಅವಶ್ಯದ ಬೇರೆ ಸಂಗತಿಗಳೇನಾದರೂ ಬರದು, ಹಣ, ವಟ್ಟ ಸಮೇತಾ ಟಪ್ಪಾಲಕಟ್ಟೆಗೆ ಕಳುಹಿಸಿದ್ದಾದರೆ, ಅದಕ್ಕಾಗಿ ಅವರು ರಶೀದಿ ಕೊಟ್ಟು, ಅವರೇ ಹುಂಡೀಚೀಟನ್ನು ತೀದಾ ರವಾನಿಸಿ, ಹೊಂದ ತಕ್ಕವನಿಗೆ ಹಣವನ್ನು ಮುಟ್ಟಿಸುವರು; ತಲ್ಪಿದ ಕೂಡಲೇ ಅದರಲ್ಲಿ ಅಗತ್ಯವಿರುವ ದಸ್ತತುಗಳನ್ನು ತಾರೀಕು ಸಮೇತಾ ಮತಿಯಿಂದ ಬರದು, ಹಣ ಪಡಕೊಳ್ಳುವದು. ಹಣ ಹೊಂದ ತಕ್ಕವನು ಬರಹ ದಾರದವನಾಗಿದ್ದರೆ, ಅದಕ್ಕೆ ಅವನ ಗುರುತು ಮತ್ತು ಬರಹ ತಿಳಿದವನೊಬ್ಬನ ಸಾಕ್ಷಿ ಸಹ ಹಾಕಿಸಿ ಕೊಡ ಬೇಕು. ಈ ರಶೀದಿಯನ್ನು ಹಣ ಕಳುಹಿಸಿದವನಿಗೆ ಮುಟ್ಟಿಸುವರು.

(Post Office Savings Bank) ಟಪ್ಪಾಲಕಟ್ಟೆಯಲ್ಲಿ ಹಣ ಠೇವಣಾತಿ ಇಡೋಣ.

ಈ ಬೇಂಕಿನಲ್ಲಿ ಯಾವ ಪುರುಷನಾಗಲೀ ಸ್ತ್ರೀಯಾಗಲೀ ಮಗುವಿಗೋಸ್ಕರವಾಗಲೀ ಹಣವನ್ನು ಠೇವಣಾತಿಯಾಗಿ ಇಡ ಬಹುದು. ನಾಲ್ಕು ಆಣೆಗಿಂತ ಕಡಿಮೆಯಾಗಲಿ ನಾಲ್ಕು ಆಣೆಯ ಅಂಶವಾಗಲಿ ತೆಗದು ಕೊಳ್ಳುವದಿಲ್ಲ; ಮತ್ತು ಒಂದು ವರ್ಷದೊಳಗೆ ಒಟ್ಟು ಕೂಡಿ ಇನ್ನೂರು ರೂಪಾಯಿಗಿಂತ ಜಾಸ್ತಿ ಮೊಬಲಗನ್ನು ಠೇವಣಾತಿಯಾಗಿ ಇಡ ಕೂಡದು. ಹಣ ಠೇವಣಾತಿಯ ಲಿಖ್ಖಾಚಾರ ಬರದು ಕೊಡುವದಕ್ಕಾಗಿ ಒಂದು ಛಾಪಾಪುಸ್ತಕ ಕ್ರಯವಿಲ್ಲದೆ ಕೊಡುತ್ತಾರೆ. ಅದರಲ್ಲಿ ಆಗಾಗ್ಗೆ ಠೇವಣಾತಿ ಇಟ್ಟ, ಇಲ್ಲವೆ ವಾಪಸು ಪಡಕೊಂಡ ಹಣಗಳ ಲೆಖ್ಖ ಬರೆದು ಕೊಡುತ್ತಾರೆ. ಈ ಉದ್ದಿಶ್ಯ ಪ್ರತಿ ಸಾರಿ ಆ ಪುಸ್ತಕವನ್ನು ಟಪ್ಪಾಲ ಆಫೀಸಿಗೆ ಹಾಜರು ಮಾಡಬೇಕು. ಪುಸ್ತಕ ಕಳದು ಹೋದರೆ, ಒಂದು ರೂಪಾಯಿ ಕೊಟ್ಟು ಹೊಸ ಪುಸ್ತಕ ಪಡಕೊಳ್ಳಬಹುದು.

ಈ ಪ್ರಕಾರ ಠೇವಣಾತಿ ಮಾಡಿದವನು ತನ್ನ ಹಣದಿಂದ ವಾರದಲ್ಲಿ ಒಂದಾವರ್ತಿ ವಾಪಸು ಪಡಕೊಳ್ಳ ಬಹುದು. ಆದರೆ ತನ್ನ ಪೂರಾ ಲೇವಾದೇವಿ ತೀರಿಸುವಾಗ ಅಲ್ಲದೆ, ಒಬ್ಬನು ಒಂದು ಸಾರಿಗೆ ನಾಲ್ಕು ಆಣೆಗಿಂತ ಕಡಿಮೆಯಾಗಲೀ ಅದರ ಅಂತ ಕೂಡಿದ ಯಾವ ಮೊಬಲಗಾಗಲೀ ವಾಪಸು ಪಡಕೊಳ್ಳ ಕೂಡದು.

ಈ ವಿಷಯದಲ್ಲಿ ಇನ್ನೊಂದು ಹುಕುಂ ಕೊಡುವ ವರೆಗೆ, ಪೂರಾ ಅರು ರೂಪಾಯಿಯ ಮೊಬಲಗಿನ ಮೇಲೆ ತಿಂಗಳು ಒಂದಕ್ಕೆ ಮೂರು ಪೈ ಮೇರೆಗೆ (ಅಂದರೆ ವರ್ಷಕ್ಕೆ ಶೇಕಡಾ ೬ ರೂಪಾಯಿ ೩ ಆಣೆ ಮೇರೆಗೆ) ಬಡ್ಡಿ ಕೊಡೋಣಾಗುವದು; ಮತ್ತು ವರ್ಷಂಪ್ರತಿ ಬಡ್ಡಿಯನ್ನು ಅಸಲಿಗೆ ಕೂಡಿಸೋಣಾಗುವದು.

"ಕ್ವೀನೀನು"—೫ ಗ್ರೇನ್ ಪುಡಿ ಒಂದಕ್ಕೆ ೬ ಪೈ ಪ್ರಕಾರ—ಎಲ್ಲಾ ಟಪ್ಪಾಲ ಆಫೀಸುಗಳಲ್ಲಿ ಮಾರೋಣಾಗುತ್ತದೆ.

Officials of the South Canara District.

ದಕ್ಷಿಣ ಕನ್ನಡ ಜಿಲ್ಲೆಯ ಸರಕಾರ ಉದ್ಯೋಗಸ್ಥರು.

Judicial ಜುಡಿಶಿಯಲ್.

1. District Court ಡಿಸ್ಟ್ರಿಕ್ಟ್ ಕೋರ್ಟ್.

H. G. Joseph Esq. ಹ್ಯೂ. ಗೊ. ಜೊಸೆಫ್ ದೊರೆಗಳು—ಡಿಸ್ಟ್ರಿಕ್ಟ್ ವ ಶೆಶ್ಯನ್ ಜಡ್ಜರು (ರಜೆ).

F. H. Hamnett Esq. ಎಫ್. ಎಚ್. ಹೆಮ್ನೆಟ್ ದೊರೆಗಳು—ಅ. ಜಡ್ಜರು.

ಮು. ದೇವರಾವರು, ಬಿ.ಎ., ಬಿ.ಎಲ್.-ಶಿರಸ್ತೇದಾರ್.

ಜೊ. ಬೊ. ಫೆರ್ನಾಂಡೆಸ್—ಹೆಡ್‌ಕ್ಲರ್ಕ್ (ರಜೆ).

ಉ. ನರಸಿಂಗರಾವ್—ಅಕ್ಟಿಂಗ್ „

ಸ. ಬಿ. ಮಸ್ಕರೇಞಸ್—ಅ. ಟ್ರಾನ್ಸ್‌ಲೇಟರ್.

ಮು. ಶ್ರೀನಿವಾಸರಾವ್—ರಿಕಾರ್ಡ್‌ಕೀಪರ್.

ಕಾ. ಶ್ರೀನಿವಾಸರಾವ್—ಸೆಂಟ್ರಲ್ ನಾಜರ್ (ರಜೆ).

ಮು. ಶೇಷಗಿರಿರಾವ್— ಅ. ಸೆಂಟ್ರಲ್ ನಾಜರ್.

ನ. ಲಕ್ಷ್ಮಣರಾವ್—ಕಾಪಿಸ್ಟರ ಸೆ. ಸುಪರಿಂಟೆಂಡೆಂಟ್.

2. Sub-Judge's Court ಸಬ್ ಜಡ್ಜರ ಕೋರ್ಟ್.

M. R. Ry. U. Achuta Nair Avargal ಮು. ರಾ. ರಾ. ಯು. ಅಚ್ಯುತನಾಯರ್ ಅವರ್ಗಳ್—ಸಬೋರ್ಡಿನೇಟ್ ಜಡ್ಜರು.

ಕೊ. ಶಾಮರಾವ್— ಶಿರಸ್ತೇದಾರ್.

ಎ. ಆಯ್ಯಾಸಾಮಿ— ಹೆಡ್‌ಕ್ಲರ್ಕ್.

ಮದ್ರಾಸ ಹೈಕೋರ್ಟ (ದ. ಕನ್ನಡದ) ವಕೀಲರು (ಬಿ. ಎ., ಬಿ. ಎಲ್.)

ಅ. ಸುಬ್ಬರಾವ್	ಎ. ಜೆ. ಸಿ. ಲೋಬೊ
ಕ. ನಾರಾಯಣರಾವ್	ಪಿ. ಸುಬ್ಬರಾವ್
ಕಾ. ಸ. ರಾಮರಾವ್	ಕೆ. ಲಕ್ಷ್ಮೀನಾರ್ಯಾಣರಾವ್
ಉ. ಚಾ. ಕೃಷ್ಣಭಟ್ಟ	ಗೊ. ಕೃಷ್ಣರಾವ್

ಕಾ. ಪ. ಮಾಧವರಾವ್, ಬಿ. ಎ., ಎಮ್. ಎಲ್.

ಡಿಸ್ಟ್ರಿಕ್ಟ್ ಕೋರ್ಟ ವಕೀಲರು.

ಮ. ತೇ. ರಾಮರಾವ್—ಗವರ್ನಮೆಂಟ ವಕೀಲ್.

ರಾವ್‌ಬಹದೂರ್ ನ. ಶಿವರಾವ್.

ಗ. ಕೃಷ್ಣರಾವ್, ಬಿ. ಎ., ಎಲ್‌ಎಲ್. ಬಿ.

ಸಿ. ಡಿ. ಜೆ. ಪಿಂತೊ, ಬಿ. ಎ., ಬಿ. ಎಲ್.

ಮ. ಉಪೇಂದ್ರಪೈ, „ „

ಎ. ಪಿ. ಪಿ. ಸಾಲ್ಡಾಞ, „ „

ಹ. ಬಾಲಕೃಷ್ಣರಾವ್, „ „

ಕಾ. ನಾರಾಯಣಕೃಷ್ಣಕುಡುವ, ಎಮ್. ಎ., ಬಿ. ಎಲ್.

ಕಾ. ಭಾ. ರಾಮರಾವ್.	ನ. ಮಂಜುನಾಥಯ್ಯ.
ಪ. ಪರಮೇಶ್ವರಯ್ಯ.	ಎಸ್. ಜೆ. ಮಸ್ಕರೇಞ.
ಹ. ಕೃಷ್ಣರಾವ್.	ಮ. ರಂಗಪ್ಪಭಂಡಾರಿ.
ಮು. ಸುಬ್ಬರಾವ್.	ಚ. ಆನಂದರಾವ್.
ತ. ಭವಾನಿರಾವ್.	ಚ. ರಾಮರಾವ್.
ರಾ. ಸಾ. ಸಾ. ಫೆ. ಬ್ರಿತೊ.	ಬಿ. ಮ. ಗಣವತಿರಾವ್.
ಮು. ಶಿವರಾವ್.	ನ. ಸುಬ್ರಾವ್.

3. Munsifs ಮುನಸಿಫರು.

ಮು. ರಾ. ರಾ. ಎ. ರಂಗರಾಯರು, ಬಿ. ಎ., ಬಿ. ಎಲ್.—ಮಂಗಳೂರ ಮುನಸಿಫ್ (1ನೇ ದರ್ಜೆ).

ಜೆ. ಮು. ಸಾಲ್ಡಾಞ, ಬಿ. ಎ.—ಹೆಡ್‌ಕ್ಲರ್ಕ್.

ಮ. ರಾ. ರಾ. ಶಿ. ಕೃಷ್ಣಸ್ವಾಮಿರಾಯರು, ಬಿ. ಎ., ಬಿ. ಎಲ್.—ಉಡಿಪಿ ಮುನಸಿಫ್ (4ನೇ ದರ್ಜೆ).

ಹ. ರಾಮಪ್ಪಾ—ಹೆಡ್‌ಕ್ಲರ್ಕ್.

ಮ. ರಾ. ರಾ. ಮ. ಜ. ಕೃಷ್ಣರಾಯರು, ಬಿ. ಎ., ಬಿ. ಎಲ್.—ಪುತ್ತೂರ ಅ. ಮುನಸಿಫ್ (4ನೇದರ್ಜೆ).

—ಹೆಡ್‌ಕ್ಲರ್ಕ್.

ಮಿಸ್ತರ್ ಪಿ. ಜೆ. ಇಟ್ಟಯೇರಾಯವರು, ಬಿ. ಎ.—ಕಾಸರಗೋಡ ಮುನಸಿಫ್ (1ನೇ ದರ್ಜೆ).

ಕೊಂ. ಶ್ರೀನಿವಾಸರಾವ್— ಹೆಡ್‌ಕ್ಲರ್ಕ್.

ಮ. ರಾ. ರಾ. ಮ. ಮುಂಡಪ್ಪಬಂಗೇರರು, ಬಿ. ಎ., ಬಿ. ಎಲ್.—ಕುಂದಾಪುರ ಮುನಸಿಫ್ (2ನೇ ದರ್ಜೆ).

ಡಿ. ಅಂದ್ರಾದೆ— ಅ. ಹೆಡ್‌ಕ್ಲರ್ಕ್.

ಮಿಸ್ತರ್ ವಿ. ಶಿ. ಮಸ್ಕರೇಞರು, ಬಿ. ಎ., ಬಿ. ಎಲ್.—ಕಾರ್ಕಳ ಮುನಸಿಫ್ (4ನೇ ದರ್ಜೆ).

ಮ. ನಾರಾಯಣರಾವ್—ಅ. ಹೆಡ್‌ಕ್ಲರ್ಕ್.

Registration Department ರಿಜಿಸ್ಟ್ರೀ ಇಲಾಖೆ.

F. F. Lemerle Esq. ಫ್. ಫ. ಲಿಮರ್ಲೆ ಸಾಹೇಬರು—ಡಿಸ್ಟ್ರಿಕ್ಟ್ ರಿಜಸ್ಟ್ರಾರ್.

ಜೆ. ಕೊಯಿಲೊ—ಹೆಡ್‌ಕ್ಲರ್ಕ್.

Sub-Registrars ಸಬ್‌ರಿಜಿಸ್ಟ್ರಾರರು.

ಕ. ರಾಮರಾವ್— 1ನೇ ಗ್ರೇಡ್, ಕುಂದಾಪುರ.

ಪಿ. ರಾಮಕೃಷ್ಣಯ್ಯ, ಬಿ. ಎ.—5ನೇ „ ಹೊಸದುರ್ಗ.

ಕಾ. ನಾರಾಯಣರಾವ್— 2ನೇ „ ಉಡಿಪಿ.

ವ. ಕೃಷ್ಣರಾವ್— 3ನೇ „ ಪುತ್ತೂರು.

ಮು. ಮುಕುಂದರಾವ್, ಬಿ. ಎ.-3ನೇ „ ಕಾಸ್ರಗೋಡ.

ಬಿ. ಸದಾಶಿವರಾವ್— 5ನೇ „ ಬ್ರಹ್ಮಾವರ.

ಕೆ. ವೆಂಕಟರಾವ್, ಬಿ. ಎ.—7ನೇ „ ಕಾರ್ಕಳ.

ಮ. ನಾರಾಯಣರಾವ್, ಬಿ. ಎ. 6ನೇ „ ಎಟ್ಲು.

ಮು. ಬಾಬುರಾವ್— 6ನೇ „ ಮಂಜೇಶ್ವರ.

ಮ. ಲಕ್ಷ್ಮಣರಾವ್— 6ನೇ „ ಬಂಟವಾಳ.

ಎ. ಮಂಗೇಶರಾವ್, ಬಿ. ಎ.—7ನೇ „ ಬೈಂದೂರು.

ನ. ದೇವರಾವ್, ಬಿ. ಎ.—ಅ. 6ನೇ „ ಬೆಳತಂಗಡಿ.

ಕ. ಫ. ಶೇಕೇರಾ, ಬಿ. ಎ.— 7ನೇ „ ಮೂಡಬಿದ್ರೆ.

ಬಿ. ಮಂಜಪ್ಪ ಭಂಡಾರಿ— „ „ ಮುಲ್ಕಿ.

Revenue and Magisterial ರೆವೆನ್ಯು ಮತ್ತು ಮೆಜಿಸ್ಟೀರಿಯಲ್.

1. Huzur Office ಹಜೂರು.

John Hewetson Esq., ಜ್ಹೋನ್ ಹ್ಯುವೆಟ್ಸನ್ ದೊರೆಗಳು—ಕಲೆಕ್ಟರ್ ವ ಡಿ. ಮೆಜಸ್ಟ್ರೇಟ್.

A. F. Pinhe Esq. ಅ. ಫ್ರೆ. ಪಿನ್ಹೆ ದೊರೆಗಳು—ಅಸ್ಟಿಂಗ್—ಸದರ್.
ಮ. ರಾ. ರಾ. ಆ. ವಾಸುದೇವಪ್ಪಯ್ಯನವರು—ತಿರಸ್ತೇದಾರ್ (ರಜೆ).
ಮ.ರಾ. ರಾ.ವೋ. ರಾಮರಾಯರು—ಅ. ಸದರ್.
ಮಿಸ್ತರ್ ಎನ್. ಪಿ. ಫೆರ್ನಾಂದೆಸರು—ಇಂಗ್ಲಿಷ ಹೆಡ್‌ಕ್ಲರ್ಕ್ (ಬೇರೆ ಕೆಲಸದ ಮೇಲೆ).
ಮ. ರಾ. ರಾ. ಮ. ವೆಂಕಟರಾಯರು—ಅ. ಸದರ್.
ಬಿ. ಸ. ಅಲ್ಲುಸ್ವಾಕರ್ರು—ಅ. ಟ್ರಾನ್ಸ್‌ಲೇಟರ್.
ಮ. ಪಾಪಯ್ಯಂಗಕಣಿಯರು—ಅ. ದೇಶಭಾಷೆ ಹೆಡ್‌ಕ್ಲರ್ಕ್.
ಚೂರಿ ನಾರಾಯಣನ್‌ರು—ಎನೇ ಕ್ಲರ್ಕ್ "
ಆ. ಸಂಕಪ್ಪಪೂಂಜರು—ಅ. ರಿಕಾರ್ಡ್‌ಕೀಪರ್.
J. H. Munro Esq. ಜೆ. ಹ. ಮುನ್ರೊ ದೊರೆಗಳು—ಹೆಚ್ ಅಸಿಸ್ಟಾಂಟ್ ಕಲೆಕ್ಟರ್ ವ 1ನೇ ಕ್ಲಾಸ್ ಮೆಜಸ್ಟ್ರೇಟ್ (ಬೇರೆ ಕೆಲಸದ ಮೇಲೆ).
P. A. Booty Esq. ಪಿ. ಎ. ಬೂಟಿ ದೊರೆಗಳು—ಅಸ್ಟಿಂಗ್—ಸದರ್.
ಅ. ತಿಮ್ಮಪ್ಪಯ್ಯ—ಹೆಡ್‌ಕ್ಲರ್ಕ್.
M. R. Ry. D. Ananthaya Avargal.
ಮ. ರಾ. ರಾ. ಧಾ. ಆನಂತಯ್ಯನವರು—ಖಜಾನಾ ಚಾರ್ಜ್ ಡಿಪ್ಯುಟಿ ಕಲೆಕ್ಟರ್.
ಮುತ್ತುಭಂಡಾರಿಗಳು-ಇಂಗ್ಲಿಷ ಹೆಡ್ ಎಕೌಂಟಾಂಟ್.
ಇ. ಸಿ. ರುಜಾರಿಯೊ—ಪ್ರೈಜರರ್ (ಖಜಾನೆಜ).
ಮ.ವೆಂಕಟಭಂಡಾರ್ಕರ್-ಪ್ರೆಸ್ ಸುಪರಿಂಟಿಂಡೆಂಟ್.
Rai Bahadur Armugam Pillai Avargal.
ಮ. ರಾ. ರಾ. ಆರ್ಮುಗಮ್ ಪಿಳ್ಳೈಯವರು—ಜನರಲ್ ಡ್ಯೂಟಿ ಡಿಪ್ಯುಟಿ ಕಲೆಕ್ಟರ್ ವ 1ನೇ ಕ್ಲಾಸ್ ಮೆಜಸ್ಟ್ರೇಟ್.
ಸಿ. ಗೋಪಾಲಕೃಷ್ಣಯ್ಯ—ಅ. ಹೆಡ್‌ಕ್ಲರ್ಕ್.
M. R. Ry. P. Sita Rao Avargal ಮ. ರಾ. ರಾ. ವ. ಸೀತಾರಾಯರು—ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರ್ ವ ೧ನೇ ಕ್ಲಾಸ್ ಮೆಜಸ್ಟ್ರೇಟ್.
ಮ. ಆಚ್ಚುತಯ್ಯ—ಅ. ಹೆಡ್‌ಕ್ಲಾರ್ಕ್.

4. Tahsildars etc. ತಹಶೀಲ್‌ದಾರರು ವ 2ನೇ ಕ್ಲಾಸ್ ಮೆಜಿಸ್ಟ್ರೇಟರು.

ಬೋ: ಶಿವಯ್ಯನವರು ಅ-ಮಂಗಳೂರು ತಾಲೂಕು.
ತೊ. ಸದಾಶಿವರಾಯರು—ಹೆ. ಎಕೌಂಟಾಂಟ್.
ನೊ. ಪಿ. ಫೆರ್ನಾಂದೆಸ್—ಅ. ಕಾಸರಗೋಡ ತಾಲೂಕು.
ಉ. ರಾಮಪ್ಪಯ್ಯರು—ಹೆ. ಎಕೌಂಟಾಂಟ್.
ಮ. ಎ. ಸಿ. ಶೇಖರರು—ಉಡಿಪಿ ತಾಲೂಕು.
ಕ. ಶ್ರೀನಿವಾಸರಾವ್—ಅ. ಹೆ. ಎಕೌಂಟಾಂಟ್.
ಪಿ.ಕಾಸ್ತಿಲೀನೊರವರು—ಅ. ಪುತ್ತೂರು ತಾಲೂಕು.
ದೆ. ವಾಸುದೇವರಾವ್—ಅ. ಹೆಡ್ ಎಕೌಂಟಾಂಟ್.
ಬೊ. ಬಾಬುರಾಯರು—ಅ. ಕುಂದಾಪುರ ತಾಲೂಕು.
ಚಿ. ಮೈಂದಪ್ಪ—ಹೆಡ್ ಎಕೌಂಟಾಂಟ್.

ಡಿಪ್ಯುಟಿ ತಹಶಿಲ್ದಾರರೂ ಮೆಜಿಸ್ಟ್ರೇಟರೂ.

ಟಿ. ರೋಬಿರ್ಟ್ಸ್‌ರು—ಮಂಗಳೂರ ಶಹರ.
ಫ್ರಾ. ಪಿಂತೊನವರು—ಅ. ಬಂಟವಾಳ.
ಸು. ಆನಂದರಾಯರು — ಅ. ನೀಲೇಶ್ವರ.
ಅ. ದೇವಪ್ಪ ಪೂಂಜರು—ಬೆಳತಂಗಡಿ.
ಎ. ರಾಮಕೃಷ್ಣಯ್ಯನವರು — ಕಾರ್ಕಳ.
ಸ್ಟೇಶನೆರಿ ಸಬ್ ಮೆಜಿಸ್ಟ್ರೇಟರು.
ಮ. ಮಹಮ್ಮದ್ ಖಾನ್ ಸಾಹೇಬರು—ಅ. ಮಂಗಳೂರು ತಾ.
ಎ. ಎಮ್. ಫೆರ್ನಾಂದೆಸರು—ಅ. ಕಾಸರಗೋಡ್.
ಹ. ಕೊರಗಪ್ಪರು—ಉಡಿಪಿ.
ಎ. ಎಲ್. ಸಲ್ದಾಣರು—ಅ. ಪುತ್ತೂರ್.
ಪಿ. ಪಿ. ಮುಸ್ಕರೇಣರು—ಕುಂದಾಪುರ.

5. Bench Magistrates ಬೆಂಚ್ ಮೆಜಿಸ್ಟ್ರೇಟರು.

ಮಂಗಳೂರ ಶಹರ:

ಟೌನ ಸಬ್‌ಮೆಜಸ್ಟ್ರೇಟರು—ಪ್ರೆಸಿಡೆಂಟ್.
ಮ. ರಾ ರಾ. ನೆಲ್ಲಿಕಾಯಿ ಶ್ರೀನಿವಾಸರಾಯರು.
" ಕೊ. ನಾರಣಶೆಟ್ರು.
ಅಬ್ದುಲ್ ಅಲಿ ರಜಬಲಿ ಸೇಟ್ ಸಾಹೇಬರು.
ಖಾನ್ ಬಹದೂರ್ ಹಾಜಿ ಅಬುಬಕರ್ ಬ್ಯಾರಿಗಳು.

ಉಡಿಪಿ ಶಹರ:

ಉಡಿಪಿ ಸ್ಟೇಶನೆರಿ ಸಬ್ ಮೆಜಸ್ಟ್ರೇಟರು-ಪ್ರೆಸಿಡೆಂಟ್.
ಮಿಸ್ತರ್ ಫಿಲಿಪ್ ಫೆರ್ನಾಂದೆಸರು.
ಮ. ರಾ. ರಾ. ಕೃಷ್ಣಪಡಿಯಾರರು.
" ಯಲ್ಲಪ್ಪ ಹೆಗ್ಗಡೇರು.
ಹಾಜಿ ಹಾರೂನ್ ಸೇಟ್ ಸಾಹೇಬರು.

Police Department
ಪೊಲೀಸ್ ಇಲಾಖೆ.

J. H. Stoddart Esq. ಜೆ. ಎಚ್. ಸ್ಟೊಡ್ಡಾರ್ಟ್ ದೊರೆಗಳು—ಪೊಲೀಸ್ ಸುಪರಿಂಟಿಂಡೆಂಟರು.
J. H. Hunt Esq. ಜೆ. ಹ. ಹಂಟ್ ದೊರೆಗಳು—ಅ. ಸದರ್.
ಮಿಸ್ತರ್ ಡಿ. ರಾಸ್ಕಿಞ್ಞಾರು—ಹೆಡ್‌ಕ್ವಾರ್ಟರ್ ಇನ್‌ಸ್ಪೆಕ್ಟರ್, 1ನೇ ಕ್ಲಾಸ್.
ಕಾ. ನಾರಾಯಣರಾವ್, ಬಿ. ಎ., ಬಿ. ಎಲ್.—ಪ್ರೊಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್, 3ನೇ ಕ್ಲಾಸ್.
ನ. ಸುಂದರಮ್ ಅಯ್ಯರ್—ಸ್ಕೂಲ್ ವ ಕೋರ್ಟ್ ಇನ್‌ಸ್ಪೆಕ್ಟರ್, 4ನೇ ಕ್ಲಾಸ್.
ಟಿ. ಬ್ರನ್ಟನ್—ರಿಜರ್ವ್ ಮತ್ತು ಸ್ಟೋರ್ ಇನ್‌ಸ್ಪೆಕ್ಟರ್, 3ನೇ ಕ್ಲಾಸ್.

ಡಿವಿಜನಲ್ ಇನ್‌ಸ್ಪೆಕ್ಟರರು.

ಕೆ.ರಾಮರಾವ್—ಮಂಗಳೂರ ಶಹರ, 2ನೇ ಕ್ಲಾಸ್.
ಎ. ಇ. ವೆನ್— " ತಾಲೂಕು, 4ನೇ "
ಗ. ರಮಣಯ್ಯ—ಕಾಸರಗೋಡ, 4ನೇ "
ಜೆ. ಮ. ಪಾಯ್ಸ್—ಬೆಳತಂಗಡಿ, 3ನೇ "
ಎಫ್. ಎಕ್ಸ್. ವಾಸ್—ಪುತ್ತೂರ, 4ನೇ "
ಜ.ನ.ವೆಂಕಟೇಶ್ವರಯ್ಯರ್-ಬಂಟ್ವಾಳ, 3ನೇ "
ಬಿ. ಶ್ರೀನಿವಾಸ—ಉಡಿಪಿ, 1ನೇ "
ನ. ರಾಮಪ್ಪ—ಕುಂದಾಪುರ, 3ನೇ "

Salt, Abkary and Customs Department.
ನಮ್ಮಕ, ಅಬಕಾರಿ ವ ಕಸ್ಟಮ್ಸ್ ಇಲಾಖೆ.

R. M. Brookes Esq. ರ. ಮ. ಬ್ರೂಕ್ಸ್ ದೊರೆಗಳು—ಇನ್‌ಸ್ಪೆಕ್ಟರ್, ಮಂಗಳೂರ ಸರ್ಕಲ್.
ನ. ಸ. ಶ್ರೀನಿವಾಸ್ ಅಯ್ಯರ್, ಹೆಡ್‌ಕ್ಲರ್ಕ್.

ಕ.ಅ. ರಾಮಸ್ವಾಮಿ ಅಯ್ಯರ್-ಅಸಿಸ್ಟಾಂಟ್ ಇನ್ಸ್ಪೆ.
ಅ. ಕಾಸಿರಾವ್, ಟಿ. ಟಿ. ಅಸಿಸ್ಟಾಂಟ್ ಇನ್ಸ್ಪೆಕ್ಟರ್.
R. L. Haden Esq. ರ. ಲ. ಹಾಡನ್ ದೊರೆಗಳು—ಇನ್ಸ್ಪೆಕ್ಟರ್, ಕುಂದಾಪುರ ಸರ್ಕಲ್.
ಕ್ಷ. ಸೋಜ—ಹೆಡ್‌ಕ್ಲರ್ಕ್.
ತಿ. ಕೃಷ್ಣಮೇನೊನ್, ಅ. ಅಸಿಸ್ಟಾಂಟ್ ಇನ್ಸ್ಪೆಕ್ಟರ್.

Preventive Sub-Inspectors
ಪ್ರಿವೆಂಟಿವ್ ಸಬ್ ಇನ್ಸ್ಪೆಕ್ಟರರು.

ಮಂಗಳೂರ್ ಸರ್ಕಲ್.

ಜೆ. ಡಿ. ಫ. ಲಿಮರ್ಲೆ—ಮಂಗಳೂರು.
ಕೆ. ಯು. ನರಸಿಂಗರಾವ್—ಬಂಟವಾಳ.
ಉ. ಬಸಪ್ಪ—ಬಜಪೆ.
ಕೆ. ನೆಡಂಗಾಡಿ—ಮಂಜೇಶ್ವರ.
ಮು. ಕೆ. ರಾಮುಣಿ—ನೀಲೇಶ್ವರ.
ಪಿ. ಗೋವಿಂದ ಮೇನೊನ್—ಕಾಸರಗೋಡ್.
ಪಿ. ಗೋಪಾಲ ನಾಯರ್—ಬೇಕಲ್.
ವಿ. ಕಣ್ಣನ್ ನಾಯನ್ನಾರ್—ವೇಣೂರು.
ಮು. ಗಿರಿಯಪ್ಪ ಬಂಗೇರ—(ಕನ್ನಿಗೋಳಿ) ಮುಲ್ಕಿ.
ಎ. ರ. ರಾಮಸ್ವಾಮಿ ಅಯ್ಯರ್—ಪುತ್ತೂರು.
ಡಿ. ರ. ಕೊರೆಯ್ಯ—ಉಳ್ಳಾಲ.
ಮು. ಪುರುಷಯ್ಯ—ಮೂಡಬಿದ್ರಿ.
ಬೊ. ತಿಮ್ಮಪ್ಪಮಲ್ಲಿ—ವಿಟ್ಲ.
ಯು. ಉಮ್ಮಪ್ಪ—ಗುರುಪುರ.
ಟಿ. ವಿ. ಕೃಷ್ಣ ಮೇನೊನ್—ಪೆರ್ಡಾಲ್.
ಮು. ಸುಬ್ಬರಾವ್—ಹೊಸದುರ್ಗ.
ಯು. ರಾಮಪ್ಪ—ಉಪ್ಪಿನಂಗಡಿ.
ಕಾ. ಭ. ಮಂಜುನಾಥಯ್ಯ—ಸುಳ್ಯ.
ವಿ. ಸ. ಕಮತಿ—ಬೆಳತಂಗಡಿ.

ಉಡಿಪಿ ಸರ್ಕಲ್.

ಜಿ. ತಿ. ತಿಕೇರಾ—ಪಡುಬಿದ್ರಿ.
ಕರುಣಾಕರ ಮೇನೊನ್—ಕಾಪು.
ಸ. ಎ. ಸಾಲ್ಡಾಞ್ಞಾ—ಉಡಿಪಿ.
ಟಿ. ನರಸಿಂಗರಾವ್—ಬೈಂದೂರು.
ಹ. ನಾರಾಯಣರಾವ್—ಕೋಟ.
ಜಿ. ಅನಂತಯ್ಯ—ಕುಂದಾಪುರ.
ಹ. ಶೇಷಗಿರಿರಾವ್—ತ್ರಾಸಿ.
ಬಿ. ಕೃಷ್ಣರಾವ್—ಬ್ರಹ್ಮಾವರ.
ಪಿ. ಶ್ರೀನಿವಾಸರಾವ್—ಮಲ್ಪೆ ಕೋಟರ್ಸ್.
ಎಚ್. ಸುಬ್ಬರಾವ್—ಕಾರ್ಕಳ.
ವಿ. ಶಂಕರನ್ ನಂಬಿಯಾರ್—ಹೆಬ್ರಿ.
ಬಿ. ರಾಮರಾವ್—ಗಂಗೊಳ್ಳಿ ಯಾರ್ಡ್.

D. P. W. ಇಂಜಿನಿಯರ ಇಲಾಖೆ.

Imperial ಇಂಪೀರಿಯಲ್.

C. W. Wood Esq. ತಿ. ಉವಿ. ಉಡ್ ದೊರೆಗಳು—ಎಕ್ಸಿಕ್ಯುಟಿವ್ ಇಂಜನಿಯರ್, ವೆಸ್ಟಕೋಸ್ಟ್ ಡಿವಿಜನ್, ಕೆಲಿಕಟ್.
ಎಸ್. ಎಕ್ಸ್. ಸಲ್ಡಾಞ್ಞಾ—ದ.ಕನ್ನಡ ಸಬ್ ಡಿವಿಜನ್ ಆಫಿಸರ್.
ಮು. ಸಲ್ಡಾಞ್ಞಾ—ಟಿ. ಒವರ್ಸಿಯರ್.

Local Fund ಲೋಕೆಲ್ ಫಂಡ್.

J. C. Dods Esq. ಜೆ. ಸಿ. ಡೊಡ್ಸ್ ದೊರೆಗಳು—ಇಂಜನಿಯರ್, ಮಂಗಳೂರು.
ಬಿ. ತಿವತಂಕರರಾವ್, ಬಿ. ಎ.—ಅ. ಹೆಡ್‌ಕ್ಲರ್ಕ್.
ಬಿ. ವೈಕುಂಠ ಬಾಳಿಗರು-ಸುಪರವೈಸರ್, ಕುಂದಾಪು.

ಓವರ್ಸಿಯರರು.

ಎ. ಪಿ. ಕೃಷ್ಣಮೇನೊನ್—೧ನೇ ಗ್ರೇಡ್, ಪುತ್ತೂರು.
ಮ. ಫ. ಡಿ. ರೊಜಾರಿಯೊ—೩ನೇ " ಕಾಸರಗೋಡು.

ಸಬ್ ಓವರ್ಸಿಯರರು.

ಬಿ. ಮು. ಮೊತ್ತಿ—೧ನೇ ಗ್ರೇಡ್ ಮಂಗಳೂರು.
ವಿ. ಪಂಚಪಕೇಶ ಅಯ್ಯರ್—" ಕುಂದಾಪುರ.
ಪಿ. ಟಿ. ನೋರೊಞ್ಞಾ—೨ನೇ " ಮಂಗಳೂರು.
ನ. ಸ. ಪೆರೇರ—೩ನೇ " ಉಡಿಪಿ.
ಎ. ಜೆ. ಮೊಂತೇರೊ—೩ನೇ " ಕಾರ್ಕಳ.

Forest Department ಜಂಗ್ಲಿ ಇಲಾಖೆ.

J. W. Cherry Esq. ಜೆ. ಡಬ್ಲ್ಯು. ಚೆರಿ ದೊರೆಗಳು—ದಕ್ಷಿಣ ಸರ್ಕಲ್ ಫೊರೆಸ್ಟ್ ಕನ್ಸರ್ವೇಟರ್ (ಬೇರೆ ಕೆಲಸದ ಮೇಲೆ).
H. A. Gass Esq. ಹ. ಅ. ಗೆಸ್ ದೊರೆಗಳು—ಆಕ್ಟಿಂಗ್—ಸದರ್.
H.S.Mullins Esq. ಹ.ಸ.ಮಲಿನ್ಸ್ ದೊರೆಗಳು—ಸ್ಪೆಶಲ್ ಫೊರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್ ಮಲಬಾರ ಮತ್ತು ದಕ್ಷಿಣ ಕನ್ನಡ.
J. S. Battie Esq., ಜೆ. ಎಸ್. ಬಿಟ್ಟಿ ದೊರೆಗಳು—ಡಿಪ್ಯುಟಿ ಕನ್ಸರ್ವೇಟರ್, ದಕ್ಷಿಣ ಕನ್ನಡ.
ರ. ವೆಂಕಟರಾವ್—ಹೆಡ್‌ಕ್ಲರ್ಕ್.
ಮು. ರಘುನಾಥಯ್ಯ—ಫೋರೆಸ್ಟ್ ಸರ್ವೆಯರ್.
ಎನ್. ಎಮ್. ರೇಗೊ—ರೇಂಜರ್, ಪುತ್ತೂರ್.
ಸಿ. ಹೆಮ್ಮಂಡ್—ರೇಂಜರ್, ಕುಂದಾಪುರ.
ಕೆ. ಸಯ್ಯದ್ ಇಸಾಕ್ ಸಾಹೆಬ್—ಡಿ. ರೇಂಜರ್, ಮಂಗಳೂರು.
ಪಿ. ವೆಂಕಟಕೃಷ್ಣಮ್ಮನಾಯಿಡು—ರೇಂಜರ್, ಉಡಿಪಿ.

Sea Customs Department
ಉಳವೆಸಾಯರ ಇಲಾಖೆ.

Lieut. H. S. Brown Esq, R. N. R. ಲೆಫ್ಟಿ. ಹ. ಸ. ಬ್ರೌನ್ ದೊರೆಗಳು.—ಮಂಗಳೂರ ಪೋರ್ಟ ವ ಕಸ್ಟಮ್ಸ ಆಫಿಸರ (ಬೇರೆ ಕೆಲಸದ ಮೇಲೆ).
R. L. Swann Esq. ರ. ಲ. ಸ್ವಾನ್ ದೊರೆಗಳು—ಅ. ಪೀಟರ್ ಫೆರ್ನಾಂಡೆಸ್—ಅಸಿಸ್ಟಾಂಟ ಸುಪರಿಂಟೆಂಡೆಂಟ್ ವ ಹೆಡ್‌ಕ್ಲರ್ಕ್.

ಸುಪರಿಂಟೆಂಡೆಂಟರು.

ಗಂಗೊಳ್ಳಿ (ಕುಂದಾಪುರ): ಮ. ಸಲ್ಡಾಞ್ಞಾ.
ಬೈಂದೂರ: ಸ. ಸುಬ್ರಾವ್.
ಮಲ್ಪೆ (ಉಡಿಪಿ): ಮು. ಆನಂದರಾವ್.
ಹಂಗಾರಕಟ್ಟಾ: ಸಾ. ಫ. ಮಿನೇಜಸ್.
ಕಾಸರಗೋಡು: ಸ. ಫ. ಡಿ. ರುಜಾರಿಯೊ.
ಮುಲ್ಕಿ: ಮಣ್ಣಿಗೆ ರಾಮರಾವ್.

ಅಸಿಸ್ಟಾಂಟ್ ಸುಪರಿಂಟೆಂಡೆಂಟರು.

ಮಂಜೇಶ್ವರ: ಮು. ರಾಮರಾವ್.
ಕುಂಬಳೆ: ಜೆ. ಫ್ರೆ. ಎಯಗಸ್.

Educational Department
ವಿದ್ಯಾ ಇಲಾಖೆ.

T. T. Logan Esq. B. A: ಟಿ. ಟಿ. ಲೋಗನ್ ದೊರೆಗಳು, ಬಿ.ಎ.—ಅ. ಶಾಲಾ ಇನ್ಸ್ಪೆಕ್ಟರ್, ಪಶ್ಚಿಮ ಸರ್ಕಲ್.
ಮ. ರಾ. ರಾ. ಟಿ. ಸೋಮಸುಂದರರಾವ್ ಪಂತ್ಲುರವರು—ಅಸಿಸ್ಟಾಂಟ್ ಇನ್ಸ್ಪೆಕ್ಟರ್, ವೆ. ಕೊ. ಡಿ.

ಮ.ರಾ.ರಾ. ಕೆ. ಪಿ. ಗುರುಸ್ವಾಮಿ ಅಯ್ಯರ್, ಬಿ. ಎ.—ಅ. ಆ. ಇನ್‌ಸ್ಪೆಕ್ಟರ್.

ಕು. ನಾ. ಎಶ್ವೇಶ್ವರರಾವ್, ಬಿ. ಎ.—ಸಬ್ ಅಸಿಸ್ಟಾಂಟ್ ಇನ್‌ಸ್ಪೆಕ್ಟರ್, ಉಡಿಪಿ ರೇಂಜ್.

ಮ. ಶೇಷಗಿರಿ ಪ್ರಭು, ಬಿ. ಎ.—ಕಾಸರಗೋಡ "

ಉ. ಕೃಷ್ಣಯ್ಯ, ಬಿ. ಎ.,—ದ. ಕನ್ನಡ ಜಿಲ್ಲಾ ಪ್ರಾಯೆಶಿ ಪರೀಕ್ಷಾ ಬೋರ್ಡಿನ ಚೆಯರ್ಮೆನ್.

ಮ. ವಾ. ರಾ. ಅ. ಸುಬ್ಬರಾವ್ ಗಾರ್ರು, ಬಿ. ಎ.—ಗವರ್ನಮೆಂಟ್ ಕೊಲೆಜ್ ಅ. ಹೆಡ್‌ಮಾಸ್ತರ್.

ನಾ. ಕೃಷ್ಣರಾವ್—ಮಂಗಳೂರ ನೋರ್ಮಲ್ ಶಾಲೆಯ ಅ. ಹೆಡ್‌ಮಾಸ್ತರ್.

Medical Department
ವೈದ್ಯ ಇಲಾಖೆ.

Surgeon Major H. St. C. Carruthers, M.D. ಸರ್ಜನ್ ಮೆಜರ್ ಹ. ಸೆಂಟ್ ಸಿ. ಕರುಥರ್ಸ್ ಡೊರೆಗಳು—ಜಲ್ಲಾ ಸರ್ಜನ್ ಮತ್ತು ಜೈಲು ಸುವರಿ. (ಬೇರೆ ಕೆ.)

M. R. Ry. P. Ganapathi Avergal, ಮ. ರಾ. ರಾ. ಕೊ. ಪೊ. ಗಣಪತಿ ಅವರ್‌ಗಳ್—ಅ. ಸದರ್.

ಮಿಸ್ತರ್ ಎ. ವರ್ಗಿಸ್—ಅಸಿಸ್ಟಾಂಟ್ ಸರ್ಜನ್.

ಟೊ. ರಾಮರಾವ್— ,, } ಸಿವಿಲ್ ಆಸ್ಪತ್ರೆ.
ಜೆ. ಮ. ಸಲ್ದಾನ್ಹಾ— ,, }

ಎ. ಸಿ. ಕೃಷ್ಣಮೇನೋನ್— ,, ಜೈಲ್ ಆಸ್ಪತ್ರೆ.

Local Fund Dispensaries
ಲೋಕೆಲ ಫಂಡ್ ಆಸ್ಪತ್ರೆಗಳು.
ಸಿವಿಲ್ ಎಫೊತಿಕೆರಿಗಳು.

ಬಿ. ಕೊಲಾಸೊ—ಕುಂದಾಪುರ.

ಕ. ರಾಮರಾವ್—(ಅ. ಆತಿ.) ಬಂಟ್ವಾಳ.

ಬಿ. ರಾಘವೇಂದ್ರರಾವ್—ಉಡಿಪಿ.

ಆ. ಫ. ಪತಿಯಾಸ್—ಕಾಸರಗೋಡು.

ಕೆ. ಕೃಷ್ಣರಾವ್—ಪುತ್ತೂರು.

ಬಿ. ಗೆಸ್ಕಾಯಿನ್—ಕಾರ್ಕಳ.

ಅಸ್ಟಿಟೆಂಟ್ ಅಸಿಸ್ಟಾಂಟರು.

ಎ. ಸುಂದರರಾವ್—ಹೊಸದುರ್ಗ.

ಬಿ. ಮಹಮದಾಲಿ—ಕೊಲ್ಲೂರು.

ಮ. ಸುಬ್ರಾವ್—ಉಪ್ಪಿನಂಗಡಿ.

ಸ. ಲ. ಡಿ. ಮುಸ್ಕರೆಞಾಸ್—ಹೆಬ್ರಿ.

ಮ. ಶೇಷಭಟ್ಟ—ಬೆಳತಂಗಡಿ.

ಕೆ. ವೆಂಕಟರಾವ್—ಮುಲ್ಕಿ.

ಮ. ಶ್ರೀನಿವಾಸ ಹೆಗ್ಗಡೆ—ಮಂಜೇಶ್ವರ.

ಮ. ಅಚ್ಯುತಭಂಡಾರಿ—ಶಂಕರನಾರಾಯಣ.

ಸ. ರಾಮಸ್ವಾಮಿ ಅಯ್ಯರ್—ಮೂಡಬಿದ್ರಿ.

Vaccine. Deptt. ದಾಕುಹಾಕುವ ಇಲಾಖೆ.

ಶಾ. ಕೃಷ್ಣನಂಬಿಯರ್—1ನೇ ದ. ಡಿಪ್ಯುಟಿ ಇನ್‌ಸ್ಪೆ.

ಡಿ. ಆರ್. ಕೊಲಾಸೊ—2ನೇ ದ. ,, ,,

Postal and Telegraph Department.
ಟಪ್ಪಾಲ ವ ತಂತೀ ಇಲಾಖೆ.

T. D. Dindwidie Esq. ಟಿ. ಡಿ. ಡಿಂಡ್ವಿಡಿ ಡೊರೆಗಳು—ಸುಪರಿಂಟೆಂಡೆಂಟ್, ತಿವಿಜನಲ್ ಡಿವಿಜನ್.

V. W. Combes Esq. ವಿ. ವ್ಹಿ. ಕೊಮ್ಬ್ಸ್—ಪೋಸ್ಟ್ ಮತ್ತು ಟೆಲಿಗ್ರಾಫ್ ಮಾಸ್ಟರ್, ಮಂಗಳೂರು.

Mr. J. M. Alemao ಮಿಸ್ತರ್ ಜೆ. ಮ. ಅಲೆಮಾವೊ—ಡಿಪ್ಯುಟಿ ಪೋಸ್ಟ್ ಮಾಸ್ಟರ್.

ತಿ. ಅದ್ವಾಸಾಮಿಪಿಳ್ಳೆ—ಪೋ. ಆಫಿಸ್ ಇನ್‌ಸ್ಪೆಕ್ಟರ್.

ಸಬ್ ಪೋಸ್ಟ್‌ಮಾಸ್ತರರು.

ಮ. ಗಣಪಯ್ಯ—ಪುತ್ತೂರು ಪೋ. ವ ಟೆಲಿಗ್ರಾಫ್.

ಡಿ. ಪಾಯಿಸ್—ಮಂಗಳೂರು ಸಿಟಿ.

ಕೆ. ಶೇಷಯ್ಯ—ಉಡಿಪಿ ಪೋಸ್ಟ್ ವ ಟೆಲಿಗ್ರಾಫ್.

ಬಿ. ಲೋಕಯ್ಯ—ಕಾಸರಗೋಡು.

ಜಿ. ಮಾಧವರಾವ್—ಕಾರ್ಕಳ.

ಕೆ. ಅನಂತನಾಯ್ಕ—ಮುಲ್ಕಿ.

ಹೊ. ಸುಬ್ಬರಾವ್—ಕುಂದಾಪುರ.

ಬ್ರೆಂಚ್ ಪೋಸ್ಟ್‌ಮಾಸ್ತರರು.

ಮಹಮ್ಮದ ಕಮಾಲ—ಹೊಸದುರ್ಗ.

ಚ. ವೆಂಕಟರಾವ್.—ಬೈಂದೂರು.

ಎ. ಎಸ್. ಅರಜಾ—ಬೆಳತಂಗಡಿ.

ಮ. ಕೃಷ್ಣರಾವ್—ಉಪ್ಪಿನಂಗಡಿ.

ಬಿ. ವೆಂಕಟರಮಣ—ಬ್ರಹ್ಮಾವರ.

ಎಮ್. ವಿಟ್ಟಪ್ಪ ಕಮ್ತಿ—ಬಂಟವಾಳ.

District Board
ಡಿಸ್ಟ್ರಿಕ್ಟ್ ಬೋರ್ಡ ಮೆಂಬರರು.

ಡಿಸ್ಟ್ರಿಕ್ಟ್ ಕಲೆಕ್ಟರರು— ಪ್ರೆಸಿಡೆಂಟ್.

ಧಾ. ಅನಂತಯ್ಯನವರು, ಖ. ಡಿ. ಕ.—ವೈಸ್‌ಪ್ರೆಸಿಡೆಂಟ್.

ಹೆಡ್ ಅಸಿಸ್ಟಾಂಟ್ ಕಲೆಕ್ಟರರು.

ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರು.

ಜನರಲ್ ಡ್ಯೂಟಿ ಡಿಪ್ಯುಟಿ ಕಲೆಕ್ಟರರು.

ಕೊ. ಪೊ. ಗಣಪತಿಯವರು. ಅ. ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸೆನಿಟೆರಿ ಆಫೀಸರರು.

ಕು. ನಾ. ಎಶ್ವೇಶ್ವರರಾವ್, ಶಾ. ಸ. ಅ. ಇನ್‌ಸ್ಪೆಕ್ಟರ್.

ಎಫ್. ಹೂಬರ್ ಡೊರೆಗಳು.

ಹ. ರ. ಮೊರ್ಗೆನ್ ಡೊರೆಗಳು.

ದಿವಾನ್ ಬಹದೂರ್ ಎ. ಪಿಂತೊರವರು.

ಕೊಡಿಯಾಲ ರಾಮರಾಯರು.

ನೆಲ್ಲಿಕಾಯಿ ಶ್ರೀನಿವಾಸರಾಯರು.

ಖಾನ್ ಬಹದೂರ್ ಹಾಜ ಅಬುಬಕರ್ ಜ್ಯಾರಿಗಳು.

ನೊ. ಪಿ. ಫೆರ್ನಂದಿಸರು.

ಚ. ಗೋಪಾಲಕೃಷ್ಣಯ್ಯನವರು.

ಮು. ಕಾಳಪ್ಪ ಶೆಟ್ರು.

ಜಾಕ ಅಲ್ವರು.

ಬೈಂ. ನಾರಾಯಣರಾಯರು.

ಹ. ಮಾಧವಪ್ಪಯ್ಯನವರು.

ಉ. ಡಿ. ವೆಂಕಟರಾಯರು.

ಕಾ. ಪ. ಅಚ್ಯುತಯ್ಯನವರು.

ಟಿ. ಕಾಂತಪ್ಪನವರು.

ಪಾ. ಕಾಸ್ತಲಿಯನ್‌ರು.

ಕೆ. ಲಕ್ಷ್ಮಪ್ಪಅರಸು ಕುಂದಹೆಗಡೆರು.
ಎಸ್. ಮಂಗೇಶರಾಯರು.

ಫು. ಮು. ವಾಸ್—ಹೆಡ್ ಕ್ಲರ್ಕ್.

ತಾಲೂಕು ಬೋರ್ಡ ಮೆಂಬರರು.

ಮಂಗಳೂರು ತಾಲೂಕು.

ಹೆಡ್ ಕ್ವಾರ್ಟರ್ಸ್ ಡಿ. ಕಲೆಕ್ಟರ್—ಪ್ರೆಸಿಡೆಂಟ್.
ಬೊ. ತಿವಯ್ಯರು, ಅ. ತಹತಿಲ್—ವೈಸ್‌ಪ್ರೆಸಿಡೆಂಟ್.
ಕೊ. ಪೊ. ಗಣಪತಿಯವರು, ಅ. ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸೆನಿಟರಿ ಆಫಿಸರರು.
ಕು. ನಾ. ಎಶ್ವೇಶ್ವರರಾವ್, ಶಾ. ಸ. ಅ. ಇನ್‌ಸ್ಪೆಕ್ಟರ್
ಕೊ. ರಾಮರಾಯರು.
ನೆ. ಶ್ರೀನಿವಾಸರಾಯರು.
ಮು. ಕಾಳಪ್ಪ ಶೆಟ್ರು.
ಜೆ. ಸ. ಅಲ್ಬುಕೆರ್ಕರು.
ರಾವ್‌ಸಾಹೇಬ ಸ. ಫ. ಬ್ರಿತೊರವರು.
ವೆ. ಭೋಜರಾಯರು.
ಖಾನ್ ಬಹದೂರ್ ಹಾಜಿ ಅಬ್ಬುಬಕರ್ ಬ್ಯಾರಿಗಳು.
ಕುಂಞಮ್ಮ ಶೆಟ್ರು.

ಉಡಿಪಿ ತಾಲೂಕು.

ಹೆಡ್ ಅಸಿಸ್ಟಾಂಟ್ ಕಲೆಕ್ಟರರು— ಪ್ರೆಸಿಡೆಂಟ್.
ಮ. ಎ. ತಿಕೇರರವರು, ತಹ.—ವೈಸ್ "
ರ. ಲ. ಹೆಡ್‌ನ್ ಡೊರೆಗಳು—ನ. ಅ. ಕ. ಇನ್.
ಕು. ನಾ. ಎಶ್ವೇಶ್ವರರಾವ್, ಶಾ. ಸ. ಅ. ಇನ್‌ಸ್ಪೆಕ್ಟರ್.
ಬಿ. ರಾಘವೇಂದ್ರಾವ್, ಸಿವಿಲ್ ಎಪ್ಪೊತಿಕೆರಿ.
ವೈ. ನಾರಾಯಣರಾಯರು.
ಕೆ. ಲಕ್ಷ್ಮಪ್ಪ ಅರಸು ಕುಂದ ಹೆಗಡೆರು.
ನಯ್ಮದ್ ಅಬ್ಬಾಸ್ ಸಾಹೇಬರು.
ಜಾಕಿ ಆಲ್ವರು.
ಎ. ಸುಬ್ಬಯ್ಯ ಕುರ್ಲ ಹೆಗಡೆರು.
ಎಸ್. ರಾಜೇಂದ್ರ ತೋಳಾರರು.
ಜಾ. ಚಂದಯ್ಯ ಹೆಗಡೆರು.
ಪಾ. ಶ್ರೀನಿವಾಸ ನಾಯಕರು.

ಕುಂದಾಪುರ ತಾಲೂಕು.

ಹೆಡ್ ಅಸಿಸ್ಟಾಂಟ್ ಕಲೆಕ್ಟರರು— ಪ್ರೆಸಿಡೆಂಟ್.
ಬೊ. ಬಾಬುರಾಯರು, ಅ. ತಹ.—ವೈಸ್ "
ರ. ಲ. ಹೆಡ್‌ನ್ ಡೊರೆಗಳು—ನ. ಅ. ಇನ್‌ಸ್ಪೆಕ್ಟರ್.
ಕು. ನಾ. ಎಶ್ವೇಶ್ವರರಾವ್, ಶಾ. ಸ. ಅ. ಇನ್‌ಸ್ಪೆಕ್ಟರ್.
ಬಿ. ಕೊರಾಸೊ—ಸಿವಿಲ್ ಎಪ್ಪೊತಿಕೆರಿ.
ಪಿ. ವೆಂಕಟರಮಣಯ್ಯನವರು.
ಫನ. ಲ. ಗೆಂಗ್‌ನಾಗೆರ್ ಡೊರೆಗಳು.
ಫನ. ಸ. ಲ. ಫೆರ್ನಂಡೆಸ್ ಸಾಹೇಬರು.
ಉ. ಡಿ. ವೆಂಕಟರಾಯರು.
ಹ. ಮಾದಪ್ಪಯ್ಯನವರು.
ಬಸ್ರೂರು ಸುಬ್ಬಯ್ಯ ಶೆಟ್ರು.
ಬಸ್ರೂರು ವೆಂಕಟ್ರಮಣ ಕಮ್ತಿಯರು.
ಅಮಾಸೆಬೈಲ ಗೋವಿಂದ್ರಾಯ ಕೊಡ್ಗಿಯರು.

ಕಾಸರಗೋಡು ತಾಲೂಕು.

ಜನರಲ್ ಡ್ಯೂಟಿ ಡಿ. ಕಲೆಕ್ಟರ್—ಪ್ರೆಸಿಡೆಂಟ್.
ನೊ. ಪಿ. ಫೆರ್ನಂಡಿಸರು, ಅ. ತಹ.-ವೈಸ್‌ಪ್ರೆಸಿಡೆಂಟ್.
ಸು. ಆನಂದರಾಯರು, ಅ. ಡಿಪ್ಯುಟಿ ತಹತಿಲ್‌ದಾರ್.
ಎಮ್. ಶೇಷಗಿರಿ ಪ್ರಭುಗಳು, ತಾ. ಸ. ಅ. ಇನ್‌ಸ್ಪೆ.
ಎ. ಎಫ್. ಮತ್ತಯಸರು, ಸಿವಿಲ್ ಎಪ್ಪೊತಿಕೆರಿ.
ಫನ. ಇ. ಡೀಜ್ ಡೊರೆಗಳು.
ಫನ. ಆರ್. ಪೆ. ಬಿ. ಲುಯಿಸರು.
ಕೆ. ಸುಬ್ರಾಯ ಶಾನಭಾಗರು.
ಚಂದಾರೆ ಕಮ್ಮಾರ್ ನಾಯೆರರು.
ಹ. ಗೋಪಾಲಕೃಷ್ಣಯ್ಯನವರು.
ಕಾ. ಪ. ಅಚ್ಚುತಯ್ಯನವರು.
ಅಬ್ದುಲ್ ಖಾದರ್ ಸಾಹೇಬರು.
ಮ. ಕೋಟ್ಯಣ್ಣ ಬಂಟರು.

ಉಪ್ಪಿನಂಗಡಿ ತಾಲೂಕು.

ಜನರಲ್ ಡ್ಯೂಟಿ ಡಿ. ಕಲೆಕ್ಟರ್—ಪ್ರೆಸಿಡೆಂಟ್.
ಪಿ. ಕಾಸ್ತಿಲಿಯಾನರು, ಅ. ತಹ.—ವೈಸ್ ಪ್ರೆಸಿಡೆಂಟ್.
ಅ. ದೇವಪ್ಪಪೂಂಜರು—ಬೆಳ್ತಂಗಡಿ ಡಿ. ತ.
ಕೊ. ಕೃಷ್ಣರಾವ್, ಸಿ. ಎಪ್ಪೊತಿಕೆರಿ.
ಪಾದ್ರಿ ಕಾ. ಜೊ. ರೇಗರು.
ಕಾ. ವೆಂಕಟರಮಣಯ್ಯನವರು.
ವೈ. ಶೀತಾರಾಮಯ್ಯನವರು.
ಬೆಳ್ಳಿಪಾಡಿ ನರಸಿಂಗರೈಯವರು.
ಸಾ. ಮಂಗೇತರಾಯರು.
ರಾಜಾ ಲಕ್ಷ್ಮನಾಥಸ್ವಾಮಿಜ.
ಕಣ್ಯೂರು ಚಂದಯ್ಯ ಹೆಗಡೆರು.
ಜಾ. ಉಂಮರೆ ಬ್ಯಾರಿಗಳು.
ಮೆಂ. ವೀರಪಂಗಪ್ಪ ಶೆಟ್ರು.

Mangalore Municipal Councillors.
ಮಂಗಳೂರ ಮುನಿಶಿಪಲ್ ಕೌನ್ಸಿಲರು.

ಮ. ರಾ. ರಾ. ಧಾ. ಅನಂತಯ್ಯನವರು—ಚಯರ್ಮೆನ್.
ಪಾ. ಸೀತಾರಾಯರು, ಹೆ. ಕ್ವಾ. ಡಿ. ಕಲೆಕ್ಟರ್.
ಅ. ಸಿವಿಲ್ ಸರ್ಜನರು.
ತೆ. ನು. ರಾಮರಾಯರು.
ಎಫ್. ಹೂಬರ್ ಡೊರೆಗಳು.
ಹ. ರ. ಮೊರ್ಗೆನ್ ಡೊರೆಗಳು.
ರಾವ್ ಬಹದೂರ್ ನ. ಶಿವರಾಯರು.
ಡಿ. ವಾಸರು.
ಕದಾಡ ರಾಮರಾಯರು.
ಹ. ಕೃಷ್ಣರಾಯರು, ಬಿ. ಎ.
ತಿ. ಎಸ್. ಬ್ರಿತೊನವರು.
ಬಿ. ಎಸ್. ಸಲ್ದಾನರು.
ರಾವ್ ಸಾಹೇಬ್ ಸಾ. ಫೆ. ಬ್ರಿತೊನವರು.
ಉ. ಕೃಷ್ಣಯ್ಯನವರು, ಬಿ. ಎ.
ಬೈಲ್ ಅಬ್ಬು ಬ್ಯಾರಿಗಳು.
ಜೆ. ಲ. ಫೆರ್ನಂದಿಸರು.
ಇ. ಪಿ. ಫೆರ್ನಂದಿಸರು.
ಜೆ. ಸ. ಅಲ್ಬುಕೆರ್ಕರು.
ಡೊಕ್ಟರ್ ಕಾ. ಎಟ್ಟಿಲರಾಯರು.
ಎಫ್. ಜೆ. ಮಸ್ಕರೆನಾರು.

ಮು. ಸಾಂತಪ್ಪಾ—ಮೆನೆಜರ್.
ಎ. ಇ. ಆರೊನ್ಸ್—ಇನ್‌ಸ್ಪೆಕ್ಟರ್.

Bank of Madras ಮದ್ರಾಸು ಬೇಂಕ್.

Justin W. Boys Esq. ಜುಸ್ಟಿನ್ ಉ. ಬೋಯ್ಸ್ ಡೊರೆಗಳು—ಏಜಂಟ್, ಮಂಗಳೂರು.
R. H. B. Dawson Esq. ರ. ಹ. ಬಿ. ಡೊಸನ್ ಡೊರೆಗಳು—ಎಕೌಂಟಾಂಟ್.
ಬಿ. ನಾರಾಯಣಪೈಗಳು—ಕೆಷಿಯರ್ (ಮುತ್ಸದ್ದಿ).

೧೮೯೯ನೇ ವರ್ಷದ ಹಬ್ಬಗಳು.

*ಈ ಗುರುತು ನುವಾರ್ತಾಪಕ್ಷದವರಿಗೂ ರೋಮನ್ ಕಥೋಲಿಕರಿಗೂ ಕೂಡ ಇರುವ ಹಬ್ಬಗಳನ್ನೂ,
†ಈ ಗುರುತು ರೋಮನ್ ಕಥೋಲಿಕರಿಗೆ ಮಾತ್ರ ಇರುವ ಹಬ್ಬಗಳನ್ನೂ,
§ಈ ಗುರುತು ಸರಕಾರ ರಜಾ ಇರುವ ದಿನಗಳನ್ನೂ ಸೂಚಿಸುತ್ತವೆ.

CHRISTIAN FESTIVALS.
ಕ್ರೈಸ್ತರ ಹಬ್ಬಗಳು.

ಜನವರಿ ೧ *ನವಸಂವತ್ಸರದ ಹಬ್ಬ (New Year's Day) §.
" ೬ *ಪ್ರತ್ಯಕ್ಷತೆಯ ಹಬ್ಬ (Epiphany).
ಫೆಬ್ರುವರಿ ೨ †ಮರಿಯಳ ಶುದ್ಧೀಕರಣ.
" ೧೪ †ಉಪೋಷ್ಯದ ಮೊದಲನೇ ದಿನ §.
ಮಾರ್ಚಿ ೨೬ †ಮರಿಯಳ ಸಪ್ತವ್ಯಥೆಗಳ ಹಬ್ಬ.
" ೨೫ †ಮರಿಯಳಿಗಾದ ಶುಭವಾರ್ತೆ.
" ೨೬ *ಪಾಮ್‌ಸಂಡೆ (Palm Sunday).
" ೩೦ †ಮೊಂಡಿ ಥರ್ಸ್‌ಡೆ ಹಬ್ಬ.
" ೩೧ *ಕ್ರೈಸ್ತನ ಮರಣದಿನ (Good Friday) §.
ಎಪ್ರಿಲ್ ೧ †ನರಿಶುದ್ಧ ಶನಿವಾರ §.
" ೩ *ಪಸ್ಕ ಹಬ್ಬ (Easter Sunday).
" ೪ †ಪಸ್ಕದ ಮೇಲಿನ ಸೋಮವಾರ.
" ೫ †ಪಸ್ಕದ ಮೇಲಿನ ಮಂಗಳವಾರ.
ಮೇ ೧೧ *ದಿವಾರೋಹಣದ ಹಬ್ಬ (Ascension Day) §.
" ೨೧ *ಪಂಚಾಶತ್ತಿನ ಹಬ್ಬ (Pentecost).
" ೨೮ *ತ್ರೈಕತ್ವದ ಹಬ್ಬ (Trinity).
ಜೂನ್ ೧ †ಕೊರ್ಪುಸ್ ಕ್ರೈಸ್ತೀ ಹಬ್ಬ §.
" ೨೪ †ಸ್ನಾನಿಕ ಯೋಹಾನನ ಜನ್ಮದಿನ.
" ೨೯ †ಪೇತ್ರನ ಮತ್ತು ಪೌಲನ ದಿನ.
ಜುಲಾಯಿ ೨ †ಮರಿಯಳ ಸಂದರ್ಶನ.
" ೧೬ †ಕಾರ್ಮೆಲ ಬೆಟ್ಟದ ಮರಿಯಳ ದಿನ.
" ೨೧ †ಇಗ್ನಾಸಿಯುಸ್ ಲೊಯೋಲನ ದಿನ.
ಅಗೊಸ್ತು ೫ †ಪೌರ್ಸಿಯುಂಕುಲ ಹಬ್ಬ.
" ೧೦ †ರಕ್ತಸಾಕ್ಷಿಯಾದ ಲಾರೆನ್ಸನ ದಿನ.
" ೧೫ †ಮರಿಯಳ ಸ್ವರ್ಗಾರೋಹಣ §.
ಸಪ್ತಂಬರ ೮ †ಮರಿಯಳ ಜನ್ಮದಿನ.
" ೨೯ †ಮಿಕಾಯಲ್ಮಾಸ್ ಹಬ್ಬ.
ಒಕ್ತೋಬರ ೪ †ಅಸ್ಸೀಸಿಯ ಸೆಂತ್ ಫ್ರಾನ್ಸಿಸನ ದಿನ.
ನವಂಬರ ೧ †ಸಮಸ್ತ ಪರಿಶುದ್ಧರ ದಿನ.
ನವಂಬರ ೨ †ಸಮಸ್ತ ಪ್ರಾಣಗಳ ದಿನ.
ದಶಂಬರ ೨ *ಕ್ರೈಸ್ತನ ಆಗಮನ (Advent).
" ೩ †ಸೆಂತ್ ಫ್ರಾನ್ಸಿಸ್ ಕ್ಸವೀರನ ದಿನ.
" ೮ †ಮರಿಯಳ ಶುದ್ಧೋತ್ಪತ್ತಿ.
" ೨೧ †ಆಪೊಸ್ತಲ ತೋಮನ ದಿನ.
" ೨೫ *ಕ್ರೈಸ್ತನ ಜನನದ ಹಬ್ಬ (Nativity of our Lord Jesus Christ) §.
" ೨೬ †ರಕ್ತಸಾಕ್ಷಿಯಾದ ಸ್ತೆಫನನ ದಿನ.

MOHAMMEDAN FESTIVALS.
ಮಹಮ್ಮದಿಯರ ಹಬ್ಬಗಳು.

ಈ ಹಬ್ಬಗಳೆಲ್ಲಾ ಕಳದ ದಿವಸದ ಸೂರ್ಯಾಸ್ತ ಮಾನದಿಂದ ಆರಂಭಿಸಿ, ವರ್ತಮಾನ (ನಡಿಯುವ) ದಿನದ ಸಾಯಂಕಾಲ ವರೆಗೆ ಇರುವದರಿಂದ ಅವು ವಾಡಿಕೆಯಾಗಿ ನಮ್ಮ ಹಗಲಿನ ಯಾವ ತಾರೀಕಿಗೆ ಸರಿ ಬೀಳುತ್ತವೋ ಆ ತಾರೀಕು ಕಾಣಿಸಲ್ಪಟ್ಟಿದೆ.

ಜನವರಿ ೧೪ ರಮ್‌ಜಾನ್(ಉಪವಾಸ)ಆರಂಭ§.
ಫೆಬ್ರುವರಿ ೧೧ " ತಿಂಗಳ ಕಡೇ ದಿನ §.
" ೧೩ ಶವ್ವಾಲ್ ಹಬ್ಬ (ಪೆರುನಾಳ್) §.
ಮಾರ್ಚಿ ೧೪ ಜಲ್ಹಾಯದ್ ತಿಂಗಳ ಆರಂಭ.
ಎಪ್ರಿಲ್ ೧೩ ಜಲ್ಹಜ್ " "
" ೨೧ ಬಕ್ರೀದ್ ಹಬ್ಬ (ಪೆರುನಾಳ್) §.
ಮೇ ೧೩ ಮೊಹರಮ್ ಹಬ್ಬದ ಆರಂಭ §. (೧೩೧೯ ಹಿಜರಿ).
" ೨೨ " " ಕಡೇ ದಿನ §.
ಜೂನ್ ೧೦ ಸಫರ್ ತಿಂಗಳ ಆರಂಭ.
ಜುಲಾಯಿ * ಅಖರ್‌ಜಾರತುಂಬು.
" ೧೦ ರಬಿಲಾವಲ್ ತಿಂಗಳ ಆರಂಭ.
ಅಗೊಸ್ತು ೯ ರಬಿಲಾಖರ್ " "
ಸಪ್ತಂಬರ ೭ ಜಮಾದಿಲಾವಲ್ " "
ಒಕ್ತೋಬರ ೭ ಜಮಾದಿಲಾಖರ್ " "
ನವಂಬರ * ರಜಬ್ " "
ದಶಂಬರ * ಶಾಬಾನ್ " "
" ೧೯ ಶಬೀಬರಾತ್ ಹಬ್ಬ.

HINDU FESTIVALS.

ಹಿಂದು ಜನರ ಹಬ್ಬಗಳು.

ಜನವರಿ ೧೫ ಮಕರಸಂಕ್ರಮಣ (ರಾತ್ರಿಮುಹೂರ್ತ)
" ೧೬ ಉತ್ತರಾಯಣಾರಂಭ.
ಫೆಬ್ರವರಿ ೧೬ ರಥಸಪ್ತಮಿ.
" ೧೯ ಭೀಷ್ಮಾಷ್ಟಮಿ.
" ೧೯ ಮಧ್ವನವಮಿ.
ಮಾರ್ಚಿ ೧೦ ಮಹಾಶಿವರಾತ್ರಿ.
" ೨೬ ಹೋಳೀ ಹಬ್ಬ (ಕಾಮದಹನ).
" ೨೭ ಹೋಳೀ ಹಬ್ಬದ ಕಡೇ ದಿನ ಕ್ಷ.
ಎಪ್ರಿಲ್ ೧೧ ಚಾಂದ್ರಮಾನಯುಗಾದಿ ಕ್ಷ.
" ೧೨ ಸೌರಮಾನಯುಗಾದಿ.
" ೧೯ ಶ್ರೀರಾಮನವಮಿ.
" ೨೫ ಚಿತ್ರಾಪೂರ್ಣಿಮಿ.
ಮೇ ೧೨ ಅಕ್ಷಯತೃತೀಯಾ.
" ೨೭ ನರಸಿಂಹಜಯಂತೀ.
" ೨೫ ವೈಶಾಖ ಪೂರ್ಣಿಮಾ.
ಜುಲಾಯಿ ೧೫ ಕರ್ಕಾಟಕಸಂಕ್ರಮಣ
" ೧೫ ದಕ್ಷಿಣಾಯನ ಆರಂಭ.
" ೧೯ ಪ್ರಥಮೈಕಾದಶೀ.
" ೨೦ ಪ್ರಥಮದ್ವಾದಶೀ ಕ್ಷ.
ಅಗೊಸ್ತು ೧೧ ನಾಗರಪಂಚಮಿ (ಸಾಮೋಪಾಕರ್ಮ.)
" ೧೯ ವರಮಹಾಲಕ್ಷ್ಮೀವ್ರತ.
" ೨೦ ಋಗುಪಾಕರ್ಮ ಕ್ಷ.
" ೨೧ ಯಜುರುಪಾಕರ್ಮ, ಸಮುದ್ರ ಪೂಜೆ.
ಅಗೊಸ್ತು ೨೭ ಕೃಷ್ಣಾಷ್ಟಮಿ (ಮರುದಿನ ರಜೆ ಕ್ಷ).
ಸಪ್ತಂಬರ ೨ ಕೈಲ ಮುಹೂರ್ತ (ಕೊಡಗಿನಹಬ್ಬ).
" ೯ ಗೌರೀತೃತೀಯಾ (ಹರಿತಾಳಿಕಾ) ಕ್ಷ.
" ೯ ವಿನಾಯಕಚತುರ್ಥಿ ಕ್ಷ.
" ೧೦ ಋಷಿಪಂಚಮಿ.
" ೧೨ ಎಳೆಯಷ್ಟಮಿ.
" ೧೯ ಅನಂತವ್ರತ ಕ್ಷ.
" ೨೦ ಮಹಾಲಯಪಕ್ಷಾರಂಭ.
ಒಕ್ತೋಬರ ೪ ಮಹಾಲಯ ಅಮಾವಾಸ್ಯೆ ಕ್ಷ.
" ೫ ನವರಾತ್ರಿ ಆರಂಭ.
" ೯ ಲಲಿತಾಪಂಚಮಿ.
" ೧೧ ಮೂಲನಕ್ಷತ್ರ (ಶಾರದಾಪೂಜೆ).
" ೧೨ ಮಹಾನವಮಿ ಕ್ಷ.
" ೧೪ ವಿಜಯದಶಮಿ.
" ೧೬ ಕಾವೇರಿಸಂಕ್ರಮಣ (ದಂಪತೀಪೂಜೆ).
ನವಂಬರ ೩ ನರಕಚತುರ್ದಶೀ (ದೀಪಾವಳೀ) ಕ್ಷ.
" ೪ ದೀಪಾವಳೀ ಅಮಾವಾಸ್ಯೆ (ಧನಲಕ್ಷ್ಮೀ ಪೂಜೆ).
" ೫ ಗೋಪೂಜೆ.
" ೪ ಬಲಿಪಾಡ್ಯ (ವಿಕ್ರಮನಪರ್ವಾರಂಭ) ಕ್ಷ.
" ೧೨ ಕಾರ್ತಿಕ ಏಕಾದಶೀ.
" ೧೪ ಉತ್ಥಾನದ್ವಾದಶೀ (ತುಲಸೀಪೂಜೆ) ಕ್ಷ.
" ೧೫ ಕಾರ್ತಿಕಪೂರ್ಣಿಮಾ (ದೀಪೋತ್ಸವ).
" ೧೬ ಕೊಡಗು ದೇಶದಲ್ಲಿ ಹಬ್ಬ.
ದಶಂಬರ ೯ ಸುಬ್ರಹ್ಮಣ್ಯಷಷ್ಠಿ.
" ೧೫ ವೈಕುಂಠ ಏಕಾದಶೀ.
" ೧೪ ಮುಕ್ಕೋಟಿ ದ್ವಾದಶೀ.

DIFFERENT ERAS ವಿವಿಧ ಶಕಾಬ್ದಗಳು.

ಎಪ್ರಿಲ್ ೧೧ ವಿಕಾರಿ ಎಂಬ ಶಾಲಿವಾಹನ ವರ್ಷ ೧೮೨೧ನೇ ಚಾಂದ್ರಸಂವತ್ಸರಾದಿ. "ಶಾಲಿವಾಹನಶಕ" ಕ್ರಿಸ್ತಾಬ್ದ ೭೮ರಲ್ಲಿ ಆರಂಭಿಸಿತು.
ಎಪ್ರಿಲ್ ೧೭ ಕಲಿಯುಗದ ೫೦೧೯ನೇ ವರ್ಷಾದಿ.
ಮೇ ೧೭ ಮಹಮ್ಮದೀ ಹಿಜರೀ ೧೨೧೭ನೇ ವರ್ಷಾದಿ. "ಫಸಲಿ" ಕ್ರಿಸ್ತಾಬ್ದ ೫೯೦ರಲ್ಲಿ ಆರಂಭಿಸಿತು. "ಹಿಜರಿ" ಕ್ರಿಸ್ತಾಬ್ದ ೬೨೨ರಲ್ಲಿ ಆರಂಭಿಸಿತು.
ಜುಲಾಯಿ ೧ ಫಸಲಿ ೧೨೧೯ನೇ ವರ್ಷಾದಿ.
ಸಪ್ತಂಬರ ೧೬ ಮಲಯಾಳಕೊಲ್ಲಮ್ ೧೦೬೫ನೇ ವರ್ಷಾದಿ. "ಕೊಲ್ಲಮ್" ಕ್ರಿಸ್ತಾಬ್ದ ೭೮೨ರಲ್ಲಿ ಆರಂಭಿಸಿತು.
ನವಂಬರ ೪ ವಿಕ್ರಮಾದಿತ್ಯಶಕ ೧೮೫೬ನೇ ವರ್ಷಾದಿ. "ವಿಕ್ರಮಾದಿತ್ಯಶಕ" ಕ್ರಿಸ್ತಾಬ್ದಕ್ಕೆ ಮುಂಚೆ ೫೭ರಲ್ಲಿ ಆರಂಭಿಸಿತು.

OTHER HOLIDAYS ಇತರ ರಜಾದಿನಗಳು.

ಮೇ ೨೪ ಶ್ರೀಮತೀ ಮಹಾರಾಜ್ಞಿ ವಿಕ್ತೋರಿಯ ಚಕ್ರವರ್ತಿನಿಯವರ ಜನ್ಮದಿನ ಕ್ಷ.
ನವಂಬರ ೯ ಪ್ರಿನ್ಸ್ ಒಫ್ ವೇಲ್ಸ್ ಎಂಬ ಯುವಮಹಾರಾಜರ ಜನ್ಮದಿನ ಕ್ಷ.

೨೯, ೩೦, ೩೧ ದಿವಸಗಳಿರುವ ಪ್ರತಿ ತಿಂಗಳಿಗೆ ೧ ರೂಪಾಯಿಯಿಂದ ೫೦೦ ರೂಪಾಯಿ ವರೆಗೆ ಸಂಬಳ ಇರುವವರಿಗೆ ಪ್ರತಿ ಒಂದು ದಿವಸಕ್ಕೆ ಏನು ಬೀಳುತ್ತದೆಂಬದನ್ನು ತೋರಿಸುವ ಪಟ್ಟಿ

ತಿಂಗಳಿನ ಸಂಬಳ.	೨೮ ದಿವಸಗಳ ತಿಂಗಳು.			೨೯ ದಿವಸಗಳ ತಿಂಗಳು.			೩೦ ದಿವಸಗಳ ತಿಂಗಳು.			೩೧ ದಿವಸಗಳ ತಿಂಗಳು.		
ರೂ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
೧	೦	೦	೩	೦	೦	೩	೦	೦	೩	೦	೦	೩
೨	೦	೦	೭	೦	೦	೬	೦	೦	೬	೦	೦	೬
೩	೦	೦	೧೦	೦	೦	೯	೦	೦	೯	೦	೦	೮
೪	೦	೧	೨	೦	೧	೨	೦	೧	೨	೦	೧	೧
೫	೦	೧	೫	೦	೧	೫	೦	೧	೫	೦	೧	೪
೬	೦	೧	೮	೦	೧	೭	೦	೧	೭	೦	೧	೭
೭	೦	೧	೧೧	೦	೧	೧೦	೦	೧	೧೦	೦	೧	೯
೮	೦	೨	೧	೦	೨	೦	೦	೨	೦	೦	೨	೦
೯	೦	೨	೪	೦	೨	೩	೦	೨	೩	೦	೨	೨
೧೦	೦	೨	೭	೦	೨	೬	೦	೨	೬	೦	೨	೫
೧೧	೦	೨	೧೦	೦	೨	೯	೦	೨	೯	೦	೨	೮
೧೨	೦	೩	೧	೦	೩	೧	೦	೩	೧	೦	೩	೧
೧೩	೦	೩	೪	೦	೩	೪	೦	೩	೪	೦	೩	೩
೧೪	೦	೩	೭	೦	೩	೭	೦	೩	೭	೦	೩	೬
೧೫	೦	೩	೧೦	೦	೩	೧೦	೦	೩	೧೦	೦	೩	೯
೧೬	೦	೪	೧	೦	೪	೧	೦	೪	೧	೦	೪	೦
೧೭	೦	೪	೪	೦	೪	೪	೦	೪	೪	೦	೪	೩
೧೮	೦	೪	೭	೦	೪	೭	೦	೪	೭	೦	೪	೬
೧೯	೦	೪	೧೦	೦	೪	೧೦	೦	೪	೧೦	೦	೪	೯
೨೦	೦	೫	೧	೦	೫	೧	೦	೫	೧	೦	೫	೦
೨೧	೦	೫	೪	೦	೫	೪	೦	೫	೪	೦	೫	೩
೨೨	೦	೫	೭	೦	೫	೭	೦	೫	೭	೦	೫	೬
೨೩	೦	೫	೧೦	೦	೫	೧೦	೦	೫	೧೦	೦	೫	೯
೨೪	೦	೬	೧	೦	೬	೧	೦	೬	೧	೦	೬	೦
೨೫	೦	೬	೪	೦	೬	೪	೦	೬	೪	೦	೬	೩
೨೬	೦	೬	೭	೦	೬	೭	೦	೬	೭	೦	೬	೬
೨೭	೦	೬	೧೦	೦	೬	೧೦	೦	೬	೧೦	೦	೬	೯
೨೮	೦	೭	೧	೦	೭	೧	೦	೭	೧	೦	೭	೦
೨೯	೦	೭	೪	೦	೭	೪	೦	೭	೪	೦	೭	೩
೩೦	೦	೭	೭	೦	೭	೭	೦	೭	೭	೦	೭	೬
೩೧	೦	೭	೧೦	೦	೭	೧೦	೦	೭	೧೦	೦	೭	೯
೩೨	೦	೮	೧	೦	೮	೧	೦	೮	೧	೦	೮	೦
೩೩	೦	೮	೪	೦	೮	೪	೦	೮	೪	೦	೮	೩
೩೪	೦	೮	೭	೦	೮	೭	೦	೮	೭	೦	೮	೬
೩೫	೦	೮	೧೦	೦	೮	೧೦	೦	೮	೧೦	೦	೮	೯
೩೬	೦	೯	೧	೦	೯	೧	೦	೯	೧	೦	೯	೦
೩೭	೦	೯	೪	೦	೯	೪	೦	೯	೪	೦	೯	೩
೩೮	೦	೯	೭	೦	೯	೭	೦	೯	೭	೦	೯	೬
೩೯	೦	೯	೧೦	೦	೯	೧೦	೦	೯	೧೦	೦	೯	೯
೪೦	೦	೧೦	೧	೦	೧೦	೧	೦	೧೦	೧	೦	೧೦	೦
೪೧	೦	೧೦	೪	೦	೧೦	೪	೦	೧೦	೪	೦	೧೦	೩
೪೨	೦	೧೦	೭	೦	೧೦	೭	೦	೧೦	೭	೦	೧೦	೬
೪೩	೦	೧೦	೧೦	೦	೧೦	೧೦	೦	೧೦	೧೦	೦	೧೦	೯
೪೪	೦	೧೧	೧	೦	೧೧	೧	೦	೧೧	೧	೦	೧೧	೦
೪೫	೦	೧೧	೪	೦	೧೧	೪	೦	೧೧	೪	೦	೧೧	೩
೪೬	೦	೧೧	೭	೦	೧೧	೭	೦	೧೧	೭	೦	೧೧	೬
೪೭	೦	೧೧	೧೦	೦	೧೧	೧೦	೦	೧೧	೧೦	೦	೧೧	೯
೪೮	೦	೧೨	೧	೦	೧೨	೧	೦	೧೨	೧	೦	೧೨	೦
೪೯	೦	೧೨	೪	೦	೧೨	೪	೦	೧೨	೪	೦	೧೨	೩
೫೦	೦	೧೨	೭	೦	೧೨	೭	೦	೧೨	೭	೦	೧೨	೬
೫೧	೦	೧೨	೧೦	೦	೧೨	೧೦	೦	೧೨	೧೦	೦	೧೨	೯
೫೨	೦	೧೩	೧	೦	೧೩	೧	೦	೧೩	೧	೦	೧೩	೦
೫೩	೦	೧೩	೪	೦	೧೩	೪	೦	೧೩	೪	೦	೧೩	೩
೫೪	೦	೧೩	೭	೦	೧೩	೭	೦	೧೩	೭	೦	೧೩	೬
೫೫	೦	೧೩	೧೦	೦	೧೩	೧೦	೦	೧೩	೧೦	೦	೧೩	೯
೫೬	೦	೧೪	೧	೦	೧೪	೧	೦	೧೪	೧	೦	೧೪	೦
೫೭	೦	೧೪	೪	೦	೧೪	೪	೦	೧೪	೪	೦	೧೪	೩
೫೮	೦	೧೪	೭	೦	೧೪	೭	೦	೧೪	೭	೦	೧೪	೬
೫೯	೦	೧೪	೧೦	೦	೧೪	೧೦	೦	೧೪	೧೦	೦	೧೪	೯
೬೦	೦	೧೫	೧	೦	೧೫	೧	೦	೧೫	೧	೦	೧೫	೦
೬೧	೦	೧೫	೪	೦	೧೫	೪	೦	೧೫	೪	೦	೧೫	೩
೬೨	೦	೧೫	೭	೦	೧೫	೭	೦	೧೫	೭	೦	೧೫	೬
೬೩	೦	೧೫	೧೦	೦	೧೫	೧೦	೦	೧೫	೧೦	೦	೧೫	೯
೬೪	೦	೧೬	೧	೦	೧೬	೧	೦	೧೬	೧	೦	೧೬	೦
೬೫	೦	೧೬	೪	೦	೧೬	೪	೦	೧೬	೪	೦	೧೬	೩
೬೬	೦	೧೬	೭	೦	೧೬	೭	೦	೧೬	೭	೦	೧೬	೬
೬೭	೦	೧೬	೧೦	೦	೧೬	೧೦	೦	೧೬	೧೦	೦	೧೬	೯
೬೮	೦	೧೭	೧	೦	೧೭	೧	೦	೧೭	೧	೦	೧೭	೦
೬೯	೦	೧೭	೪	೦	೧೭	೪	೦	೧೭	೪	೦	೧೭	೩
೭೦	೦	೧೭	೭	೦	೧೭	೭	೦	೧೭	೭	೦	೧೭	೬
೭೧	೦	೧೭	೧೦	೦	೧೭	೧೦	೦	೧೭	೧೦	೦	೧೭	೯
೭೨	೦	೧೮	೧	೦	೧೮	೧	೦	೧೮	೧	೦	೧೮	೦
೭೩	೦	೧೮	೪	೦	೧೮	೪	೦	೧೮	೪	೦	೧೮	೩
೭೪	೦	೧೮	೭	೦	೧೮	೭	೦	೧೮	೭	೦	೧೮	೬
೭೫	೦	೧೮	೧೦	೦	೧೮	೧೦	೦	೧೮	೧೦	೦	೧೮	೯
೭೬	೦	೧೯	೧	೦	೧೯	೧	೦	೧೯	೧	೦	೧೯	೦
೭೭	೦	೧೯	೪	೦	೧೯	೪	೦	೧೯	೪	೦	೧೯	೩
೭೮	೦	೧೯	೭	೦	೧೯	೭	೦	೧೯	೭	೦	೧೯	೬
೭೯	೦	೧೯	೧೦	೦	೧೯	೧೦	೦	೧೯	೧೦	೦	೧೯	೯
೮೦	೦	೨೦	೧	೦	೨೦	೧	೦	೨೦	೧	೦	೨೦	೦
೧೦೦	೧	೪	೬	೧	೪	೬	೧	೪	೬	೧	೪	೬
೨೦೦	೨	೭	೧	೨	೭	೧	೨	೭	೧	೨	೭	೧
೩೦೦	೪	೧೧	೭	೪	೧೧	೭	೪	೧೧	೭	೪	೧೧	೭
೪೦೦	೫	೧೫	೧೨	೫	೧೫	೧೨	೫	೧೫	೧೨	೫	೧೫	೧೨
೫೦೦	೭	೧೯	೬	೭	೧೯	೬	೭	೧೯	೬	೭	೧೯	೬

Poetical Anthology ಕಾವ್ಯಮಾಲೆ. ೧ ೦ ೦

Canarese Wall Map of Madras 27×33 in., mounted on cloth with rollers ಸಂಸ್ಥಾನದ ನಕ್ಷೆ (ಬಣ್ಣ ಹಾಕಿದ್ದು) ಗೋಡೆಗೆ ತೂಗಿಸಬಹುದಾ ೨ ೯ ೦

Canarese Wall Map of India (colo inted on cloth with rollers ಕನ್ನಡ ಹೆಸರುಳ್ಳ (ಬಣ್ಣ ಗೋಡೆಗೆ ತೂಗಿಸ ಬಹುದಾದದ್ದು ೩ ೯ ೦

Catechism of Canarese Grammar ೦ ೨ ೦

Canarese School Grammar ಶಾಲಾ ೦ ೪ ೦

Nâgavarma's Canarese Prosody n to the work and an Essay on Canarese Lit tel ನಾಗವರ್ಮ ಛಂದಸ್ಸು ೧ ೦ ೦

1500 Canarese Proverbs ಕರ್ನಾಟ ೦೦ ಗಾದೆಗಳು ಅಡ ಗಿರುತ್ತವೆ ೦ ೪ ೦

Krishnamâchâryâ's Hosagannada r of the Modern Canarese Language, ಕೃಷ್ಣಮಾಚ ಡಿಗನ್ನಡಿ ಎಂಬ ಹೊಸ ಕನ್ನಡ ವ್ಯಾಕರಣ ೧ ೯ ೦

Kêsirâja's Jewel Miror of Gra ary of Nishthûra-sanjayya, edited by the Rev. ಜ ಕವಿಯ ಶಬ್ದಮಣಿ ದರ್ಪಣ ನಿಷ್ಠೂರಸಂಜಯ್ಯನ ವ್ಯಾಖ್ಯಾನ on nd thoroughly revised edition is in the press ಲ್ಲಿದೆ).

English and Canarese School-Di ಕನ್ನಡ ಶಾಲಾ ನಿಘಂಟು. ಘನ ಜಗ್ಗರ ಥೊರೆಯವರಿಂದ ರಚಿಸಲ್ಪಟ್ಟ ಲ, ತಿದ್ದಿ ಹೆಚ್ಚಿಗೆ ಶಬ್ದಗಳನ್ನು ಸೇರಿ ಸಿದ್ದು. ಶಾಲಾ ಹುಡುಗರಿಗೂ ವಿದ್ಯಾರ್ಥಿ ಜನಕರವಾದದ್ದು. ೬ ೦ ೦

Canarese and English School-Di ಂಗ್ಲಿಷು ಶಾಲಾನಿಘಂಟು (in the Press ಛಾಪೆಯಲ್ಲಿದೆ).

English Canarese Dialogues ಇಂಗ್ಲಿಷ ಕನ್ನಡ ಸಂಭಾಷಣ ವಾಕ್ಯಗಳು. ಕಾಗದ ಪತ್ರಾದಿಗಳ ರೀತಿ ಸಹಿತವಾದದ್ದು ೦ ೧೦ ೦

Kannada Penman's Guide ಲೋಕವ್ಯವಹಾರಬೋಧಿನಿ. ದಸ್ತಾವೇಜುಗಳನ್ನು ಬರೆ ಯುವ ಪ ರಿಜಿಸ್ತ್ರಿ ಮಾಡುವ ಕ್ರಮ, ಎವರಣೆ, ಒಕ್ಕಣೆ, ಕಾಗದಪತ್ರಾದಿಗಳ ನಮೂನೆಗಳು ಅಡಗಿರು ವವು (ಎನೇ ತಿದ್ದಲ್ಪಟ್ಟ ಆವೃತಿ) ೦ ೧೨ ೦

A Canarese Guide to Hindustani Conversation ಕನ್ನಡ ಹಿಂದುಸ್ಥಾನಿ ಭಾ ಷಾಮಂಜರಿ ೦ ೨ ೬

Five Hundred Indian Plants ಸಹಸ್ರ ವೃಕ್ಷಾದಿಗಳ ವರ್ಣನೆ ಔಷಧ ಉಪಯೋಗದಲ್ಲಿ ಯೂ ಕೈಗಾರಿಕೆ ಕೆಲಸದಲ್ಲಿಯೂ ಅವವುಗಳ ಹುಟ್ಟನ್ನು ಪರಿಷ್ಕಾರವಾಗಿ ವರ್ಣಿಸಿರುತ್ತದೆ ೨ ೯ ೦

ಅದೇ—ಉದ್ಭಿಜ್ಜ ಸಂಸ್ಥಾನದ ವಿವರಣೆ ಇಲ್ಲದ್ದು ೧ ೦ ೦

A Grammar of the Ancient Dialect of the Canarese Language ಹಳಗನ್ನಡ ವ್ಯಾಕರಣ ಸೂತ್ರಗಳು. ಗ್ರಂಥಪ್ರಯೋಗದ ವಿವರವನ್ನು ವಿವರಿಸಿಯದೆ . ೦ ೬ ೦

Elementary Sanskrit Grammar in Canarese ಸಂಸ್ಕೃತ ಬಾಲವ್ಯಾಕರಣ. ಪಂಡಿತ ಮೆಕ್ಸ್‌ಮಿಲ್ಲರ್, ಥಿಯದೊರ್ ಬೆನ್‌ಪೆ, ಈಶ್ವರ್‌ಚಂದ್ರ ವಿದ್ಯಾಸಾಗರ ಇವರ ಗ್ರಂಥಗಳ ಆಧಾರದಿಂದ ಕನ್ನಡ ಭಾಷೆಯಲ್ಲಿ ರಚಿಸಲ್ಪಟ್ಟದ್ದು ೧ ೦ ೦

Sanskrit Proverbs with Canarese Meanings ಗಾಥಾಮಂಜರಿ. ಸಂಸ್ಕೃತವೂ ಕನ್ನಡವೂ ೦ ೨ ೦

ಮಹಾರಾಣಿ ಚಕ್ರವರ್ತಿನಿಯವರ ಪ್ರಧಾನ ಮಂತ್ರಿಯಾಗಿದ್ದ ಮಾಜಿ ಉಎ. ಇ. ಗ್ಲೆಡ್‌ಸ್ಟನ್ ದೊರೆಯವರು.

ವಿವರಣೆ

Aks 30 App ರಂದ [illegible]

1842ರ ಯಾತ್ರಿಕರ ಪಂಚಾಂಗ

1886 } ಕನ್ನಡ ಪಂಚಾಂಗ
1887 }

1890 } ಕನ್ನಡ ಪಂಚಾಂಗ
1891 }

ಸಹಿ ಮತ್ತು ಶೀರ್ಷಿಕೆ.

ಪೀಠಲಯದ ವಿದ್ವಾಂಸರಿಂದಾ ಗ್ರಂಥ ~~ಪರಿಶೀಲನೆ~~ ಪರಿಷ್ಕರಣೆ
ಪ್ರಾಚ್ಯವಸ್ತು ಇಲಾಖೆಯ ಪತ್ರದಲ್ಲಿ ವಿವರಿಸಿದ್ದು
ವಿಷಯಕ್ಕೆ ಸಂಬಂಧಪಟ್ಟ ಪತ್ರಗಳನ್ನು ಪರಿಶೀಲಿಸಿ
ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

6/9/90

ವಿವರಣೆ

AKS 30 App 80 (ಶಾಶ್ವತ ಪಟ್ಟಿ)

1842 ರ ಯಾತ್ರಿಕರ ಪಂಚಾಂಗ

1886 } ಕನ್ನಡ ಪಂಚಾಂಗ
1887 }

1870 } ಕನ್ನಡ ವಿವರಣೆ
1879 }

ಶ್ರೀ ರಾಮ

ಮೇಲ್ಕಂಡ ಪುಸ್ತಕಗಳು ಗ್ರಂಥ ~~ಪಟ್ಟಿ~~ ಇದ್ದು
ಪ್ರಾಚ್ಯವಸ್ತು
ವಿಮರ್ಶಕರಿಗೆ ಉಪಯೋಗ ಪಡೆದುಕೊಳ್ಳಲು ಸಿದ್ಧವಾಗಿದ್ದು

ಪುಸ್ತಕಗಳ ಪರಿಶೀಲನೆಯ ಕುರಿತಾದ ಸಂಶೋಧನೆಗಳು
~~ಮಾಡಿರುವ~~ ಪ್ರಯೋಜನವಾಗಿದೆ.

6/9/90

ವಿದೇಶಕರು
ಕ್ಷೇತ್ರ
ಸಂ. ಪ್ರ. ಬಳ್ಳಾರಿ

ಬಿಟ್‌ಬಿಸಿ. 30 ಬಿಟಿಬಿ 80

ಪ್ರೀ ಗೇಮಿಂಗ್ ಇಫ್ಲ್ ಕವರ

ಸಂಪ್ರದ - ಮುಕ್ತಾಯ.

ಬಿಡಿಎಸ್. 30 ಎಪಿಪಿಡಿ

ಶ್ರೀ ಗೋಪಿಕಾ ಇಡ್ಲಿ ಕವಿತೆ

ಸಂಗ್ರಹ - ಮುಕ್ತಾಯ.